ಸಂಪುಟ: 04 ಸಂಚಿಕೆ: 149 ಪುಟಗಳು: 08 ಭಾನುವಾರ 11 ಆಗಸ್ಟ್ 2024
www.udayavahini.in epaper.udayavahini.in Udayavahini news Udayavahini news Udayavahini news youtube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ
RNI No. KARKAN/2021/80833
9448225696 +91 8035841833 ₹5

ಮುಂಜಾನೆ ಮಾತು

ಯಾರು ತನ್ನ ಹೃದಯದ ನೆತ್ತರದಿಂದ ಇತರರಿಗೆ ದಾರಿ ನಿರ್ಮಿಸುತ್ತಾನೋ ಅವನೇ ಶ್ರೇಷ್ಠ ವ್ಯಕ್ತಿ

ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

ವಯನಾಡು ದುರಂತ; ಸಹಾಯಹಸ್ತ ಚಾಚುವಂತೆ ಉದ್ಯಮಿಗಳಿಗೆ ಮನವಿ

• ಉದಯವಾಹಿನಿ, ಬೆಂಗಳೂರು

410ಕ್ಕೂ ಅಧಿಕ ಜನರನ್ನು ಬಲಿ ಪಡೆದಿರುವ ವಯನಾಡು ಭೂ ದುರಂತ. ಕೇರಳದಲ್ಲಿ ಸಂಭವಿಸಿದ ಅತ್ಯಂತ ಭೀಕರ ನೈಸರ್ಗಿಕ ವಿಕೋಪಗಳಲ್ಲಿ ಒಂದಾಗಿದೆ. ಭೂಕುಸಿತದಲ್ಲಿ ಸಾವಿರಾರು ಜನರು ನಿರಾಶ್ರಿತರು ಕುಟುಂಬಸ್ಥರು, ಮನೆ ಎಲ್ಲಾವನ್ನೂ ಕಳೆದುಕೊಂಡು ಅನಾಥರಾಗಿ ನಿಂತಿದ್ದಾರೆ. ಇವರ ಕಥೆಯೂ ಮನಕಲುಕುತ್ತಿದ್ದು, ಸಾರ್ವಜನಿಕರು ಹಾಗೂ ಸರ್ಕಾರಗಳು ಇವರ ನೆರವಿಗೆ ಧಾವಿಸುತ್ತಿವೆ. ಈ ಹಿಂದೆ ಕರ್ನಾಟಕ ಸರ್ಕಾರ ನಿರಾಶ್ರಿತರಿಗೆ 100 ಮನೆಗಳನ್ನು ನಿರ್ಮಿಸಿಕೊಡುವುದಾಗಿ ಹೇಳಿತ್ತು. ಅದೇ ರೀತಿ ಇದೀಗ ಸಚಿವ ಎಂ.ಬಿ. ಪಾಟೀಲ್ ರಾಜ್ಯದ ಕೈಗಾರಿಕೋದ್ಯಮಿಗಳು ಧಾವಿಸಿ, ಸಹಾಯಹಸ್ತ ಚಾಚಬೇಕು ಎಂದು ಮನವಿ ಮಾಡಿದ್ದಾರೆ.

ಈ ಕುರಿತು ಪ್ರಕಟಣೆ ಹೊರಡಿಸಿರುವ ಸಚಿವ ಎಂ.ಬಿ. ಪಾಟೀಲ್, ಕಂಡುಕೇಳರಿಯದ ಭೂಕುಸಿತದಿಂದ ನಲುಗಿರುವ ಕೇರಳದ ವಯನಾಡು ಜನತೆಯ ನೆರವಿಗೆ ರಾಜ್ಯದ ಕೈಗಾರಿಕೋದ್ಯಮಿಗಳು ಧಾವಿಸಿ, ಸಹಾಯಹಸ್ತ ಚಾಚಬೇಕು ಎಂದರು.

ಮೇಕೆದಾಟು ಯೋಜನೆ ಅನುಷ್ಠಾನಕ್ಕೆ ತೀವ್ರ ವಿರೋಧ

• ಉದಯವಾಹಿನಿ, ಬೆಂಗಳೂರು

ರಾಜ್ಯದ ಮಹತ್ವಾಕಾಂಕ್ಷಿ ಯೋಜನೆಗಳಲ್ಲಿ ಒಂದಾಗಿರುವ ಮೇಕೆದಾಟು ಯೋಜನೆಗೆ ಪರಿಸರವಾದಿಗಳು ತೀವ್ರ ವಿರೋಧ ವ್ಯಕ್ತಪಡಿಸಿದ್ದಾರೆ. ಈಗಾಗಲೇ ರಾಜ್ಯದಲ್ಲಿ ಹಲವು ಯೋಜನೆಗಳಿಂದಾಗಿ ಆಗುತ್ತಿರುವ ಪ್ರಾಕೃತಿಕ ದುಷ್ಪರಿಣಾಮಗಳನ್ನು ನೋಡುತ್ತಿದ್ದೇವೆ. ಆದ್ದರಿಂದ ಇನ್ನಷ್ಟು ಅನಾವುತ ಆಗುವುದಕ್ಕೆ ಅವಕಾಶ ನೀಡಬಾರದು ಎಂದು ಪರಿಸರಕ್ಕಾಗಿ ನಾವು ಸಂಘಟನೆಯು ನಿರ್ಣಯಿಸಿದೆ.

ಮೇಕೆದಾಟು ಯೋಜನೆಯಲ್ಲಿ 60 ಟಿಎಂಸಿ ನೀರು ಸಂಗ್ರಹಿಸಿ ಅದನ್ನು ವಿದ್ಯುತ್ ಉತ್ಪಾದನೆಗೆ ಬಳಸಿಕೊಳ್ಳಬಹುದು ಎಂದು ಸರ್ಕಾರ ಹೇಳುತ್ತಿದೆ. ಆದರೆ, 60 ಟಿಎಂಸಿ ನೀರು ನೆಪದಲ್ಲಿ ನಾವು 100 ಟಿಎಂಸಿ ನೀರು ಹಿಡಿದಿಟ್ಟುಕೊಳ್ಳಬಹುದಾದ ಅರಣ್ಯವನ್ನು ಕಳೆದುಕೊಳ್ಳಲು ಸಿದ್ಧರಿಲ್ಲ ಎಂದು ಸರ್ಕಾರಕ್ಕೆ ಎಚ್ಚರಿಕೆ ನೀಡಿದೆ. ಪಶ್ಚಿಮಘಟ್ಟದಲ್ಲಿ ಗುಡ್ಡಗಳು ಕುಸಿತ ಮತ್ತು ಕೇರಳದಲ್ಲಿ ಆಗಿರುವ ಅನಾವುತವನ್ನು ನೋಡಿ ಪಾಠ ಕಲಿಯಬೇಕಿದೆ. ಈಗಲೂ ಎಚ್ಚೆತ್ತುಕೊಳ್ಳದಿದ್ದರೆ ಇನ್ನಷ್ಟು ಗಂಡಾಂತರ ತಪ್ಪಿದ್ದಲ್ಲ ಎಂದು ಪರಿಸರವಾದಿಗಳು ಅಭಿಪ್ರಾಯಿಸಿದ್ದಾರೆ. ಮೇಕೆದಾಟು ಯೋಜನೆಯ ಜಾರಿಗೆ ಮುನ್ನಾ ವಾಸ್ತವವನ್ನು ಅರ್ಥ ಮಾಡಿಕೊಳ್ಳಬೇಕು. ನಮ್ಮನ್ನು ತಮಿಳುನಾಡು ವಿರೋಧ ಎಂದರೂ ಪರವಾಗಿಲ್ಲ. ಪರಿಸರದ ದೃಷ್ಟಿಯಿಂದ ಯಾವುದೇ ಕಾರಣಕ್ಕೂ ಮೇಕೆದಾಟು ಯೋಜನೆ ಅನುಷ್ಠಾನಕ್ಕೆ ಅವಕಾಶ ನೀಡುವುದಿಲ್ಲ ಎಂದು ತಿಳಿಸಿದೆ.

ನಿಯಮ ಉಲ್ಲಂಘಿಸಿ ಅರ್ಧಕ್ಕಿಂತ ಹೆಚ್ಚು ಕಸ ಮಣ್ಣಿನಲ್ಲಿ ಸೇರ್ಪಡೆ

• ಉದಯವಾಹಿನಿ, ಬೆಂಗಳೂರು

ನಗರದಿಂದ ಸಾಗಣೆಯಾದ ಮಿಶ್ರ ತ್ಯಾಜ್ಯವನ್ನು ವೈಜ್ಞಾನಿಕವಾಗಿ ವಿಂಗಡಿಸಿ, ಗೊಬ್ಬರ ತಯಾರಿಸಬೇಕಿದ್ದ ಸಂಸ್ಥೆ, ನಿಯಮ ಉಲ್ಲಂಘಿಸಿ ಅರ್ಧಕ್ಕಿಂತ ಹೆಚ್ಚು ಕಸವನ್ನು ಮಣ್ಣಿನಲ್ಲಿ ಹೂಳಿದೆ.

ತ್ಯಾಜ್ಯ ಸಂಸ್ಕರಣೆ ಹಾಗೂ ಅವೈಜ್ಞಾನಿಕ ವಿಲೇವಾರಿಯಿಂದ ದೊಡ್ಡಬೆಳವಂಗಲದ ಚಿಗರೇನಹಳ್ಳಿ ಗ್ರಾಮಸ್ಥರ ಆಕ್ರೋಶಕ್ಕೆ ಗುರಿಯಾಗಿರುವ ಎಂಎಸ್‌ಜಿಪಿ ಇನ್‌ಫ್ರಾಟೆಕ್ ಸಂಸ್ಥೆ ವಿರುದ್ಧ, ನಗರದಿಂದ ತ್ಯಾಜ್ಯ ಸಾಗಣೆ ಮಾಡುವ ಗುತ್ತಿಗೆದಾರರ ಸಂಘವೂ ನಿಯಮ ಉಲ್ಲಂಘಟನೆಯ ಆರೋಪ ಮಾಡಿದೆ. ಎಂಎಸ್‌ಜಿಪಿ ಇನ್‌ಫ್ರಾಟೆಕ್ ಸಂಸ್ಥೆ ಘನ ತ್ಯಾಜ್ಯ ಸಂಸ್ಕರಣೆ, ಭೂಭರ್ತಿಯಲ್ಲಿ ಹಲವು ನಿಯಮಗಳನ್ನು ಉಲ್ಲಂಘಿಸಿರುವ ಆರೋಪದ ಕುರಿತು ತನಿಖೆ ನಡೆಸಬೇಕು ಎಂದು ಬೆಂಗಳೂರು ಮಹಾನಗರ ಸ್ವಚ್ಛತೆ ಮತ್ತು ಲಾರಿ ಮಾಲೀಕರು, ಗುತ್ತಿಗೆದಾರರ ಸಂಘ ಮನವಿ ಸಲ್ಲಿಸಿದೆ.

ವಾಲ್ಮೀಕಿ ನಿಗಮದ ಹಗರಣ: ಇಡಿ ಕಸ್ಟಡಿಗೆ ನೀಡುವಂತೆ ಆದೇಶ

• ಉದಯವಾಹಿನಿ, ಬೆಂಗಳೂರು

ವಾಲ್ಮೀಕಿ ನಿಗಮದ ಹಗರಣದಲ್ಲಿ ಹೈದರಾಬಾದ್ ಮೂಲದ ಆರೋಪಿ ಸತ್ಯನಾರಾಯಣ ವರ್ಮಾನನ್ನು ಕಸ್ಟಡಿಗೆ ಕೋರಿ ಜಾರಿ ನಿರ್ದೇಶನಾಲಯ (ಇಡಿ) ಹೈಕೋರ್ಟ್‌ಗೆ ರಿಟ್ ಅರ್ಜಿ ಸಲ್ಲಿಸಿದ್ದು, ಇದೀಗ ಕೋರ್ಟ್ ಆಗಸ್ಟ್ 13ರಂದು ಇಡಿ ಕಸ್ಟಡಿಗೆ ನೀಡುವಂತೆ ಆದೇಶ ಹೊರಡಿಸಿದೆ. ಇಡಿ ಕಸ್ಟಡಿಗೆ ನೀಡುವಂತೆ ಸೆಷನ್ಸ್ ಕೋರ್ಟ್ ಆದೇಶವಿದ್ದರೂ ಪೊಲೀಸ್ ಕಸ್ಟಡಿಗೆ ಪಡೆಯಲಾಗಿತ್ತು. ಹೀಗಾಗಿ ಪೊಲೀಸರ ಕ್ರಮಕ್ಕೆ ಇಡಿ ಪರ ಎಸ್‌ಪಿಪಿ ಪ್ರಸನ್ನಕುಮಾರ್ ಆಕ್ಷೇಪ ವ್ಯಕ್ತಪಡಿಸಿದರು. ಇದೀಗ ಇಡಿ ತನಿಖೆ ತಪ್ಪಿಸಲು ಪೊಲೀಸರು ತಂತ್ರ ಹೂಡಿದಂತಿದೆ ಎಂದು ನ್ಯಾ.ಎಂ.ನಾಗಪ್ರಸನ್ನ ಅವರಿದ್ದ ಹೈಕೋರ್ಟ್ ಪೀಠ ಅಭಿಪ್ರಾಯ ಪಟ್ಟಿದೆ. ಆಗಸ್ಟ್ 12ಕ್ಕೆ ಪೊಲೀಸ್ ಕಸ್ಟಡಿ ಮುಕ್ತಾಯಗೊಳ್ಳಲಿದ್ದು, ಆಗಸ್ಟ್ 13 ರಂದು ಜಾರಿ ನಿರ್ದೇಶನಾಲಯ ಕಸ್ಟಡಿಗೆ ನೀಡುವಂತೆ ಆದೇಶಿಸಲಾಗಿದೆ. ಹೈದರಾಬಾದ್ ಮೂಲದ ಸತ್ಯನಾರಾಯಣ ನನ್ನು ಎಸ್‌ಐಟಿ ಅಧಿಕಾರಿಗಳು ಸದ್ಯ ವಶಕ್ಕೆ ಪಡೆದು ವಿಚಾರಣೆ ಮಾಡುತ್ತಿದ್ದಾರೆ.

ಮುಡಾ ಹಗರಣ, ವಾಲ್ಮೀಕಿ ಹಗರಣ ಖಂಡಿಸಿ ಬಿಜೆಪಿ ಮತ್ತು ಜೆಡಿಎಸ್ ಜಂಟಿಯಾಗಿ ನಡೆಸಿದ ಎಂಟು ದಿನಗಳ ಪಾದಯಾತ್ರೆ ಅಂತ್ಯಗೊಂಡಿದೆ. ಶನಿವಾರ ಬೆಂಗಳೂರಿನ ಕೆಂಗೇರಿಯಿಂದ ಆರಂಭಗೊಂಡ ಈ ಪಾದಯಾತ್ರೆ ರಾಮನಗರ, ಮಂಡ್ಯ ಮಾರ್ಗವಾಗಿ ಸಾಗಿ ಮೈಸೂರಿನಲ್ಲಿ ಸಮಾವೇಶಗೊಂಡಿದೆ. ಹಲವು ಬೆಳವಣಿಗೆ, ಘಟನಾವಳಿಗೆಗಳಿಗೆ ಪಾದಯಾತ್ರೆ ಸಾಕ್ಷಿಯಾಗಿದೆ.

ಮೈಸೂರಲ್ಲಿ ದೋಸ್ತಿಗಳ ಶಕ್ತಿ ಪ್ರದರ್ಶನ, ಕಾಂಗ್ರೆಸ್ ವಿರುದ್ಧ ಗರ್ಜನೆ

ಮುಡಾ, ವಾಲ್ಮೀಕಿ ಹಗರಣ ಖಂಡಿಸಿ 8 ದಿನಗಳ ದೋಸ್ತಿ ಪಾದಯಾತ್ರೆ ಅಂತ್ಯ..!

ಮೈಸೂರು ರಣಾಂಗಣ ಜೋರಾದ ವಾಗ್ಬಾಣ

ಕೇಸರಿ ಪಡೆ ಭರ್ಜರಿ ಸಿದ್ಧತೆ

1. ಬಿಜೆಪಿ- ಜೆಡಿಎಸ್ ನ ಸುಳ್ಳು ಆರೋಪಗಳಿಗೆ ಹೆದರಲ್ಲ, ಈ ಆರೋಪಗಳ ವಿರುದ್ಧ ರಾಜಕೀಯ ಹಾಗೂ ಕಾನೂನು ಹೋರಾಟಕ್ಕೆ ಸಿದ್ಧ
2. ಬಿಜೆಪಿ ಮತ್ತು ಜೆಡಿಎಸ್ ವಿರುದ್ಧ ತೀಕ್ಷ್ಣವಾಗಿ ಹರಿಹಾಯ್ದು ಕಾಂಗ್ರೆಸ್. ಸುಳ್ಳು ಆರೋಪಗಳನ್ನು ಆಧರಿಸಿ ಮಾಡುತ್ತಿರುವ ಪಾದಯಾತ್ರೆ
3. ಸಿದ್ದರಾಮಯ್ಯನಿಗೆ ಕಪ್ಪು ಬಳಿಯಲು ಪ್ರಯತ್ನಿಸುತ್ತಿದ್ದಾರೆ

1. ಮೈಸೂರು ಪಾದಯಾತ್ರೆಯಲ್ಲಿ ಜೆ.ದೇವರಾಜಗೌಡ ಭಾಗಿ
2. ಡಿಕೆ ಶಿವಕುಮಾರ್ ವಿರುದ್ಧ ಆರೋಪ ಮಾಡಿದ್ದ ಎಚ್‌ಡಿಕೆ ಕನಕಪುರದಲ್ಲಿ ತಿರುಗೇಟು ನೀಡಿದ ಡಿಸಿಎಂ ಡಿಕೆಶಿ
3. ನನ್ನ ಹಾಗೂ ಎಸ್‌ಎಂ ಕೃಷ್ಣ ಅವರ ನಡುವಣ ಸಂಬಂಧ ಏನು ಎಂದು ಕುಮಾರಸ್ವಾಮಿಗೆ ಏನು ಗೊತ್ತಿದೆ ಎಂದು ಪ್ರಶ್ನೆ

• ಉದಯವಾಹಿನಿ, ಬೆಂಗಳೂರು

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ)ದಲ್ಲಿ ಅಕ್ರಮ ನಿವೇಶನ ಹಂಚಿಕೆ ಹಗರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ರಾಜೀನಾಮೆಗೆ ಒತ್ತಾಯಿಸಿ ಬಿಜೆಪಿ-ಜೆಡಿಎಸ್ ಮೈತ್ರಿಪಕ್ಷವು ಬೃಹತ್ ಸಮಾವೇಶದಲ್ಲಿ ಶಕ್ತಿಪ್ರದರ್ಶಿಸಿ ಒಗ್ಗಟ್ಟಿನ ಮಂತ್ರದ ಮೂಲಕ ರಾಜ್ಯ ಸರ್ಕಾರಕ್ಕೆ ಎಚ್ಚರಿಕೆ ಸಂದೇಶವನ್ನು ರವಾನಿಸಿದೆ. ನಮ ಹೋರಾಟ ಮೈಸೂರಿಗೆ ಮಾತ್ರ ಸೀಮಿತವಾಗುವುದಿಲ್ಲ. ಸಿದ್ದರಾಮಯ್ಯನವರ ರಾಜೀನಾಮೆ, ಸರ್ಕಾರದ ಹಗರಣಗಳನ್ನು ಮುಂದಿಟ್ಟುಕೊಂಡು ಬರುವ ದಿನಗಳಲ್ಲಿ ರಾಜ್ಯಾದ್ಯಂತ ಭ್ರಷ್ಟ ಸರ್ಕಾರದ ವಿರುದ್ಧ ಹೋರಾಟ ಮಾಡುತ್ತೇವೆ ಎಂಬ ಶಪಥವನ್ನು ಉಭಯ ಪಕ್ಷಗಳ ಮುಖಂಡರು ಮಾಡಿದ್ದಾರೆ.

ಸಾಂಸ್ಕೃತಿಕ ನಗರಿ ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ನಡೆದ ಮೈಸೂರು ಚಲೋ ಸಮಾರೋಪ ಸಮಾರಂಭವು ಕಾಂಗ್ರೆಸ್ ನಡೆಸಿದ್ದ ಸಮಾವೇಶಕ್ಕೆ ಭರ್ಜರಿ ತಿರುಗೇಟು ಎನ್ನುವಂತೆ ಬೃಹತ್ ಸಂಖ್ಯೆಯಲ್ಲಿ ಕಾರ್ಯಕರ್ತರು ಜಮಾಯಿಸಿದ್ದರು. ದಾವಣಗೆರೆ, ಶಿವಮೊಗ್ಗ, ತುಮಕೂರು, ಚಿತ್ರದುರ್ಗ, ಕೋಲಾರ, ಚಿಕ್ಕಬಳ್ಳಾಪುರ, ರಾಮನಗರ, ಮಂಡ್ಯ, ಚಾಮರಾಜನಗರ ಸೇರಿದಂತೆ ರಾಜ್ಯಾದ್ಯಂತ ಸುಮಾರು ಒಂದು ಲಕ್ಷಕ್ಕೂ ಹೆಚ್ಚಿನ ಕಾರ್ಯಕರ್ತರು ಜಮಾಯಿಸಿದ್ದರು. ನಾಡಿನ ಮೂಲೆ ಮೂಲೆಗಳಿಂದಲೂ ಭಾರೀ ಸಂಖ್ಯೆಯ ಕಾರ್ಯಕರ್ತರು, ಅಭಿಮಾನಿಗಳು ಆಗಮಿಸಿದ್ದರಿಂದ ಮೈಸೂರು ಅಕ್ಷರಶಃ ಕೇಸರಿ, ಹಸಿರುಮಯವಾಗಿತ್ತು. ವೇದಿಕೆಯಲ್ಲಿ ಮಾತನಾಡಿದ ಎರಡೂ ಪಕ್ಷಗಳ ಮುಖಂಡರು ಕಾಂಗ್ರೆಸ್ ಸರ್ಕಾರದ ವಿರುದ್ಧ ಬೆಂಕಿ ಉಗುಳಿದರು. ಮಾಜಿ ಮುಖ್ಯಮಂತ್ರಿಗಳಾದ ಯಡಿಯೂರಪ್ಪ, ಜಗದೀಶ್ ಶೆಟ್ಟರ್, ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ, ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ಆರ್.ಅಶೋಕ್, ಅಶ್ವತ್ಥ ನಾರಾಯಣ, ಬಿ.ಶ್ರೀರಾಮುಲು ಮತ್ತಿತರರು ಬಿಜೆಪಿ ಪರವಾಗಿ ಮಾತನಾಡಿದರು. ಜೆಡಿಎಸ್ ವತಿಯಿಂದ ಕುಮಾರಸ್ವಾಮಿ, ಜಿ.ಟಿ.ದೇವೇಗೌಡ, ಸುರೇಶ್ ಬಾಬು, ನಿಖಿಲ್‌ಕುಮಾರಸ್ವಾಮಿ ಮತ್ತಿತರರು ಸರ್ಕಾರದ ವಿರುದ್ಧ ಕೆಂಡಕಾರಿದರು.

ಸಿಎಂ ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್, ರಾಜ್ಯ ಸರ್ಕಾರದ ಹಗರಣಗಳನ್ನೇ ಗುರಿಯಾಗಿಟ್ಟುಕೊಂಡು ದೋಸ್ತಿ ಪಕ್ಷಗಳ ಮುಖಂಡರು ಕಾಂಗ್ರೆಸ್ ಸರ್ಕಾರ ಭ್ರಷ್ಟಾಚಾರದಿಂದ ಕೂಡಿದೆ. ಜನರಿಗೆ ಸುಳ್ಳು ಭರವಸೆ ಕೊಟ್ಟು ಅಧಿಕಾರಕ್ಕೆ ಬಂದಿರುವ ಇವರನ್ನು ಮನೆ ಕಳುಹಿಸುವವರೆಗೂ ನಮ ಹೋರಾಟ ನಿಲ್ಲುವುದಿಲ್ಲ ಎಂದು ವಾಗ್ದಾನ ಮಾಡಿದರು. ಮಿಸ್ಟರ್ ಕ್ಲೀನ್ ಇಮೇಜ್ ಖ್ಯಾತಿಯ ಸಿದ್ದರಾಮಯ್ಯ ಹಾಗೂ ಅವರ ಕುಟುಂಬದ ಮೇಲೆ ಅಕ್ರಮ ಡಿನೋಟಿಫಿಕೇಷನ್ ಆರೋಪ ಕೇಳಿಬಂದಿದೆ. ಅವರು ನೈತಿಕ ಹೊಣೆ ಹೊತ್ತು ತಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು.

ಅಲ್ಲಿಯವರೆಗೂ ನಾವು ನಮ ಹೋರಾಟವನ್ನು ಕೈಬಿಡುವ ಪ್ರಶ್ನೆಯೇ ಇಲ್ಲ ಎಂದು ಪುನರುಚ್ಚರಿಸಿದರು. ನಮಲ್ಲಿ ಸಣ್ಣಪುಟ್ಟ ಭಿನ್ನಾಭಿಪ್ರಾಯಗಳಿರಬಹುದು. ಅದನ್ನು ಹೇಗೆ ಸರಿಪಡಿಸಿಕೊಳ್ಳಬೇಕೆಂಬುದು ನಮಗೆ ಗೊತ್ತು. ನಮ ಹೋರಾಟ ಕಾಂಗ್ರೆಸ್ ಸರ್ಕಾರದ ವಿರುದ್ಧವೇ ಹೊರತು ಯಾವುದೇ ಒಬ್ಬ ವ್ಯಕ್ತಿಯ ಮೇಲಲ್ಲ ಎಂದು ಸ್ಪಷ್ಟಪಡಿಸಿದರು. ಭ್ರಷ್ಟಾಚಾರ ರಹಿತ ಆಡಳಿತ ನೀಡುತ್ತೇವೆ ಎಂದು ಅಧಿಕಾರ ಹಿಡಿದಿರುವ ಕಾಂಗ್ರೆಸ್ ಎಲ್ಲಾ ರಾಜ್ಯಗಳಲ್ಲೂ ವಿಫಲವಾಗಿದೆ. ಲಂಚ ನೀಡದಿದ್ದರೆ ಯಾವ ಕೆಲಸವೂ ಆಗುವುದಿಲ್ಲ. ಸರ್ಕಾರ ಆದಷ್ಟು ಬೇಗ ತೊಲಗಿದರೆ ಸಾಕು ಎಂದು ಜನರು ಹಿಡಿಶಾಪ ಹಾಕುತ್ತಿದ್ದಾರೆ ಎಂದು ಆರೋಪ ಮಾಡಿದರು.

ಅದರಲ್ಲೂ ಕುಮಾರಸ್ವಾಮಿಯವರು ತಮ ಭಾಷಣದಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಪ್ರತಿಯೊಂದು ಆರೋಪಗಳಿಗೆ ತಿರುಗೇಟು ನೀಡಿದರು. ಈ ವೇಳೆ ನೆರೆದಿದ್ದ ಕಾರ್ಯಕರ್ತರಿಂದ ಹರ್ಷೋದ್ಗಾರ ಮುಗಿಲುಮುಟ್ಟಿತು. ಇದಕ್ಕೂ ಮುನ್ನ ಎಂಟು ದಿನಗಳ ಹಿಂದೆ ಕೆಂಗೇರಿಯಿಂದ ಆರಂಭವಾಗಿದ್ದ ಪಾದಯಾತ್ರೆ ಬೆಳಗ್ಗೆ ಮೈಸೂರಿನ ಕೊಲಂಬಿಯಾ ಏಷಿಯಾ ಜಂಕ್ಷನ್‌ನಿಂದ ಆರಂಭವಾಯಿತು. ದೋಸ್ತಿ ಪಕ್ಷಗಳ ಮುಖಂಡರು, ಕಾರ್ಯಕರ್ತರು ಸರ್ಕಾರದ ವಿರುದ್ಧ ಧಿಕ್ಕಾರದ ಘೋಷಣೆ ಕೂಗುತ್ತಾ ಎರಡೂ ಪಕ್ಷಗಳ ನಾಯಕರಿಗೆ ಜೈಕಾರ ಹಾಕಿಕೊಂಡು ವೇದಿಕೆಗೆ ಆಗಮಿಸಿದರು.

ಪೊಲೀಸ್ ಬಿಗಿ ಭದ್ರತೆ

ಮೈಸೂರು ಚಲೋ ಪಾದಯಾತ್ರೆಯ ಸಮಾರೋಪ ಸಮಾರಂಭದಲ್ಲಿ ಹೆಚ್ಚಿನ ಜನ ಭಾಗವಹಿಸುವ ಹಿನ್ನೆಲೆ ಮಹಾರಾಜ ಕಾಲೇಜು ಮೈದಾನದಲ್ಲಿ ಹಾಗೂ ಸುತ್ತಮುತ್ತ ನಾಲ್ಕು ಹಂತದ ಭದ್ರತೆ, ಪ್ರಮುಖ ಸರ್ಕಲ್‌ಗಳಲ್ಲಿ ಭದ್ರತೆ ಒದಗಿಸಲಾಗಿತ್ತು. ವಾಹನ ನಿಲುಗಡೆ, ಬದಲಿ ಸಂಚಾರ ಮಾರ್ಗಗಳ ವ್ಯವಸ್ಥೆಯನ್ನು ಮಾಡಲಾಗಿತ್ತು. ಮೈಸೂರು ಚಲೋ ಸಮಾವೇಶದ ಭದ್ರತೆಗೆ 4,500 ಮಂದಿ ಪೊಲೀಸರು, ಮೂವರು ಡಿವೈಎಸ್ಪಿ, 22 ಇನ್ಸ್ಪೆಕ್ಟರ್‌ಗಳು , 175 ಎಸ್‌ಐ, 100 ಜನ ಕಮಾಂಡೋಗಳು , 500 ಹೋಂ ಗಾರ್ಡ್ಸ್‌ಗಳು ಹಾಗೂ ಕೆಎಸ್ ಆರ್‌ಪಿ ಜೊತೆಗೆ ಸಿಎಆರ್ ತುಕಡಿಗಳನ್ನು ನಿಯೋಜಿಸಲಾಗಿತ್ತು.

ರಾಜಕೀಯವಾಗಿ ಮಣಿಸಲು ಬಿಜೆಪಿ ಜೆಡಿಎಸ್ ತಂತ್ರ

ಜನರ ಆಶೀರ್ವಾದದಿಂದ ಅಧಿಕಾರಕ್ಕೆ ಬಂದಿರುವ ಸರ್ಕಾರವನ್ನು ಅಸ್ಥಿರಗೊಳಿಸಲು ಸಂಚು ಹೂಡಿದ್ದಾರೆ. ಸುಳ್ಳು ಆರೋಪಗಳಿಂದ ನನ್ನ ಮೇಲೆ ಕಪ್ಪು ಬಳಿದರೆ, ರಾಜಕೀಯವಾಗಿ ನನ್ನನ್ನು ಮಣಿಸಿ ಲಾಭ ಪಡೆಯಬಹುದು ಎಂಬ ಭ್ರಮೆಯಲ್ಲಿದ್ದಾರೆ. ಬಿಜೆಪಿ ಜೆಡಿಎಸ್ ನವರ ಹಗರಣಗಳು ಬೇಕಾದಷ್ಟಿದ್ದು ಅವುಗಳನ್ನು ಬಯಲಿಗೆಳೆಯುತ್ತೇವೆ. ಮಾಜಿ ಮುಖ್ಯಮಂತ್ರಿಗಳಾದ ಕುಮಾರಸ್ವಾಮಿ, ಯಡಿಯೂರಪ್ಪ ಸೇರಿದಂತೆ ಹಲವರ ಮೇಲೆ ಇರುವ ಹಗರಣಗಳ ವಿರುದ್ಧ ತನಿಖೆ ಕೈಗೊಳ್ಳಲಾಗುತ್ತಿದ್ದು, ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದರು.

ಬಿಜೆಪಿ ಪಾದಯಾತ್ರೆ ಕೊನೆಯ ದಿನ

ಮುಡಾ ಹಾಗೂ ವಾಲ್ಮೀಕಿ ಹಗರಣ ಖಂಡಿಸಿ ಬಿಜೆಪಿ - ಜೆಡಿಎಸ್ ಪಾದಯಾತ್ರೆಗೆ ಶನಿವಾರ ಕೊನೆಯ ದಿನವಾಗಿದೆ. ಶನಿವಾರ ಮೈಸೂರಿನಲ್ಲಿ ಬೃಹತ್ ಸಮಾವೇಶವನ್ನು ದೋಸ್ತಿಗಳು ಹಮ್ಮಿಕೊಂಡಿದ್ದಾರೆ. ಈ ಸಮಾವೇಶದ ಮೂಲಕ ಸಿಎಂ ಸಿದ್ದರಾಮಯ್ಯ ಅವರ ರಾಜೀನಾಮೆಗೆ ಆಗ್ರಹಿಸಲಿದ್ದಾರೆ. ಮತ್ತೊಂದು ಕಡೆಯಲ್ಲಿ ಮೈಸೂರಿನಲ್ಲಿ ಶುಕ್ರವಾರ ಜನಾಂದೋಲನ ಸಭೆಯನ್ನು ಸಿದ್ದರಾಮಯ್ಯ ಹಮ್ಮಿಕೊಂಡಿದ್ದರು. ಸಾಕಷ್ಟು ಸಂಖ್ಯೆಯಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಸಿದ್ದರಾಮಯ್ಯ ಅಭಿಮಾನಿಗಳು ಭಾಗಿಯಾಗಿದ್ದರು. ಈ ಸಮಾವೇಶದ ಮೂಲಕ ಸಿದ್ದರಾಮಯ್ಯ ವಿರೋಧಿ ಬಣಕ್ಕೆ ಎಚ್ಚರಿಕೆ ನೀಡಿದ್ದಾರೆ. ಆದರೆ ಇದರ ಪರಿಣಾಮ ಏನಾಗಲಿದೆ ಎಂಬುವುದು ಕುತೂಹಲ ಕೆರಳಿಸಿದೆ. ಈ ನಡುವೆ ಬಿಜೆಪಿ ಹಾಗೂ ಜೆಡಿಎಸ್ ಮತ್ತಷ್ಟು ಹೋರಾಟವನ್ನು ಸಿಎಂ ವಿರುದ್ಧ ರೂಪಿಸಲು ಸಿದ್ಧತೆ ಮಾಡಿಕೊಂಡಿದೆ. ಅದನ್ನು ಎದುರಿಸಲು ಸಿಎಂ ಹಾಗೂ ಕಾಂಗ್ರೆಸ್ ಕೂಡಾ ತಂತ್ರಗಾರಿಕೆ ನಡೆಸುತ್ತಿದೆ.

ಸರ್ಕಾರಿ ಕಚೇರಿಗಳಲ್ಲಿ ಲಂಚಕ್ಕಾಗಿ ಮಧ್ಯವರ್ತಿಗಳ ನೆರವು, ಹೊಸ ಟ್ರೆಂಡ್

• ಉದಯವಾಹಿನಿ, ಬೆಂಗಳೂರು

ಭ್ರಷ್ಟಾಚಾರಕ್ಕಾಗಿ ಸಂಭಾವ್ಯ ಅಪಾಯದಿಂದ ರಕ್ಷಿಸಿಕೊಳ್ಳಲು ಸರ್ಕಾರಿ ನೌಕರರು ಮಧ್ಯವರ್ತಿಗಳನ್ನು ನೆರವು ತೆಗೆದುಕೊಳ್ಳುತ್ತಿರುವುದು ಇತ್ತೀಚಿನ ಹೊಸ ಪ್ರವೃತ್ತಿಯಾಗಿದೆ ಎಂದು ಲೋಕಾಯುಕ್ತ ವಿಶೇಷ ನ್ಯಾಯಾಲಯ ಹೇಳಿದೆ. ಬೆಂಗಳೂರು ದಕ್ಷಿಣದ ವಿಶೇಷ ತಹಶೀಲ್ದಾರ್ ವಿ. ನಾಗರಾಜ್ ಸೇರಿದಂತೆ ನಾಲ್ವರು ಆರೋಪಿತ ಅಧಿಕಾರಿಗಳ ಜಾಮೀನು ಅರ್ಜಿಯನ್ನು ನ್ಯಾಯಾಲಯ ವಜಾಗೊಳಿಸಿದೆ.

ನಾಗರಾಜ್, ಶಿರಸ್ತೇದಾರ್ (ಮ್ಯಾನೇಜರ್) ಎಂ. ಮಂಜುನಾಥ, ಪ್ರಥಮ ದರ್ಜೆ ಸಹಾಯಕಿ

ಸಿದ್ಧಸೂಕ್ತಿ

ಡಾ ಆರೂಢಭಾರತೀ ಸ್ವಾಮೀಜಿ
ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ ರಾಮೋಹಳ್ಳಿ

ಬಾಂಗ್ಲಾ ದೇಶದ ದಂಗೆ

ಇತ್ತೀಚೆಗೆ ಬಾಂಗ್ಲಾ ದೇಶದಲ್ಲಿ ನಡೆದ ನಡೆಯುತ್ತಿರುವ ದಂಗೆಯ ಸನ್ನಿವೇಶಗಳನ್ನು ಗಮನಿಸಿದರೆ ಸಾತ್ತ್ವಿಕ ಬದುಕಿಗೆ ಉಳಿವಿದೆಯೇ ಎಂಬ ಆತಂಕ. ಲಂಗು ಲಗಾಮಿಲ್ಲದ ದಂಗೆಯ ನಡೆ ಕಂಡೇ ದಂಗಾದ ಪ್ರಧಾನಿ ಶೇಖ್ ಹಸೀನಾ ರಾಜೀನಾಮೆ ನೀಡಿ ದೇಶ ತೊರೆದರು. ಪ್ರಧಾನಿಯ ನಿವಾಸಕ್ಕೆ ನುಗ್ಗಿದ ದಂಗೆಕೋರ ಯುವ ಜನತೆ ಮನಬಂದಂತೆ ವರ್ತಿಸಿದೆ. ಹಸೀನಾರ ಒಳ ಉಡುಪನ್ನೂ ಹರಿದು ವಿಕೃತಿ ಮೆರೆದಿದೆ. ಆ ದೇಶದ ಪಿತಾಮಹ ಎನಿಸಿದ ಹಸೀನಾರ ತಂದೆ, ಆ ದೇಶದ ಮೊದಲ ಅಧ್ಯಕ್ಷ ಹಾಗೂ ಪ್ರಧಾನಿಯಾಗಿದ್ದ ಶೇಖ್ ಮುಜಿಬುರ್ ರೆಹಮಾನ್ ಅವರ ಬೃಹತ್ ಪ್ರತಿಮೆಯನ್ನು ಏರಿ ಧ್ವಂಸಗೊಳಿಸಿದೆ. ದುರಂತವೆಂದರೆ 1975 ರಲ್ಲಿ ಸೇನಾಕ್ರಾಂತಿಯಾಗಿ ರೆಹಮಾನ್ರನ್ನು ಪದಚ್ಯುತಗೊಳಿಸಿ ಮಕ್ಕಳ ಸಮೇತ ಕೊಲ್ಲಲಾಗಿತ್ತು. ಕೊರೋನಾದಂಥ ಸಂದರ್ಭದಲ್ಲಿ ಲಕ್ಷಾಂತರ ಜನತೆಗೆ ದಾಸೋಹ ನೀಡಿದ ಇಸ್ಕಾನ್ ಮುಂತಾದ ಹಿಂದುದೇವಾಲಯಗಳ ಮೇಲೆ ದಂಗೆ ದಾಳಿ ನಡೆಸಿದೆ. ಅಲ್ಲಿನ ಹಿಂದುಗಳ ಹಿಂದು ಮಹಿಳೆಯರ ಮೇಲೆ ಹೇಳಲಾಗದ ದೌರ್ಜನ್ಯ ನಡೆಸುತ್ತಿದೆ. ಅಮೇರಿಕೆಯ ಇಸ್ಕಾಂ ವಿದ್ವಂಸನೆನಿಸಿದವನೊಬ್ಬ ಬಾಂಗ್ಲಾದ ಹಿಂದುಗಳಿಗೆ ಸಾಯಿರಿ ಇಲ್ಲವೇ ಮುಸ್ಲಿಂ ಆಗಿ ಮತಾಂತರಗೊಳ್ಳಿ ಎಂದು ಕರೆ ನೀಡಿದ್ದಾನಂತೆ. ಧರ್ಮದ ಹೆಸರಿನಲ್ಲಿ ಮನುಷ್ಯ ಏಕೆ ಹೀಗೆ? ಮೂಲತಃ ಬಾಂಗ್ಲಾ ಪಾಕಿಸ್ತಾನ ಭಾರತದ್ದಲ್ಲವೇ? ಭಾರತದಲ್ಲಿ ಮುಸ್ಲಿಮರು ಇರುವಂತೆ ಅಲ್ಲಿ ಹಿಂದುಗಳು ಇರಬಾರದೇ? ಎಲ್ಲರಲ್ಲೂ ಜಾಗೃತಿಯಾಗಲಿ.

ಹಿರಿಯ ಐಪಿಎಸ್ ಅಧಿಕಾರಿ ಅಲೋಕ್ ಕುಮಾರ್ ವಿರುದ್ಧದ ಪ್ರಕರಣ ರದ್ದು

• ಉದಯವಾಹಿನಿ, ಬೆಂಗಳೂರು

ಹಿರಿಯ ಐಪಿಎಸ್ ಅಧಿಕಾರಿ ಅಲೋಕ್ ಕುಮಾರ್ ವಿರುದ್ಧ ಮಹಿಳೆಯೊಬ್ಬರು ದಾಖಲಿಸಿದ್ದ ಕ್ರಿಮಿನಲ್ ಪ್ರಕರಣವನ್ನು ಹೈಕೋರ್ಟ್ ರದ್ದುಪಡಿಸಿದೆ. ಮಮತಾ ಸಿಂಗ್ ಎಂಬುವವರು ಸಲ್ಲಿಸಿದ್ದ ಖಾಸಗಿ ದೂರಿನ ಮೇರೆಗೆ ತನಿಖೆಗೆ ಅನುಮತಿ ನೀಡಿದ್ದ ವಿಚಾರಣಾ ನ್ಯಾಯಾಲಯದ ಕ್ರಮ ಪ್ರಶ್ನಿಸಿ ಹಾಗೂ ಅದನ್ನು ರದ್ದುಪಡಿಸುವಂತೆ ಕೋರಿ ಅಲೋಕ್ಕುಮಾರ್ ಹೈಕೋರ್ಟ್ಗೆ ಅರ್ಜಿ ಸಲ್ಲಿಸಿದ್ದರು. ಈ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಪೀಠ ನಗರದ 39 ನೇ ಎಸಿಎಂಎಂ ಕೋರ್ಟ್ ಅರ್ಜಿದಾರರ ವಿರುದ್ಧ ನಡೆಸುತ್ತಿದ್ದ ವಿಚಾರಣಾ ಪ್ರಕ್ರಿಯೆಯನ್ನು ರದ್ದುಪಡಿಸಿ ಆದೇಶಿಸಿದೆ. ವಿಚಾರಣಾ ವೇಳೆ ಅರ್ಜಿದಾರರ ಪರ ವಾದ ಮಂಡಿಸಿದ ಹಿರಿಯ ವಕೀಲ ಪ್ರಭುಲಿಂಗ ನಾವಡಗಿ ಸಕ್ಷಮ ಪ್ರಾಧಿಕಾರದಿಂದ ಅನುಮತಿ ಇಲ್ಲದೇ ಪ್ರಾಸಿಕ್ಯೂಷನ್ಗೆ ಒಳಪಡಿಸಲು ದಂಡ ಪ್ರಕ್ರಿಯೆ ಸಂಹಿತೆಯ ಸೆಕ್ಷನ್ 195 ರ ಅಡಿ ಅವಕಾಶವಿಲ್ಲ,

ಕೃಷಿ ಇಲಾಖೆಯ ನಿವೃತ್ತ ಅಧಿಕಾರಿ ಆತ್ಮಹತ್ಯೆ

• ಉದಯವಾಹಿನಿ, ಬೆಂಗಳೂರು

ನಿವೃತ್ತ ಸಹಾಯಕ ಕೃಷಿ ಅಧಿಕಾರಿಯೊಬ್ಬರು ಆತ್ಮಹತ್ಯೆಗೆ ಶರಣಾಗಿರುವ ಘಟನೆ ಸೋಲದೇವನಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ. ಎಜಿಬಿ ಲೇಔಟ್ನಲ್ಲಿ ಬಾಡಿಗೆ ಮನೆಯಲ್ಲಿ ವಾಸವಾಗಿದ್ದ ಅಬ್ದುಲ್ ರಶೀದ್(64) ಮೃತಪಟ್ಟ ನಿವೃತ್ತ ಅಧಿಕಾರಿ. ಅಬ್ದುಲ್ ರಶೀದ್ ಅವರು ಚಿತ್ರದುರ್ಗ ಜಿಲ್ಲೆ ಹೊಳಲ್ಕೆರೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾಗ ಅವರ ಮೇಲೆ ಪ್ರಕರಣವೊಂದು ದಾಖಲಾಗಿದ್ದು, ತನಿಖಾ ಹಂತದಲ್ಲಿದೆ. ಹಾಗಾಗಿ ಅವರಿಗೆ ಇನ್ನು ನಿವೃತ್ತಿ ವೇತನ ಸಿಕ್ಕಿರಲಿಲ್ಲ. ಆ ಹಣವನ್ನೇ ನಂಬಿಕೊಂಡಿದ್ದ ಅಬ್ದುಲ್ ಅವರು ಇದರಿಂದ ಮನನೊಂದಿದ್ದರು. ನಿನ್ನೆ ಪತ್ನಿ ಸಂಬಂಧಿಕರ ಮನೆಗೆ ಹೋಗಿದ್ದರು. ಮನೆಯಲ್ಲಿ ಇಬ್ಬರು ಮಕ್ಕಳೂ ಇರಲಿಲ್ಲ. ಆ ಸಂದರ್ಭದಲ್ಲಿ ಡೆತ್ನೋಟ್ ಬರೆದಿಟ್ಟು, ಫ್ಯಾನ್ಗೆ ಸೀರೆಯಿಂದ ನೇಣು ಬಿಗಿದುಕೊಂಡು ಅಬ್ದುಲ್ ರಶೀದ್ ಅವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮನೆ ಮಾಲೀಕರು ನೋಡಿ ತಕ್ಷಣ ಅವರ ಪತ್ನಿಗೆ ತಿಳಿಸಿದ್ದಾರೆ.

ಸರ್ಕಾರದಿಂದ ಆಡಳಿತಕ್ಕೆ ಮತ್ತೆ ಸರ್ಜರಿ

• ಉದಯವಾಹಿನಿ, ಬೆಂಗಳೂರು

ಕಂದಾಯ ಇಲಾಖೆಯ ಸ್ಥಳ ನಿರೀಕ್ಷಣೆಯಲ್ಲಿರುವ ಹಾಗೂ ಸ್ಥಳ ನಿರೀಕ್ಷಣೆಗೆ ಬರಲಿರುವ ತಹಶೀಲ್ದಾರ್ ವೃಂದದ ಅಧಿಕಾರಿಗಳನ್ನು ವರ್ಗಾವಣೆ ಮಾಡಲಾಗಿದೆ. ಸಾರ್ವಜನಿಕ ಹಾಗೂ ಆಡಳಿತಾತ್ಮಕ ಹಿತದೃಷ್ಟಿಯಿಂದ ತಕ್ಷಣ ಜಾರಿಗೆ ಬರುವಂತೆ ಮುಂದಿನ ಆದೇಶದವರೆಗೆ ಸ್ಥಳ ನಿಯತ್ತಿಗೊಳಿಸಿ ಆದೇಶ ನೀಡಲಾಗಿದೆ. ಸ್ಥಳ ನಿಯುಕ್ತಿಗೊಳಿಸಿದ ಅಧಿಕಾರಿಗಳು ತಮಗೆ ನಿಯುಕ್ತಿಗೊಳಿಸಿದ ಹುದ್ದೆಗಳಲ್ಲಿ ಕಾರ್ಯಭಾರ ವಹಿಸಿಕೊಂಡು ಸಿಟಿಸಿ ಪ್ರತಿಯನ್ನು ಇಮೇಲ್ ಮೂಲಕ ಕಳುಹಿಸುವಂತೆ ಕಂದಾಯ ಇಲಾಖೆ ಅಧೀನ ಕಾರ್ಯದರ್ಶಿ ತಿಳಿಸಿದ್ದಾರೆ.

ಭೂಕುಸಿತ ದುರಂತ ಹೊಸ ನೀತಿ ಜಾರಿಗೆ ಮುಂದಾದ ರಾಜ್ಯ ಸರ್ಕಾರ

• ಉದಯವಾಹಿನಿ, ಬೆಂಗಳೂರು

ಇತ್ತೀಚೆಗೆ ರಾಜ್ಯದಲ್ಲೂ ಭೀಕರ ಭೂಕುಸಿತ ದುರಂತಗಳು ಸಂಭವಿಸುತ್ತಿದ್ದು, ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಮಹತ್ವದ ನಿರ್ಧಾರಕ್ಕೆ ಮುಂದಾಗಿದೆ.ಈ ಬಗ್ಗೆ ಮಾಹಿತಿ ನೀಡಿರುವ ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು, ಘಟ್ಟ ಪ್ರದೇಶಗಳಲ್ಲಿ ಹೆಚ್ಚುತ್ತಿರುವ ಭೂ ಕುಸಿತದ ಪರಿಣಾಮಗಳನ್ನು ತಗ್ಗಿಸುವ ಸಂಬಂಧ ಅಭಿವೃದ್ಧಿ ಕೇಂದ್ರಿತ ಚಟುವಟಿಕೆ ನಿಯಂತ್ರಿಸುವ ನೀತಿಯೊಂದನ್ನು ರೂಪಿಸಲಾಗುತ್ತಿದೆ ಎಂದು ತಿಳಿಸಿದ್ದಾರೆ. ಗುಡ್ಡಗಳನ್ನು ಕಡಿದು ನಿರ್ಮಾಣ ಚಟುವಟಿಕೆ ಕೈಗೊಳ್ಳುವುದು ಸೇರಿ ಹಲವು ಅವೈಜ್ಞಾನಿಕ ಅಭಿವೃದ್ಧಿಗೆ ನಿರ್ಬಂಧಿಸಲು ಉದ್ದೇಶಿಸಲಾಗಿದೆ. ಗುಡ್ಡಗಳನ್ನು 90 ಡಿಗ್ರಿಯಲ್ಲಿ ಲಂಬವಾಗಿ ಕತ್ತರಿಸುವುದನ್ನು ತಡೆಯುವುದು, ಗುಡ್ಡದಿಂದ ನೀರು ಸರಾಗವಾಗಿ ಹರಿದುಹೋಗುವಂತೆ ವ್ಯವಸ್ಥೆ ಮಾಡುವುದು ಸೇರಿ ನಿರ್ಮಾಣ ಪರವಾನಗಿಯಲ್ಲಿ ಷರತ್ತು ವಿಧಿಸಲಾಗುತ್ತದೆ. ಅನಧಿಕೃತ ನಿರ್ಮಾಣ ಚಟುವಟಿಕೆಗಳನ್ನು ನಿರ್ಬಂಧಿಸುವುದು ಒಳಗೊಂಡಂತೆ ಹಲವು ಉಪಕ್ರಮಗಳು ನೀತಿಯಲ್ಲಿ ಇರಲಿವೆ ಎಂದು ಅವರು ಹೇಳಿದ್ದಾರೆ.

ವರಮಹಾಲಕ್ಷ್ಮಿ ಹಬ್ಬಕ್ಕೆ ಗೃಹಲಕ್ಷ್ಮಿಯರಿಗೆ ಕೊಂಚ ನಿರಾಸೆ

• ಉದಯವಾಹಿನಿ, ಬೆಂಗಳೂರು

ವರಮಹಾಲಕ್ಷ್ಮಿ ಹಬ್ಬಕ್ಕೆ ರಾಜ್ಯದ ಮಹಿಳೆಯರಿಗೆ, ಸರ್ಕಾರ ಗುಡ್ ನ್ಯೂಸ್ ಕೊಟ್ಟಿದೆ. ಕಳೆದ ಎರಡು ತಿಂಗಳಿಂದ ಸ್ಥಗಿತಗೊಂಡಿದ್ದ ಗೃಹಲಕ್ಷ್ಮಿ ಯೋಜನೆಯ ಹಣವನ್ನು ಅರ್ಹ ಫಲಾನುಭವಿಗಳ ಸರ್ಕಾರ ಖಾತೆಗೆ ಜಮೆ ಮಾಡಲಿದೆ ಎಂದು ಉನ್ನತ ಮೂಲಗಳಿಂದ ತಿಳಿದುಬಂದಿದೆ. ಕಳೆದ ಜೂನ್, ಜುಲೈ ತಿಂಗಳ ಗಣ ಬಂದಿರಲಿಲ್ಲ. ಇದೀಗಾ ಜೂನ್ ತಿಂಗಳ ಹಣ ಎರಡೂರು ದಿನದಲ್ಲಿ ಮೂಲಕ ಫಲಾನುಭವಿಗಳ ಖಾತೆಗೆ ಜಮೆಯಾಗಲಿದೆ. ಇನ್ನೂ ಜುಲೈ, ಆಗಸ್ಟ್ ತಿಂಗಳ ಹಣ ಮುಂದಿನ ತಿಂಗಳು ಬಿಡುಗಡೆ ಮಾಡಲು ಸರ್ಕಾರ ಚಿಂತನೆ ನಡೆಸಿದೆ. ಇದರಿಂದ ವರಮಹಾಲಕ್ಷ್ಮಿ ಹಬ್ಬಕ್ಕೂ ಮುನ್ನವೇ 2 ತಿಂಗಳ ಹಣ ಒಟ್ಟಿಗೇ ಬರುತ್ತೆ ಅಂದುಕೊಂಡಿದ್ದವ್ರಿಗೆ ಕೊಂಚ ನಿರಾಸೆಯಾಗಿದೆ. ಜೂನ್ ತಿಂಗಳ ಹಣ ಬಿಡುಗಡೆಗೆ ಆರ್ಥಿಕ ಇಲಾಖೆಯಿಂದ ಅನುಮೋದನೆ ಸಿಕ್ಕಿದ್ದು, 1.25 ಕೋಟಿ ಫಲಾನುಭವಿಗಳಿಗೆ ಹಣ ಬಿಡುಗಡೆಯಾಗಲಿದೆ. ಪ್ರತಿ ತಿಂಗಳಿಗೆ ಅಂದಾಜು 2,500 ಕೋಟಿ ರೂ. ಯೋಜನೆ ಮೂಲಕ ಫಲಾನುಭವಿಗಳಿಗೆ ತಲುಪುತಿತ್ತು. ಇದುವರೆಗೆ 10 ಕಂತುಗಳ ಹಣ ಬಿಡುಗಡೆಯಾಗಿದ್ದು, ಜೂನ್, ಜುಲೈ ತಿಂಗಳ ಹಣ ಬಾಕಿಯಿದೆ. ಇದಕ್ಕೆ ವ್ಯಾಪಕ ಆಕ್ರೋಶ ವ್ಯಕ್ತವಾದ ಬೆನ್ನಲ್ಲೇ, 2 ತಿಂಗಳು ಸ್ಥಗಿತಗೊಂಡಿದ್ದ ಹಣವನ್ನ ಫಲಾನುಭವಿಗಳಿಗೆ ನೀಡಲು ಸರ್ಕಾರ ಮುಂದಾಗಿದೆ.

ರಾಜ್ಯಪಾಲರು ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದರೆ ರಾಷ್ಟ್ರಪತಿ ಭೇಟಿ

ಮುಡಾ ಪ್ರಕರಣ ಕುರಿತು ಗೃಹ ಸಚಿವ ಡಾ.ಜಿ.ಪರಮೇಶ್ವರ ಪ್ರತಿಕ್ರಿಯೆ, ಸಿಎಂ ವಿರುದ್ಧ ನೋಟಿಸ್ ಜಾರಿ

• ಉದಯವಾಹಿನಿ, ಬೆಂಗಳೂರು

ಕಾನೂನು ಹೋರಾಟ ಪ್ರಾರಂಭ

ಮುಡಾ ಹಗರಣದಲ್ಲಿ ಸಿಎಂ ಸಿದ್ದರಾಮಯ್ಯನವರ ಹೆಸರು ಕೇಳಿ ಬರುತ್ತಿದ್ದಂತೆ ಪ್ರಕರಣದ ಕಾವು ರಾಜ್ಯಾದ್ಯಂತ ವ್ಯಾಪಿಸಿತು. ರಾಜಕಾರಣದಲ್ಲಂತೂ ತೀವ್ರ ಚರ್ಚೆಗೆ ಗ್ರಾಸವಾಗಿದೆ. ಸಾಲ ದೆಂಬಂತೆ ದೂರಿನ ಆಧಾರದಲ್ಲಿ ರಾಜ್ಯಪಾಲರು ಸಿಎಂ ಸಿದ್ದರಾಮಯ್ಯ ವಿರುದ್ಧ ನೋಟಿಸ್ ಜಾರಿ ಮಾಡಿದ್ದಾರೆ.

ಈ ನೋಟಿಸ್ ಹಿಂಪಡೆಯುವಂತೆ ಒತ್ತಾಯ ಮಾಡಿರುವ ಸಂಪುಟ ಸಚಿವರು, ಮುಂದಿನ ದಿನಗಳಲ್ಲಿ ರಾಷ್ಟ್ರಪತಿ ಭೇಟಿಗೆ ನಿರ್ಧರಿಸಿದ್ದಾರೆ. ಮುಡಾ ಪ್ರಕರಣ ಕುರಿತು ಗೃಹ ಸಚಿವ ಡಾ.ಜಿ.ಪರಮೇಶ್ವರ ಅವರು ಪ್ರತಿಕ್ರಿಯಿಸಿದ್ದು, ಈ ಪ್ರಕರಣದಲ್ಲಿ ಸಿಎಂ ಸಿದ್ದರಾಮಯ್ಯ ವಿರುದ್ಧ ರಾಜ್ಯಪಾಲರು ಪ್ರಾಸಿಕ್ಯೂಷನ್ಗೆ ಅನುಮತಿ ನೀಡುವುದಿಲ್ಲ ಎಂಬ ವಿಶ್ವಾಸವಿದೆರು.

ಒಂದು ವೇಳೆ ರಾಜ್ಯಪಾಲರು ಪ್ರಾಸಿಕ್ಯೂಷನ್ಗೆ ಅನುಮತಿ ನೀಡಿದರೆ, ಸರ್ಕಾರ ಕಾನೂನು ಹೋರಾಟ ನಡೆಸಲಾಗುವುದು. ಕಾನೂನು ಹೋರಾಟ ಪ್ರಾರಂಭವಾದ ಬಳಿಕ ಮುಂದಿನ ಬೆಳವಣಿಗೆ ಏನೆಂಬುದನ್ನು ಗಮನಿಸಿ ರಾಷ್ಟ್ರಪತಿಯವರನ್ನು ಭೇಟಿ ಮಾಡಲು ನಿರ್ಧರಿಸಲಾಗುವುದು ಎಂದು ಅವರು ಮಾಹಿತಿ ನೀಡಿದರು.

ಹತ್ತಾರು ಪ್ರಕರಣಗಳು ರಾಜ್ಯಪಾಲರ ಕಚೇರಿಯಲ್ಲಿ ಬಾಕಿ ಉಳಿದಿವೆ. ಯಾವುದಕ್ಕು ಕೂಡ ಪ್ರಾಸಿಕ್ಯೂಷನ್ಗೆ ರಾಜ್ಯಪಾಲರು ಮುಂದಾಗಿಲ್ಲ. ಮೂಡಾ ವಿಚಾರದಲ್ಲಿ ತರಾತುರಿಯಲ್ಲಿ ನೋಟಿಸ್ ನೀಡಿದ್ದಾರೆ. ಜುಲೈ 26ರಂದು ರಾಜ್ಯಪಾಲರಿಗೆ ಟಿ.ಜೆ.ಅಬ್ರಹಾಂ ಮನವಿ ಕೊಡುತ್ತಾರೆ. ಅದೇ ದಿನ ರಾಜ್ಯಪಾಲರು ಸರ್ಕಾರದ ಮುಖ್ಯ ಕಾರ್ಯದರ್ಶಿಯವರಿಗೆ ಪತ್ರ ಬರೆಯುತ್ತಾರೆ. ಇನ್ನೂ ಮುಖ್ಯ ಕಾರ್ಯದರ್ಶಿಯವರು ಹೋಗಿ ಸ್ಪಷ್ಟನೆ ನೀಡಿ ಬಂದಿದ್ದಾರೆ. ಅದೇದಿನ ಸಂಜೆ ಸಿಎಂ ಅವರಿಗೆ ಶೋಕಾಸ್ ನೋಟಿಸ್ ಜಾರಿ ಮಾಡಲಾಗಿದೆ. ಹಿಂದಿನ ಉದ್ದೇಶ ಏನೆಂಬುದನ್ನು ರಾಜ್ಯಪಾಲರು ಹೇಳಬೇಕಲ್ಲವೇ ಎಂದು ಅವರು ಪ್ರಶ್ನಿಸಿದರು.

ರಾಜ್ಯಪಾಲರು ಅಧಿಕಾರಿ, ರಾಜಕಾರಣಿ ಅಲ್ಲ: ರಾಜ್ಯಪಾಲರು ಸಾಮಾನ್ಯ ರಾಜಕಾರಣಿಯೋ ಅಥವಾ ಅಧಿಕಾರಿಯೋ ಅಲ್ಲ, ಸಂವಿಧಾನದ ಮುಖ್ಯಸ್ಥರು. ಅನೇಕ ಪ್ರಕರಣಗಳು ಅವರ ಕಚೇರಿಯಲ್ಲಿ ಬಾಕಿ ಉಳಿದು, ಯಾವುದಕ್ಕು ಗಮನ ಹರಿಸದೇ ಏಕಾಏಕಿ ಮುಖ್ಯಮಂತ್ರಿಯವರಿಗೆ ಶೋಕಾಸ್ ನೋಟಿಸ್ ನೀಡಿದ್ದಾರೆ. ಹಿಂದೆ ಷಡ್ಯಂತ್ರ ಇದೆ. ರಾಜ್ಯಪಾಲರ ಮುಂದಿನ ನಡೆ ಏನು ಎಂಬುದನ್ನು ಕಾದು ನೋಡುತ್ತೇವೆ. ಸರ್ಕಾರ ಬೀಳಿಸುವುದು ಸುಲಭವೇ 136 ಶಾಸಕರಿದ್ದೇವೆ. ಯಾವ ರೀತಿ ಸರ್ಕಾರ ಬೀಳಿಸುತ್ತಾರೆ ನೀವೆ ಹೇಳಿ. ಈ ಹಿಂದೆಯು ಹಲವು ಭಾರಿ ಸರ್ಕಾರ ಪತನವಾಗಲಿದೆ ಎಂದಿದ್ದರು, ಆಯಿತೇ. ಈಗ ಮೂರು ತಿಂಗಳಲ್ಲಿ ಪತನ ಎಂದಿದ್ದಾರೆ. ನೀವು ಮೂರು ತಿಂಗಳು ಕಾಯಬೇಕು. ಸರ್ಕಾರ ಬೀಳಿಸುವುದು ತಮಾಷೆಯಲ್ಲ ಎಂದು ಅವರು ಎಚ್ಚರಿಸಿದರು.

ಎಚ್‌ಡಿ ಕುಮಾರಸ್ವಾಮಿಗೆ ತಿರುಗೇಟು

ಕೆಲವು ದಿನಗಳಲ್ಲಿ ಸರ್ಕಾರದಲ್ಲಿ ಯಾರು ಎಲ್ಲೆಲ್ಲಿರಬೇಕು, ಏನೇನಾಗುತ್ತದೆ ಎಂದು ಕಾದು ನೋಡಿ ಎಂದು ಎಚ್‌ಡಿ ಕುಮಾರಸ್ವಾಮಿ ಹೇಳಿಕೆ ಬಗ್ಗೆ ಪ್ರತಿಕ್ರಿಯಿಸಿದ ಸಚಿವರು ಅವರು ಎಚ್ಚರಿಕೆ ನೀಡಲಿ ನಮ್ಮದೇನು ತಕಾರಾರು ಇಲ್ಲ. ಅದಕ್ಕು ಮುನ್ನ ನಮ್ಮ ಪ್ರಶ್ನೆಗಳಿಗೆ ಉತ್ತರ ನೀಡಲಿ. ಬೇರೆ ಬೇರೆ ಪ್ರಕರಣಗಳ ಕುರಿತು ತನಿಖೆ ಆಗುತ್ತಿದೆ. ದೇವರಾಜು ಅರಸು ಟ್ರಕ್ ಟರ್ಮಿನಲ್‌ನಲ್ಲಿ 47 ಕೋಟಿ ರೂ. ಚೆಕ್ ಮೂಲಕ ಪಡೆದುಕೊಂಡಿದ್ದಾರೆ ಎಂಬುದು ಮೇಲ್ನೋಟಕ್ಕೆ ಕಂಡು ಬಂದಿದೆ. ಅಧಿಕಾರಿಗಳನ್ನು ಬಂಧಿಸಲಾಗಿದೆ. ಈ ಬಗ್ಗೆ ಗಮನದಲ್ಲಿ ಇತ್ತು, ಇರಲಿಲ್ಲ ಎಂಬುದರ ಕುರಿತು ಬಿಜೆಪಿಯವರು ಉತ್ತರಿಸಲಿ ಎಂದು ಸವಾಲೊಡ್ಡಿದ್ದರು.

ಬಿಜೆಪಿ ಕಾಲದಲ್ಲಿ ಸಾಕಷ್ಟು ಹಗರಣಗಳಾಗಿವೆ. ತನಿಖೆಗೆ ಆದೇಶ ಮಾಡಿದ್ದೇವೆ. ವರದಿಯನ್ನು ಆಧರಿಸಿ ಮುಂದಿನ ಕ್ರಮದ ಬಗ್ಗೆ ಕ್ಯಾಬಿನೆಟ್‌ನಲ್ಲಿ ನಿರ್ಧರಿಸುತ್ತೇವೆ ಎಂದು ತಿಳಿಸಿದರು.ಬಿಜೆಪಿ ಬಿವಿಸ್ ಯಡಿಯೂರಪ್ಪ ಅವರ ವಿರುದ್ಧದ ಪೋಕ್ಸೋ ಪ್ರಕರಣದ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿ, ಕೋರ್ಟ್ ನೀಡಿರುವ ತಡೆಯಾಜ್ಞೆಯನ್ನು ತೆರವು ಮಾಡಿಸಲು ಅಡ್ವೋಕೇಟ್ ಜನರಲ್‌ಗೆ ತಿಳಿಸಲಾಗಿದೆ. ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇವೆ ಎಂದರು.

ಪದವಿ ತರಗತಿಗಳಿಗೂ ಸರ್ಕಾರಿ ಕೋಟಾದಡಿ ಸೀಟು

• ಉದಯವಾಹಿನಿ, ಬೆಂಗಳೂರು

ಇಂಜಿನಿಯರಿಂಗ್ ಹಾಗೂ ವೈದ್ಯಕೀಯ ಕೋರ್ಸ್‌ಗಳ ಸೀಟು ಹಂಚಿಕೆ ಮಾದರಿಯಲ್ಲಿಯೇ ಬಿಎ, ಬಿಎಸ್ಸಿ, ಬಿಕಾಂ ಸೇರಿದಂತೆ ವಿವಿಧ ಪದವಿ ಕೋರ್ಸ್‌ಗಳಿಗೂ ಖಾಸಗಿ ಕಾಲೇಜುಗಳಲ್ಲಿ ಸರ್ಕಾರಿ ಕೋಟಾದಡಿ ಸೀಟು ಹಂಚಿಕೆ ಮಾಡಲು ಉನ್ನತ ಶಿಕ್ಷಣ ಇಲಾಖೆ ಮುಂದಾಗಿದೆ.

ಈ ಕ್ರಮದಿಂದ ಖಾಸಗಿ ಪದವಿ ಕಾಲೇಜುಗಳಿಗೆ ಇಲಾಖೆ ಬಿಗ್ ಶಾಕ್ ನೀಡಿದೆ. ಇನ್ನು ಮುಂದೆ ಪ್ರತಿಷ್ಠಿತ ಖಾಸಗಿ ಪದವಿ ಕಾಲೇಜುಗಳಲ್ಲಿಯೂ ಬಡ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸರ್ಕಾರಿ ಕೋಟಾದಡಿ ಸೀಟು ದೊರೆಯಲಿದೆ. ಇಂಜಿನಿಯರಿಂಗ್ ಹಾಗೂ ವೈದ್ಯಕೀಯ ಸೀಟು ಹಂಚಿಕೆ ಮಾದರಿಯಲ್ಲಿ ಖಾಸಗಿ ಪದವಿ ಕಾಲೇಜುಗಳಲ್ಲಿ ಶೇ.40 ರಷ್ಟು ಸರ್ಕಾರಿ ಕೋಟಾದಡಿಯಲ್ಲಿ ಪದವಿ ಸೀಟುಗಳನ್ನು ಪಡೆಯಲು ಉನ್ನತ ಶಿಕ್ಷಣ ಇಲಾಖೆ ಮುಂದಾಗಿದೆ.

ಉದಯವಾಹಿನಿ ಚಿತ್ರ

ಹಾಗಾಗಿ ಶೇ.40 ರಷ್ಟು ಸರ್ಕಾರಿ ಸೀಟುಗಳನ್ನು ವಿದ್ಯಾರ್ಥಿಗಳು ಈ ವರ್ಷದಿಂದಲೇ ಪಡೆಯಬಹುದಾಗಿದೆ. ಖಾಸಗಿ ಕಾಲೇಜುಗಳಲ್ಲಿ ಪದವಿ ಪಡೆಯಲು ಉದ್ದೇಶಿಸಿದ್ದ ವಿದ್ಯಾರ್ಥಿಗಳಿಗೆ ಇದು ಖುಷಿ ವಿಷಯವಾಗಿದೆ. ಈ ಸೀಟುಗಳನ್ನು ಕೆಇಎ ಅಥವಾ ಕಾಮೆಡ್-ಕೆ ಮಾದರಿಯಲ್ಲಿ ಹಂಚಿಕೆ ಮಾಡಲು ಚಿಂತನೆ ನಡೆಸಿದೆ. ಪ್ರತಿಷ್ಠಿತ ಖಾಸಗಿ ಕಾಲೇಜುಗಳಲ್ಲಿ ಬಿಎ, ಬಿಕಾಂ, ಬಿಎಸ್ಸಿ, ಬಿಬಿಎ ಸೇರಿದಂತೆ ವಿವಿಧ ಪದವಿ ಕೋರ್ಸ್‌ಗಳಿಗೆ ಪ್ರವೇಶ ಪಡೆಯಲು ಬಡ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸಾಧ್ಯವಾಗುತ್ತಿರಲಿಲ್ಲ. ಅವರು ಸರ್ಕಾರಿ ಕಾಲೇಜುಗಳನ್ನು ಅವಲಂಬಿಸಬೇಕಾಗಿತ್ತು. ಉಳ್ಳವರು ಮಾತ್ರ ಪ್ರತಿಷ್ಠಿತ ಕಾಲೇಜುಗಳಲ್ಲಿ ಪದವಿಗೆ ಪ್ರವೇಶ ಪಡೆಯುತ್ತಿದ್ದರು. ಕೇಳಿದಷ್ಟು ಡೊನೇಷನ್ ನೀಡಿ ಪ್ರವೇಶ ಪಡೆದು ಉನ್ನತ ಹುದ್ದೆಗಳಿಗೆ ಹೋಗುತ್ತಿದ್ದರು. ಈಗ ಸರ್ಕಾರ ಬಡ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಷ್ಠಿತ ಪದವಿ ಕಾಲೇಜುಗಳಲ್ಲಿ ಸರ್ಕಾರಿ ಸೀಟುಗಳ ಮೂಲಕ ಪ್ರವೇಶ ಪಡೆಯಬಹುದಾಗಿದೆ. ಈ ಹಿಂದೆ ಖಾಸಗಿ ಪದವಿ ಕಾಲೇಜುಗಳು ಶೇ.100 ಕ್ಕೆ 100 ರಷ್ಟು ಮ್ಯಾನೇಜ್‌ಮೆಂಟ್ ಕೋಟಾದಡಿ ದಾಖಲಾತಿ ಮಾಡಿಕೊಳ್ಳುತ್ತಿದ್ದರು.

ಖಾಸಗಿ

ಶ್ರೀ ವೆಂಕಟರಮಣಸ್ವಾಮಿಯ ದೇವಾಲಯ ಪ್ರವಾಸಿ ತಾಣಕ್ಕೆ ಬೇಡಿಕೆ

ನಾನು ಇದೇ ಕ್ಷೇತ್ರದವನಾಗಿದ್ದು ಮುಂದಿನ ದಿನಗಳಲ್ಲಿ ಪ್ರವಾಸಿ ತಾಣವಾಗಿ ಮಾರ್ಪಾಡು ಮಾಡಲು ಆಸಕ್ತಿ ಇದೆ: ಸಚಿವ

• ಉದಯವಾಹಿನಿ ಶಿಡ್ಲಘಟ್ಟ

ಇತಿಹಾಸ ಪ್ರಸಿದ್ದ ತಲಕಾಯಲಬೆಟ್ಟದಲ್ಲಿ ಭೂನೀಳಾ ಸಮೇತ ಶ್ರೀ ವೆಂಕಟರಮಣಸ್ವಾಮಿಯ ದೇವಾಲಯದ ನವೀಕರಣ ಮಾಡಲು ಈಗಾಗಲೇ ದೇವಸ್ಥಾನದ ಸಮಿತಿ ತಯಾರಿ ಮಾಡಿದ್ದಾರೆ. ನಾನು ಇದೇ ಕ್ಷೇತ್ರದವನಾಗಿದ್ದು ಮುಂದಿನ ದಿನಗಳಲ್ಲಿ ಪ್ರವಾಸಿ ತಾಣವಾಗಿ ಮಾರ್ಪಾಡು ಮಾಡಲು ಆಸಕ್ತಿ ಇದೆ ಎಂದು ಆಹಾರ ಮತ್ತು ನಾಗರೀಕ ಸರಬರಾಜು ಸಚಿವ ಕೆ.ಎಚ್.ಮುನಿಯಪ್ಪ ಅಭಿಪ್ರಾಯ ಪಟ್ಟರು.

ತಾಲ್ಲೂಕಿನ ತಲಕಾಯಲ ಬೆಟ್ಟ ಗ್ರಾಮದಲ್ಲಿ ಶ್ರಾವಣ ಮಾಸದ ಮೊಲನೇ ಶನಿವಾರ ಇತಿಹಾಸ ಪ್ರಸಿದ್ದ ಭೂನೀಳಾ ಸಮೇತ ಶ್ರೀ ವೆಂಕಟರಮಣಸ್ವಾಮಿಯ ದೇವರಿಗೆ ವಿಶೇಷ ಸಲ್ಲಿಸಿ, ಪೂಜೆಯಲ್ಲಿ ಪಾಲ್ಗೊಂಡು ಮಾತನಾಡಿದರು. ಇತಿಹಾಸ ಪ್ರಸಿದ್ಧವಾದ ತಲಕಾಯಲ ಬೆಟ್ಟದ ದೇವಸ್ಥಾನಕ್ಕೆ ದಿನದಂದ ದಿನಕ್ಕೆ ಭಕ್ತಾದಿಗಳು ಹೆಚ್ಚಾಗುತ್ತಿರುವುದರಿಂದ ಇಲ್ಲಿನ ದೇವಸ್ಥಾನದ ನಕ್ಷೆ ಮತ್ತು ಅಂದಾಜು ವೆಚ್ಚವನ್ನು ಸರ್ಕಾರದ ಗಮನಕ್ಕೆ ತಂದಿದ್ದೇನೆ. ಮುಜರಾಯಿ ಇಲಾಖೆಯ ಸಚಿವರಾದ ರಾಮಲಿಂಗಾರೆಡ್ಡಿ ಅವರ ಬಳಿ ಮಾತನಾಡಿ ದೇವಸ್ಥಾನದ ಅಭಿವೃದ್ಧಿಗೆ ಹೆಚ್ಚಿನ ಅನುದಾನವನ್ನು ತರಲು ಪ್ರಯತ್ನಿಸುತ್ತೇನೆ. ಇನ್ನೂ ಹೆಚ್ಚು ಭಕ್ತಾದಿಗಳು, ದಾನಿಗಳ ಸಹಕಾರದಿಂದ ಅಭಿವೃದ್ಧಿಗೆ ಕೈ ಜೋಡಿಸಬೇಕು ಎಂದು ಹೇಳಿದರು.

ಉದಯವಾಹಿನಿ ಚಿತ್ರ

ಹೆಚ್ಚಿನ ಅನುದಾನ ತರಲು ಪ್ರಯತ್ನ

ಈ ಸಂದರ್ಭದಲ್ಲಿ ತಹಶೀಲ್ದಾರ್ ಬಿ.ಎನ್ ಸ್ವಾಮಿ, ಶ್ರೀ ವೆಂಕಟರಮಣಸ್ವಾಮಿ ದೇವಾಲಯದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷರಾದ ಡಿಪಿ ನಾಗರಾಜ್, ರಾಯಪ್ಪನಹಳ್ಳಿ ಅಶ್ವತ್ ನಾರಾಯಣರೆಡ್ಡಿ, ಶ್ರೀನಿವಾಸರೆಡ್ಡಿ, ರಾಧಮ್ಮ ಗೋಪಾಲರೆಡ್ಡಿ, ಎಂಪಿ ರವಿ, ಮಂಜುಳ ಪಾಂಡುರಂಗ, ಡಿವಿ ಶ್ರೀರಂಗಪ್ಪ, ಸಾದಲಿ ಗೋವಿಂದರಾಜು, ಸೀತಾರಾಮ್, ಗ್ಯಾಸ್ ದ್ಯಾವಪ್ಪ, ಶ್ರೀನಿವಾಸ್,ಎನ್ ಟಿ.ಆರ್ ನರಸಿಂಹ ಆಹಾರ ಇಲಾಖೆಯ ಅಧಿಕಾರಿಗಳು ಮತ್ತಿತರರು ಪೂಜೆಯಲ್ಲಿ ಪಾಲ್ಗೊಂಡಿದ್ದರು.

ಜಿಲ್ಲೆಯ ಧಾರ್ಮಿಕ ಕೇಂದ್ರಗಳಲ್ಲಿ ಒಂದಾಗಿರುವ ಈ ದೇಗುಲಕ್ಕೆ ಆಂಧ್ರ ಪ್ರದೇಶ, ತಮಿಳುನಾಡು, ತೆಲಂಗಾಣ ಸೇರಿ ಅನೇಕ ರಾಜ್ಯಗಳಿಂದ ಇಲ್ಲಿ ನಡೆಯುವ ಭಾರೀ ಧನಗಳ ಜಾತ್ರೆಗೆ ಭಕ್ತರ ದಂಡು ಹರಿದು ಬರುತ್ತದೆ. ಪ್ರತಿ ಅಮಾವಾಸ್ಯೆ, ಹುಣ್ಣಿಮೆ,ನಿತ್ಯ ನೂರಾರು ಸಂಖ್ಯೆಯಲ್ಲಿ ಭಕ್ತರು ಇಲ್ಲಿಗೆ ಬಂದು ಹರಕೆ ತಿರಿಸಿ ದೇವರ ದರ್ಶನ ಪಡೆದುಕೊಂಡು ಹೋಗುತ್ತಾರೆ ಹೀಗಾಗಿ ದೇವಸ್ಥಾನದ ಅಭಿವೃದ್ಧಿ ಹಾಗೂ ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡಬೇಕು.

-ಡಿ.ಪಿ. ನಾಗರಾಜ್, ಅಧ್ಯಕ್ಷರು ದೇವಾಲಯದ ವ್ಯವಸ್ಥಾಪನಾ ಸಮಿತಿ

ಪ್ರವಾಸಿತಾಣಕ್ಕೆ ಬೇಡಿಕೆ

ದೇವಸ್ಥಾನ ಸಂಪೂರ್ಣ ಅಭಿವೃದ್ಧಿ ಕೆಲಸ ಆದ ನಂತರ ಎರಡನೇ ಹಂತದಲ್ಲಿ ಅದರ ಬಗ್ಗೆ ಗಮನ ಹರಿಸುತ್ತೇನೆ. ಮೊದಲು ದೇವಸ್ಥಾನ ಕಾಮಗಾರಿ ಪ್ರಾರಂಭ ಆಗಲಿ ದೇವಸ್ಥಾನಕ್ಕೆ ಸಂಬಂದಿಸಿದ ಸ್ಥಳ ಸುಮಾರು 100 ಎಕರೆ ಇದೆ. ಅದರಲ್ಲಿ ಉತ್ತಮವಾದ ಪ್ರವಾಸಿ ತಾಣವನ್ನು ನಿರ್ಮಿಸಿ ಪ್ರವಾಸಿಗರು ಉಳಿದುಕೊಂಡು ಬೆಳಗಿನ ಜಾವ ಪೂಜೆ ಸಲ್ಲಿಕೆಗೆ ಅವಕಾಶ ಮಾಡಿಕೊಟ್ಟು ಎರಡನೇ ಅಂತದಲ್ಲಿ ಆ ಕಾರ್ಯ ಪ್ರಾರಂಭಿಸೋಣ ಎಂದರು.

ಉಂಡೆ ಕೊಬ್ಬರಿ ಖರೀದಿ: ನಫೆಡ್ ಸಂಸ್ಥೆಯಿಂದ ಏಜೆನ್ಸಿಗಳಿಗೆ ಮರುಪಾವತಿಗೆ ಕೇಂದ್ರಕ್ಕೆ ಮನವಿ

• ಉದಯವಾಹಿನಿ, ತುಮಕೂರು

ರೈಲ್ವೆ ಮತ್ತು ಜಲಶಕ್ತಿ ರಾಜ್ಯ ಖಾತೆ ಸಚಿವ, ಸಂಸದ ವಿ. ಸೋಮಣ್ಣ ಅವರು ನವದೆಹಲಿಯಲ್ಲಿ ಕೇಂದ್ರ ಕೃಷಿ, ರೈತರ ಕಲ್ಯಾಣ ಸಚಿವ ಶಿವರಾಜ ಸಿಂಗ್ ಚೌಹಾಣ್ ಅವರನ್ನು ಭೇಟಿ ಮಾಡಿ, ರಾಜ್ಯದಲ್ಲಿ ಉಂಡೆಕೊಬ್ಬರಿಗೆ ಸಂಬಂಧಪಟ್ಟಂತೆ ನಫೆಡ್ ಸಂಸ್ಥೆಯಿಂದ ಪಾವತಿಸಬೇಕಾದ 691 ಕೋಟಿ ರೂ. ಹಣವನ್ನು ರಾಜ್ಯದ ಸಂಬಂಧಪಟ್ಟ ಖರೀದಿ ಏಜೆನ್ಸಿಗಳಿಗೆ ಮರುಪಾವತಿಸಬೇಕೆಂದು ಮನವಿ ಸಲ್ಲಿಸಿದರು.

ಇದರಿಂದ ಕರ್ನಾಟಕ ರಾಜ್ಯದಲ್ಲಿ ತುಮಕೂರು, ಮಂಡ್ಯ, ಹಾಸನ, ಮೈಸೂರು, ಚಾಮರಾಜ ನಗರ, ಚಿತ್ರದುರ್ಗ, ಚಿಕ್ಕಮಗಳೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತೆಂಗು ಬೆಳೆಯುವ ರೈತರ ಹಿತಾಸಕ್ತಿ ಕಾಪಾಡಲು ಅನುಕೂಲವಾಗುತ್ತದೆ ಎಂದು ಸಚಿವರಿಗೆ ಮನವರಿಕೆ ಮಾಡಿದರು. ವಿಶೇಷವಾಗಿ ತುಮಕೂರು ಜಿಲ್ಲೆ ಹೆಚ್ಚಿನ ಪ್ರಮಾಣದಲ್ಲಿ ಉಂಡೆ ಕೊಬ್ಬರಿ ಉತ್ಪಾದಕ ಜಿಲ್ಲೆಯಾಗಿದ್ದು, ಈ ಜಿಲ್ಲೆಯ ರೈತರಿಗೆ ಸಹಾಯ ಮಾಡುವಂತೆ ಮನವಿ ಮಾಡಿದರು. ಸಚಿವರ ಮನವಿಗೆ ಸ್ಪಂದಿಸಿದ ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ಸಚಿವರು ಅತೀ ಶೀಘ್ರದಲ್ಲಿ ಮೊತ್ತವನ್ನು ಬಿಡುಗಡೆ ಮಾಡುವುದಾಗಿ ಭರವಸೆ ನೀಡಿದರು.

ಉದಯವಾಹಿನಿ ಚಿತ್ರ

ಈಗಾಗಲೇ 2599 ಮೆಟ್ರಿಕ್ ಟನ್‌ನಿಂದ 10500 ಮೆಟ್ರಿಕ್ ಟನ್ ಮಿಲ್ಲಿಂಗ್ ಕೊಬ್ಬರಿಯನ್ನು ಬೆಂಬಲ ಬೆಲೆ ಯೋಜನೆಯಡಿ ಹೆಚ್ಚಿನ ಪ್ರಮಾಣದಲ್ಲಿ ಖರೀದಿಗೆ ಅನುವು ಮಾಡಿಕೊಟ್ಟ ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ಸಚಿವರಿಗೆ ರಾಜ್ಯದ ರೈತರ ಪರವಾಗಿ ಸಚಿವ ಸೋಮಣ್ಣ ಅಭಿನಂದನೆ ಸಲ್ಲಿಸಿದರು.

ಶ್ರಮಣಧಾರೆಗಳ ಸಂಸ್ಕೃತಿ ಉತ್ಸವ: ಕಾ.ತ. ಚಿಕ್ಕಣ್ಣ

• ಉದಯವಾಹಿನಿ, ಮೈಸೂರು

ಮೈಸೂರಿನಲ್ಲಿ 'ಶ್ರಮಣಧಾರೆಗಳ ಸಂಸ್ಕೃತಿ ಉತ್ಸವವನ್ನು ಆಯೋಜಿಸಲಾಗುವುದು' ಎಂದು ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರದ ಅಧ್ಯಕ್ಷ ಕಾ.ತ. ಚಿಕ್ಕಣ್ಣ ತಿಳಿಸಿದರು. ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರದಿಂದ ಇಲ್ಲಿನ ರಂಗಾಯಣದ ಬಿ.ವಿ. ಕಾರಂತ ರಂಗ ಚಾವಡಿಯಲ್ಲಿ 'ಕನಕದಾಸ ಮತ್ತು ತತ್ತಪದ ಅಧ್ಯಯನ ಮುನ್ನೋಟ' ಕುರಿತು ವಿದ್ವಾಂಸರೊಂದಿಗೆ ಶನಿವಾರ ಏರ್ಪಡಿಸಿದ್ದ ಸಮಾಲೋಚನಾ ಗೋಷ್ಠಿಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

'ಎರಡು ದಿನಗಳ ಉತ್ಸವದಲ್ಲಿ ಸಂವಾದ, ಉಪನ್ಯಾಸ, ಮೂಲಧಾಟಿಯ ಪದಗಳ ಗಾಯನ ಇರಲಿದೆ. ಇದಕ್ಕಾಗಿ ವಿಶ್ವವಿದ್ಯಾಲಯಗಳ ಸಹಯೋಗ ಕೋರಲಾಗುವುದು. ವಿದ್ಯಾರ್ಥಿಗಳನ್ನು ಒಳಗೊಳಿಸಿಕೊಳ್ಳಲಾಗುವುದು. ಕೇಂದ್ರದಿಂದ ಆರ್ಥಿಕ ಮಿತಿಯಲ್ಲಿ ಕಾರ್ಯಸಾಧ್ಯವಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು' ಎಂದು ತಿಳಿಸಿದರು.

ಉದಯವಾಹಿನಿ ಚಿತ್ರ

'ಕೇಂದ್ರವು 13 ವರ್ಷಗಳಿಂದ ಕನಕದಾಸರ ಸಾಹಿತ್ಯವನ್ನು ಪ್ರಚುರಪಡಿಸಲು ವಿಚಾರಸಂಕಿರಣ, ಸಂವಾದ, ಪುಸ್ತಕಗಳ ಪ್ರಕಟಣೆ ಮೊದಲಾದ ಕಾರ್ಯದಲ್ಲಿ ತೊಡಗಿದೆ. ಈವರೆಗೆ 50 ಸಂಪುಟಗಳನ್ನು ಹೊರತಂದಿದ್ದು, ಕನಕರ ಸಾಹಿತ್ಯವನ್ನು 15 ಭಾಷೆಗಳಿಗೆ ಅನುವಾದಿಸಲಾಗಿದೆ. ಸಂಶೋಧಕರ ಅಧ್ಯಯನಕ್ಕೆ ಒಂದು 1 ಲಕ್ಷ ಅನುದಾನ ನೀಡುವ ಮೂಲಕ 18 ಗ್ರಂಥಗಳನ್ನು ಪ್ರಕಟಿಸಿದೆ. ಕಮ್ಮಟ, ಶಿಬಿರ ಸೇರಿದಂತೆ 250ಕ್ಕೂ ಹೆಚ್ಚು ಕಾರ್ಯಕ್ರಮಗಳನ್ನು ನಡೆಸಲಾಗಿದೆ. ಈವರೆಗೆ 50ಸಾವಿರ ವಿದ್ಯಾರ್ಥಿಗಳು ಈ ಕಾರ್ಯಕ್ರಮಗಳ ಪ್ರಯೋಜನ ಪಡೆದಿದ್ದಾರೆ' ಎಂದರು. ತತ್ವಪದ, ದಾಸರ ಅಧ್ಯಯನ, ಭಕ್ತಿ ಪರಂಪರೆ ಕುರಿತ ಕಾರ್ಯಕ್ರಮಗಳನ್ನು ವಿಸ್ತರಿಸಿಕೊಂಡು ಕೆಲಸ ಮಾಡುವ ಉದ್ದೇಶವಿದೆ ಎಂದರು.

ವಿದ್ಯಾರ್ಥಿಗಳಿಗೆ ತಿಳಿಸಲು

ಯುವಜನರು ವಿದ್ಯಾರ್ಥಿಗಳು ಹಾಗೂ ಮಕ್ಕಳನ್ನು ಗುರಿಯಾಗಿಟ್ಟುಕೊಂಡು ಕಾರ್ಯಕ್ರಮ ಆಯೋಜಿಸಲಿದ್ದೇವೆ. ಹಿಂದೆ, ಪ್ರೌಢಶಾಲೆ ವಿದ್ಯಾರ್ಥಿಗಳಿಗೆ ಪ್ರಬಂಧ ಸ್ಪರ್ಧೆ ಆಯೋಜಿಸಿ ಉತ್ತಮ ಪ್ರಬಂಧಗಳನ್ನು ಪುಸ್ತಕವಾಗಿ ಮಾಡಿ ಉಚಿತವಾಗಿ ಶಾಲೆಗಳಿಗೆ ಹಂಚಿದ್ದೆವು. ಸಚಿತ್ರದ ಮೂಲಕ ಮಕ್ಕಳಿಗೆ ಪರಿಚಯಿಸುವ ಕಾರ್ಯಕ್ರಮ ಮಾಡಿದ್ದೆವು' ಎಂದು ಮಾಹಿತಿ ನೀಡಿದರು.

ಬಾಲ್ಯದಲ್ಲಿಯೇ ಗುರಿ ಇಟ್ಟುಕೊಂಡು ಸಾಗಿ

• ಉದಯವಾಹಿನಿ, ತುಮಕೂರು

ಶ್ರೀ ಸಿದ್ಧಗಂಗಾ ಗ್ರಾಮಾಂತರ ಪ್ರೌಢಶಾಲಾ ವಿದ್ಯಾರ್ಥಿಗಳ ಕ್ರೀಡೆ, ಸಾಂಸ್ಕೃತಿಕ ಸಂಘದ ಉದ್ಘಾಟನೆಯನ್ನು ಡಾ. ಸಂತೋಷ ಹಾನಗಲ್ಲ ಕಾರ್ಯದರ್ಶಿಗಳು ಕನ್ನಡ ಅಭಿವೃದ್ಧಿ ಪ್ರಾಧಿಕಾರ ಬೆಂಗಳೂರು ಇವರು ನೆರವೇರಿಸಿ ವಿದ್ಯಾರ್ಥಿಗಳಲ್ಲಿ ಗುರಿ ಇರಬೇಕು ಗುರಿ ಮತ್ತು ಉದ್ದೇಶಗಳ ಮೂಲಕ ಸಾಧನೆ ಮಾಡಬೇಕು ಬಾಲ್ಯದಲ್ಲಿಯೇ ಗುರಿ ಇಟ್ಟುಕೊಂಡು ಸಾಗಿ ಬಂದಂತಹ ವಿಶ್ವ ಮಾನವರ ಸಂದೇಶಗಳನ್ನ ನಾವು ಓದಿ ಅರಿತುಕೊಂಡು ಆಚರಣೆ ಮಾಡಿದಾಗ ಬಹು ಎತ್ತರಕ್ಕೆ ಬೆಳೆಯಬಹುದು ಎಂದು ಆಶಯವನ್ನು ವ್ಯಕ್ತಪಡಿಸಿ ಗ್ರಾಮೀಣ ಮಕ್ಕಳ ಏಳಿಗೆಗೆ ತಾವು ಕೂಡ ನೆರವು ನೀಡುವ ಮೂಲಕವಾಗಿ ತಮ್ಮ ಮನದ ಹಿಂಗಿತವನ್ನು ವ್ಯಕ್ತಪಡಿಸಿದರು.

ಶಾಲಾ ಮುಖ್ಯ ಶಿಕ್ಷಕರಾದಂತಹ ಶ್ರೀಯುತ ವಿದ್ವಾನ್ ಹರಳೂರುಶಿವಕುಮಾರ್ ರವರು ಮಾತ ನಾಡಿ ಈ ಶಾಲೆ ಬೆಳೆದು ಬಂದ ವಿಧಾನವೇ ಒಂದು ವಿಶೇಷವಾದಂತದು ಪರಮಪೂಜ್ಯರ ದೂರದೃಷ್ಟಿಯಿಂದ ಗ್ರಾಮೀಣ ಬಡ ಜನತೆಯ ಹಿಂದುಳಿದವರ, ಹಿಂದುಳಿದ ಹೆಣ್ಣು ಮಕ್ಕಳ ಏಳಿಗೆಯನ್ನ ದೃಷ್ಟಿಯಲ್ಲಿ ಇಟ್ಟುಕೊಂಡು 1970ರಲ್ಲಿ ಶಾಲೆಯನ್ನು ತೆರೆದು ಗ್ರಾಮೀಣ ಪ್ರದೇಶದ ಬಡ ಜನರಿಗೆ ಆಸರೆಯಾಗಿದ್ದಾರೆ ಇಂತಹ ಸಂಸ್ಥೆಯಲ್ಲಿ ಮಕ್ಕಳುಗಳು ಓದುವುದೇ ಒಂದು ಪುಣ್ಯದ ಕೆಲಸ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕುಮಾರಿ ಪಲ್ಲವಿ ಅವರು ಪ್ರಾರ್ಥಿಸಿದರು ಕಾರ್ಯಕ್ರಮದ ನಿರೂಪಣೆಯನ್ನು ಭಾಷಾ ಶಿಕ್ಷಕಿಯಾದ ಜ್ಞಾನಪೂರ್ಣ ನಡೆಸಿ ಎಸ್ ರಾಜೇಶ್ ಅವರು ವಂದನಾರ್ಪಣೆ ಸಲ್ಲಿಸಿದರು ಈ ಸಮಾರಂಭದಲ್ಲಿ ನೂರಾರು ಜನ ವಿದ್ಯಾರ್ಥಿಗಳು ಪೋಷಕರು, ಶಿಕ್ಷಕರು ಭಾಗಿಯಾದರು.

ಉದಯವಾಹಿನಿ ಚಿತ್ರ

ಮಕ್ಕಳಲ್ಲಿ ಕಲಿಯುವ ಮನೋಭಾವವು ಎಂದೂ ಕುಂಠಿತವಾಗಬಾರದು ಸತತ ಅಭ್ಯಾಸಿ ಗಳಾಗಿ ತಮ್ಮ ಬದುಕಿನಲ್ಲಿ ತ್ಯಾಗ ಮನೋಭಾವನೆಯಿಂದ ತೊಡಗಿಸಿಕೊಂಡು ಮುನ್ನಡೆದರೆ ಯಶಸ್ಸು ಪಡೆಯಲು ಸಾಧ್ಯ, ಸಣ್ಣ ಸಣ್ಣ ಯಶಸ್ಸುಗಳಿಂದ ದೊಡ್ಡ ದೊಡ್ಡ ಪ್ರಗತಿ ಯನ್ನು ಕಾಣಲು ಸಾಧ್ಯವಾಗುತ್ತದೆ

-ಶ್ರೀ ಶಿವಸಿದ್ದೇಶ್ವರ ಮಹಾಸ್ವಾಮಿಗಳು

ಬುಡಕಟ್ಟು ಆದಿವಾಸಿ ಸಮುದಾಯಕ್ಕೆ ಮೂಲಭೂತ ಸೌಲಭ್ಯ ಒದಗಿಸುವಂತೆ ಮನವಿ

• ಉದಯವಾಹಿನಿ, ಪಿರಿಯಾಪಟ್ಟಣ

ಬುಡಕಟ್ಟು ಆದಿವಾಸಿ ಸಮುದಾಯಕ್ಕೆ ಕನಿಷ್ಠ ಮೂಲಭೂತ ಸೌಲಭ್ಯಗಳನ್ನು ಒದಗಿಸುವತ್ತ ಸರ್ಕಾರಗಳು ಗಮನ ಹರಿಸಬೇಕಿದೆ ಎಂದು ಪಿರಿಯಾಪಟ್ಟಣ ರೋಟರಿ ಐಕಾನ್ಸ್ ಸಂಸ್ಥೆಯ ಅಧ್ಯಕ್ಷ ಜೆ.ಎಸ್.ನಾಗರಾಜ್ ಮನವಿ ಮಾಡಿದರು. ವಿಶ್ವ ಬುಡಕಟ್ಟು ಆದಿವಾಸಿ ದಿನದ ಅಂಗವಾಗಿ ತಾಲ್ಲೂಕಿನ ಮಲಗನಕೆರೆ ಗಿರಿಜನ ಹಾಡಿಯಲ್ಲಿ ರೋಟರಿ ಐಕಾನ್ಸ್ ಸಂಸ್ಥೆಯು ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದರು.

ತಾಲ್ಲೂಕಿನ ವಿವಿ ದೆಡೆ ಅರಣ್ಯ ಪ್ರದೇಶದ ಅಂಚಿನಲ್ಲಿ ವಾಸಿಸುತ್ತಿರುವ ಬುಡಕಟ್ಟು ಸಮಾಜದ ಜನರಿಗೆ ವಾಸಿಸಲು ಸೂಕ್ತ ಮನೆ ಗಳು ಇಲ್ಲದಿರುವುದು ಬೇಸರದ ವಿಷಯವಾಗಿದ್ದು ಕಾಡು ಪ್ರಾಣಿಗಳ ಭಯದಿಂದಾಗಿ ಆತಂಕದಲ್ಲಿಯೇ ಜೀವನ ಸಾಗಿಸಬೇಕಾದ ಅನಿವಾರ್ಯ ಪರಿಸ್ಥಿತಿಯಲ್ಲಿ ಇದ್ದಾರೆ ಎಂದರು. ಕನಿಷ್ಠ ಮೂಲಭೂತ ಸೌಲಭ್ಯಗಳಾದ ಕುಡಿಯುವ ನೀರು, ವಿದ್ಯುತ್, ರಸ್ತೆ ವ್ಯವಸ್ಥೆಗಳು ಇಲ್ಲದೆ ತೊಂದರೆ ಅನುಭವಿಸುತ್ತಿರುವ ಬುಡಕಟ್ಟು ಸಮಾಜಕ್ಕೆ ನ್ಯಾಯ ಯುತವಾದ ಪರಿಹಾರ ದೊರಕಬೇಕಾದ ಅಗತ್ಯತೆ ಇದೆ ಎಂದರು. ರೋಟರಿ ಸಂಸ್ಥೆಯ ಖಜಾಂಚಿ, ವಕೀಲ ಬಿ. ಆರ್.ಗಣೇಶ್ ಮಾತನಾಡಿ ಬುಡಕಟ್ಟು ಸಮಾಜದ ಅಭಿವೃದ್ಧಿಗಾಗಿ ಸರ್ಕಾರ ವಿಶೇಷ ಅನುದಾನ ನೀಡುತ್ತಿದ್ದರೂ ಸಹ ಅರಣ್ಯ ಪ್ರದೇಶದ ಅಂಚಿನಲ್ಲಿರುವ ಬಹುತೇಕ ಹಾಡಿಗಳಲ್ಲಿ ಶಾಶ್ವತ ವಸತಿ ವ್ಯವಸ್ಥೆ ಇಲ್ಲದಿರುವುದು ಅಧಿಕಾರಿಗಳ ನಿರ್ಲಕ್ಷತೆಯನ್ನು ತೋರುತ್ತದೆ ಎಂದು ಆರೋಪಿಸಿದರು.

ಹಗಲಿನ ವೇಳೆಯಲ್ಲಿಯೇ ಕಾಡು ಪ್ರಾಣಿಗಳು ಇಲ್ಲಿನ ಗುಡಿಸಲುಗಳ ಪಕ್ಕದಲ್ಲಿ ಸುಳಿದಾಡುತ್ತಿವೆ ಎಂದು ಇಲ್ಲಿನ ವಾಸಿಗಳು ಹೇಳುತ್ತಿದ್ದು ಸರ್ಕಾರಗಳು ಇತ್ತ ಗಮನ ಹರಿಸಬೇಕೆಂದರು.

ಈ ಸಂದರ್ಭದಲ್ಲಿ ಸಂಸ್ಥೆಯ ವತಿ ಯಿಂದ ಬುಡಕಟ್ಟು ಆದಿವಾಸಿ ಸಮುದಾಯದ ಮಕ್ಕಳು, ಮಹಿಳೆಯರು, ಯುವಕರಿಗೆ ಸಿಹಿ ತಿನಿಸುಗಳನ್ನು ವಿತರಿಸ ಲಾಯಿತು. ರೋಟರಿ ಐಕಾನ್ಸ್ ಸಂಸ್ಥೆಯ ಕಾರ್ಯದರ್ಶಿ ಬಿ.ಎಸ್.ಪ್ರಸನ್ನ ಕುಮಾರ್, ಸದಸ್ಯರಾದ ಕೆ.ರಮೇಶ್, ಸಿ.ಎನ್.ವಿಜಯ್, ರವಿಚಂದ್ರ, ಸತೀಶ್ ಆರಾಧ್ಯ, ಡಿ.ಆರ್.ಧನಂಜಯ, ಡಾ.ಶರತ್ ಇದ್ದರು.

ಚೌಡೇಶ್ವರಿ ದೇವಸ್ಥಾನದ ವಿಮಾನ ಗೋಪುರ ಕಳಶ ಪ್ರತಿಷ್ಠಾಪನೆ, ಚಂಡಿಹೋಮ

• ಉದಯವಾಹಿನಿ, ಬಂಗಾರಪೇಟೆ

ನಮ್ಮ ಸನಾತ ಹಿಂದೂ ಧರ್ಮದಲ್ಲಿ ಹಲವಾರು ಸಂಪ್ರದಾಯ, ಪದ್ಧತಿ ಮತ್ತು ರೂಢಿ ಆಚರಣೆಗಳು ನಮಗೆ ದೈವತ್ವದತ್ತ ಕೊಂಡೊಯ್ಯುತ್ತದೆ. ಅಂತಾ ಪವಿತ್ರ ಆಚರಣೆಗಳಲ್ಲಿ ಶ್ರಾವಣಮಾಸದ ನಾಗರಪಂಚಮಿ ಬಹಳ ಮಹತ್ವದ್ದು, ಇಂತಹ ಪವಿತ್ರ ಶುಕ್ರವಾರದ ದಿನದಂದು ತಾಲ್ಲೂಕಿನ ಅಬ್ಬಿಗೀರಿ ಹೊಸಹಳ್ಳಿ ಗ್ರಾದದಲ್ಲಿ ಶಕ್ತಿ ದೇವಿ ಚೌಡೇಶ್ವರಿ ದೇವಸ್ಥಾನದ ವಿಮಾನ ಗೋಪುರ ಕಳಶ ಪ್ರತಿಷ್ಠಾಪನೆ ಮತ್ತು ಚಂಡಿಹೋಮ ನೆರವೇರಿಸಲಾಯಿತು.

ನಂತರ ಗ್ರಾಮ ಪಂಚಾಯಿತಿ ಉಪಾಧ್ಯಕ್ಷ ಚಿಕ್ಕ ಹೊಸಹಳ್ಳಿ ಮಂಜುನಾಥ್ ಮಾತನಾಡಿ ನೆತ್ತಿ ಬೆಲೆ, ಪಡವನಹಳ್ಳಿ ಚಿಕ್ಕ ಹೊಸಹಳ್ಳಿ ತೊರಗನ ದೊಡ್ಡಿ ಗ್ರಾಮಗಳ ಆರಾಧ್ಯ ದೇವಿ ಚೌಡೇಶ್ವರಿ ದೇವಿಯಾಗಿದ್ದು ಎಲ್ಲಾರ ಸಹಕಾರದೊಂದಿಗೆ ಚಿಕ್ಕದಾಗಿದ್ದ ದೇವಾಲಯವನ್ನು ದೊಡ್ಡದಾಗಿ ನಿರ್ಮಿಸಲಾಗಿದೆ ಪ್ರತಿ ವರ್ಷ ಫೆಬ್ರವರಿ ತಿಂಗಳಿನಲ್ಲಿ ಜಾತ್ರಾ ಮಹೋತ್ಸವ ಏರ್ಪಡಿಸಲಾಗುತ್ತಿದೆ, ಈ ಸಮಯದಲ್ಲಿ ರಾಜ್ಯದ ವಿವಿಧ ಮೂಲೆಗಳಿಂದ ಸಹಸ್ರಾರು ಭಕ್ತರು ಆಗಮಿಸುತ್ತಾರೆ , ಈ ದಿನ ಚಂಡಿ ಹೋಮ , ಕಳಶ ಪ್ರತಿಷ್ಠಾಪನೆ ಮಾಡಲಾಗಿದ್ದು ಸರ್ವ ಜನಾಂಗದ ಒಳಿತಿಗಾಗಿ ಪ್ರಾರ್ಥನೆ ಮಾಡಲಾದೆ ಎಂದರು. ಈ ಸಂದರ್ಭದಲ್ಲಿ ಗ್ರಾಮಸ್ಥರು, ಮುಖಂಡರು ಇದ್ದರು.

ಉದಯವಾಹಿನಿ ಚಿತ್ರ

ಇಷ್ಟಾರ್ಥಗಳ ಸಿದ್ದಿಗೆ ಚೌಡೇಶ್ವರಿ ದೇವಿ ಸಾಕ್ಷಿ

ಬಂಗಾರಪೇಟೆ ತಾಲ್ಲೂಕಿನ ಹುಲಿಬೆಲೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಅಬ್ಬಗೀರಿ ಹೊಸಹಳ್ಳಿ ಗ್ರಾಮದಲ್ಲಿ ತಾಲ್ಲೂಕಿನ ಗ್ರಾಮದಲ್ಲಿ 400 ವರ್ಷಗಳ ಹಿಂದಿನ ಐತಿಹಾಸಿಕ ಪ್ರಸಿದ್ಧವಾದ ಚೌಡೇಶ್ವರಿ ದೇವಾಲಯ ನಿರ್ಮಾಣವಾಗಿತ್ತು. ಅಂತಹ ದೇವಾಲಯವು ದೈವಿಕ ಶಕ್ತಿಯನ್ನು ಹೊಂದಿದ್ದ ಕಾರಣ ಭಕ್ತಾದಿಗಳು ತಮ್ಮ ಇಷ್ಟಾರ್ಥಗಳನ್ನು ದೇವರಿಗೆ ಒಪ್ಪಿಸುತ್ತಿದ್ದರು ತದನಂತರದ ದಿನಗಳ

ಅಂತರಾಳದಿಂದ... EDITORIAL

ಪಶ್ಚಿಮಘಟ್ಟ: ಒತ್ತುವರಿ ತೆರವಿಗಾಗಿ ಕಾರ್ಯಪಡೆ ರಚನೆ ಸ್ವಾಗತಾರ್ಹ

ಕೇರಳದ ವಯನಾಡ್ ಭಾಗದಲ್ಲಿ ಉಂಟಾದ ಭೂಕುಸಿತ ಮತ್ತು ನಮ್ಮ ರಾಜ್ಯದ ವಿವಿಧ ಕಡೆಗಳಲ್ಲಿ ಸಂಭವಿಸಿದ ಗುಡ್ಡ ಕುಸಿತ ಘಟನೆಗಳಿಂದಾಗಿ ಆಡಳಿತಯಂತ್ರ ಈಗಲಾದರೂ ಎಚ್ಚೆತ್ತುಕೊಂಡಂತಿದೆ. ದೇಶದ ಆರು ರಾಜ್ಯಗಳಲ್ಲಿ ಮೈಚಾಚಿರುವ ಪಶ್ಚಿಮಘಟ್ಟಗಳು, ಕರ್ನಾಟಕದ ಹತ್ತು ಜಿಲ್ಲೆಗಳಲ್ಲಿ ವ್ಯಾಪಿಸಿವೆ. ನಮ್ಮ ರಾಜ್ಯವೊಂದರಲ್ಲೇ ಈ ಘಟ್ಟಗಳ ಪ್ರದೇಶದಲ್ಲಿ ಎರಡು ಲಕ್ಷ ಎಕರೆಗೂ ಅಧಿಕ ಅರಣ್ಯ ಒತ್ತುವರಿಯಾಗಿದೆ ಎಂದು ಸರ್ಕಾರಿ ದಾಖಲೆಗಳು ಹೇಳುತ್ತಿವೆ.

ಅರಣ್ಯವನ್ನು ಒತ್ತುವರಿ ಮಾಡಿಕೊಂಡು ಬೆಳೆಸಿದ ತೋಟಗಳು ಮತ್ತು ಅಂತಹ ಪ್ರದೇಶಗಳಲ್ಲಿ ತಲೆ ಎತ್ತಿದ ಅನಧಿಕೃತ ರೆಸಾರ್ಟಗಳಿಂದಲೇ ಹೆಚ್ಚಿನ ಅನಾಹುತಗಳು ಸಂಭವಿಸುತ್ತಿವೆ ಎಂಬ ಉಲ್ಲೇಖವು ಅರಣ್ಯ ಇಲಾಖೆ ಈ ಹಿಂದೆಯೇ ಸಿದ್ಧಪಡಿಸಿದ್ದ ವರದಿಯಲ್ಲಿ ಇತ್ತು. ಒತ್ತುವರಿಯನ್ನು ತೆರವುಗೊಳಿಸುವ ಕೆಲಸ ಆದ್ಯತೆಯ ಮೇಲೆ ಆಗಬೇಕು ಎಂಬ ಅಂಶವನ್ನೂ ವರದಿ ಒಳಗೊಂಡಿತ್ತು.

ಆದರೆ, ಇದುವರೆಗೆ ಯಾವ ಕ್ರಮವನ್ನೂ ಜರುಗಿಸಿರಲಿಲ್ಲ. ನ್ಯಾಯಾಲಯದಲ್ಲಿರುವ ಪ್ರಕರಣಗಳನ್ನೇ ಮುಂದುಮಾಡಿ ಕಾಲಹರಣ ಮಾಡುತ್ತಾ ಬರಲಾಗಿತ್ತು. ಈಗ, ಇತ್ಯರ್ಥವಾಗದೇ ಇರುವ ಪ್ರಕರಣಗಳ ತ್ವರಿತ ವಿಲೇವಾರಿಗೆ ಅಡ್ವಕೇಟ್ ಜನರಲ್ ನೆರವು ಪಡೆಯಲು ಮುಂದಾಗಿರುವುದು ಕೂಡ ಸಕಾಲಿಕ, ಸೂಕ್ತ ನಿರ್ಧಾರ. ಕಳೆದ ಮಾರ್ಚ್‌ನಲ್ಲಿ ನಡೆಸಿದ ಸಮೀಕ್ಷೆಯ ಪ್ರಕಾರ, ಶಿವಮೊಗ್ಗ ಜಿಲ್ಲೆಯಲ್ಲಿ 80,775 ಎಕರೆ, ಉತ್ತರ ಕನ್ನಡ ಜಿಲ್ಲೆಯಲ್ಲಿ 28,308 ಎಕರೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ 25,978 ಎಕರೆ ಮತ್ತು ಕೊಡಗು ಜಿಲ್ಲೆಯಲ್ಲಿ 6,287 ಎಕರೆಯಷ್ಟು ಅರಣ್ಯ ಭೂಮಿ ಒತ್ತುವರಿಯಾಗಿದೆ. ಕೊಡಗು ಜಿಲ್ಲೆಯಲ್ಲಿ 2018ರಲ್ಲಿ ಸಂಭವಿಸಿದ ದುರಂತದ ಬಳಿಕವೂ ಒತ್ತುವರಿ ತೆರವಿಗೆ ಸರ್ಕಾರ ಯಾವುದೇ ಕ್ರಮ ಕೈಗೊಂಡಿಲ್ಲ. ದುರಂತದ ತೀವ್ರತೆ ಹೆಚ್ಚಿದ್ದಾಗ ಒಂದಿಷ್ಟು ಸದ್ದು ಮಾಡಿದ ಅರಣ್ಯ ಇಲಾಖೆ, ಬಳಿಕ ಕುಂಭಕರ್ಣ ನಿದ್ರೆಗೆ ಜಾರಿತ್ತು, ಈಗ ವಯನಾಡ್ ದುರಂತ ಮತ್ತು ಶಿರೂರು ಗುಡ್ಡ ಕುಸಿತದಂತಹ ಪ್ರಕರಣಗಳು ಇಲಾಖೆಯನ್ನು ಬಡಿದೆಬ್ಬಿಸಿವೆ.

ಅರಣ್ಯ ಅತಿಕ್ರಮಣ, ಹೆದ್ದಾರಿ ನಿರ್ಮಾಣ, ಕಲ್ಲು-ಮರಳಿನ ಗಣಿಗಾರಿಕೆ, ನದಿತಿರುವು ಕಾಮಗಾರಿ, ಪ್ರವಾಸೋದ್ಯಮದ ವಿಸ್ತರಣೆ ಮತ್ತು ರೆಸಾರ್ಟ್‌ಗಳ ನಿರ್ಮಾಣ ಎಲ್ಲವೂ ಹೆಚ್ಚುತ್ತಿವೆ. ಅತಿವೃಷ್ಟಿ, ಭೂಕುಸಿತ, ಮಣ್ಣಿನ ಶೀಘ್ರ ಸವಕಳಿ, ತೇವನಾಶದಂತಹ ಹವಾಗುಣ ಸಂಬಂಧಿ ಒತ್ತಡಗಳ ಜೊತೆಜೊತೆಗೇ ಅಭಿವೃದ್ಧಿಯ ಹೆಸರಿನಲ್ಲಿ ಬೀಳುತ್ತಿರುವ ಪೆಟ್ಟನ್ನೂ ಸಹಿಸಿಕೊಳ್ಳಬೇಕಾದ ಸವಾಲನ್ನು ಪಶ್ಚಿಮಘಟ್ಟಗಳು ಎದುರಿಸುತ್ತಿವೆ. 'ಪಶ್ಚಿಮಘಟ್ಟವನ್ನು ನಾವು ರಕ್ಷಿಸದಿದ್ದರೆ ನಾಳಿನ ಪೀಳಿಗೆ ನಮ್ಮನ್ನು ಕ್ರಮಿಸುವುದಿಲ್ಲ' ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಹೇಳಿದ್ದಾರಾದರೂ ಅವರ ಈ ಕಳಕಳಿಯು ಕ್ರಿಯೆಯಲ್ಲಿ ವ್ಯಕ್ತವಾಗಬೇಕಿದೆ.

ಪಶ್ಚಿಮಘಟ್ಟಗಳ ಜೀವಪರಿಸರವು ಭಾರತ ಮಾತ್ರವಲ್ಲ, ಇಡೀ ಜಗತ್ತಿನ ಅಮೂಲ್ಯ ಆಸ್ತಿ, ಇಲ್ಲಿನ ದಟ್ಟ ಅರಣ್ಯ ಮತ್ತು ಗುಡ್ಡ ಕಣಿವೆಗಳು ದಕ್ಷಿಣ ಭಾರತದ ಜಲ ವಾಯು ಸಮತೋಲನದ ಮೂಲಸೆಲೆ.

ಇಂತಹ ಪರಿಸರವನ್ನು ನಾವು ಹೆಚ್ಚು ಜತನದಿಂದ ಕಾಪಾಡಿಕೊಳ್ಳಬೇಕು. ಆದರೆ, ಈಚಿನ ದಶಕಗಳಲ್ಲಿ ಇಲ್ಲಿ ಮನುಷ್ಯನ ಹೆಜ್ಜೆಗುರುತುಗಳು ದಟ್ಟವಾಗುತ್ತಿವೆ. ಈ ಪರಿಸರ ಸೂಕ್ಷ್ಮ ಪ್ರದೇಶದಲ್ಲಿ ವರ್ಷದಿಂದ ವರ್ಷಕ್ಕೆ ಪ್ರವಾಸಿಗರ ಸಂಖ್ಯೆ ಏರುತ್ತಲೇ ಇದೆ. ಕೊಡಗು ಜಿಲ್ಲೆಯ ಉದಾಹರಣೆಯನ್ನೇ ತೆಗೆದುಕೊಳ್ಳುವುದಾದರೆ ಅಲ್ಲಿನ ಜನಸಂಖ್ಯೆ 5.60 ಲಕ್ಷದಷ್ಟಿದ್ದರೆ, ಕಳೆದ ವರ್ಷ ಅಲ್ಲಿಗೆ ಭೇಟಿ ನೀಡಿದ ಪ್ರವಾಸಿಗರ ಸಂಖ್ಯೆ 42 ಲಕ್ಷ. ಪರಿಸರದ ಧಾರಣಾ ಸಾಮರ್ಥ್ಯವನ್ನೂ ಅಲಕ್ಷಿಸಿ, ನೂರಾರು ರೆಸಾರ್ಟ್‌ಗಳು ಮತ್ತು ಕಟ್ಟಡಗಳ ನಿರ್ಮಾಣಕ್ಕೆ ಅನುಮತಿ ನೀಡಲಾಗಿದೆ. ಪ್ರವಾಸೋದ್ಯಮದ ಮಿತಿಮೀರಿದ ಚಟುವಟಿಕೆಗಳಿಂದ ಪಶ್ಚಿಮಘಟ್ಟಗಳ ಪ್ರದೇಶ ನಲುಗದಂತೆ ಮಾಡುವ ಹೊಣೆಗಾರಿಕೆಯೂ ಸರ್ಕಾರದ ಮೇಲಿದೆ.

ಪಶ್ಚಿಮಘಟ್ಟಗಳ ರಕ್ಷಣೆಗೆ ಏನೆಲ್ಲ ಕ್ರಮ ಕೈಗೊಳ್ಳಬೇಕು ಎಂಬುದರ ಪಟ್ಟಿಯನ್ನು ಮಾಧವ ಗಾಡೀಳ್ ಮತ್ತು ಕೆ. ಕಸ್ತೂರಿರಂಗನ್ ನೇತೃತ್ವದ ಸಮಿತಿಗಳು ತುಂಬಾ ಹಿಂದೆಯೇ ಮಾಡಿಕೊಟ್ಟಿವೆ. ವಿಪರ್ಯಾಸವೆಂದರೆ ಈ ವರದಿಗಳ ಶಿಫಾರಸುಗಳಿಗೆ ಪಶ್ಚಿಮಘಟ್ಟಗಳ ಪ್ರದೇಶ ವ್ಯಾಪ್ತಿಯ ರಾಜ್ಯ ಸರ್ಕಾರಗಳೇ ವಿರೋಧ ವ್ಯಕ್ತಪಡಿಸಿವೆ. ಇಲ್ಲಿ ಗಣಿಗಾರಿಕೆ ನಿಷೇಧ. ಅಭಿವೃದ್ಧಿ ಚಟುವಟಿಕೆಗೆ ಕಡಿವಾಣ ಸೇರಿದಂತೆ ಹಲವು ಉಪಕ್ರಮಗಳನ್ನು ತುರ್ತಾಗಿ ಕೈಗೊಳ್ಳಬೇಕಿದೆ ಎಂಬುದು ತಜ್ಞರ ಸಲಹೆ, ಸರ್ಕಾರ ಈ ಸಲಹೆಗೆ ಬೆಲೆ ಕೊಡಬೇಕು. ಪಶ್ಚಿಮಘಟ್ಟಗಳ ಸ್ಥಳೀಯರ ಭವಿಷ್ಯ ಹಾಗೂ ನಿಸರ್ಗದ ಹಿತ ಕಾಯುವಂತಹ ಕ್ರಮಗಳು ಇಂದಿನ ಜರೂರು: ಆ ದಿಸೆಯಲ್ಲಿ ಒತ್ತುವರಿ ತೆರವು ಕಾರ್ಯ ಒಂದು ಸಕಾರಾತ್ಮಕ ಹೆಜ್ಜೆ, ಈ ಕಾರ್ಯ ಸಮರ್ಪಕವಾಗಿ ನಡೆಯಲು ರಾಜಕೀಯ ಇಚ್ಛಾಶಕ್ತಿ ಪ್ರದರ್ಶಿಸಬೇಕಾಗಿರುವುದು ಕೂಡ ಅಷ್ಟೇ ಮುಖ್ಯ.

• ಹಿಂದಿನ ಸಂಚಿಕೆಯಿಂದ

ವಸ್ತುಗಳ ನಿಜ ಮೌಲ್ಯವನ್ನರಿತುಕೊಂಡರೆ, ಪ್ರಾಪಂಚಿಕ ಸಂಗತಿಗಳೆಲ್ಲ ಕ್ಷಣಿಕವೆಂದು ಮನದಟ್ಟಾಗುವುದು; ಅಂಥವನಿಗೆ ಮೃತ್ಯುಭಯವಿರದು. ಒಂದೇ ವ್ಯಕ್ತಿಯಲ್ಲಿ ಮೃತ್ಯುಬೀಜವನ್ನೂ ಕಾಣಬಹುದು, ಸತ್ಯವೆಂಬ ಅಮೃತತ್ವವನ್ನೂ ಕಾಣಬಹುದು. ನಾವು ಬಯಸಿದುದು ನಮಗೆ ಕಾಣಸಿಗುವುದು. ಪ್ರಾಪಂಚಿಕ ಬಂಧನಗಳನ್ನು ಮಾಡಿಕೊಳ್ಳುವುದೂ ಬೆಳೆಸುವುದೂ ಸುಲಭ; ಆದರೆ ಅಂತಹ ಬಂಧನಕ್ಕೆ ಮೃತ್ಯು ಎಂದು ಇನ್ನೊಂದು ಹೆಸರು. ''ವಿವೇಕಿಯಾದವನು ಹೇಗೂ ಇಂದ್ರಿಯಗಳನ್ನು ನಿಗ್ರಹಿಸಿರುತ್ತಾನೆ. ಕಾಮಕ್ರೋಧಗಳ ಹಿಡಿತದಿಂದ ತಪ್ಪಿಸಿಕೊಂಡಿರುತಾನೆ. ನೋವು ನಲಿವುಗಳನ್ನು ಒಂದೇ ರೀತಿ ಕಾಣುವುದು ಹೇಗೆಂದು ಅವನಿಗೆ ತಿಳಿದಿರುತ್ತದೆ. ಅವನಿಗೆ ಶಾಂತಿಯೂ ಸುಲಭ, ಅಮೃತತ್ವವೂ ಸುಲಭ. ಅವನ ಮಾತು, ಮನಸ್ಸು, ತ್ಯಾಗ ಯೋಗಗಳೆಲ್ಲ ಪರಬ್ರಹ್ಮನ ಮೇಲೆ ನೆಲೆಗೊಂಡಿರುತ್ತವೆ; ಅವನು ಮೃತ್ಯುವಿನಿಂದ ತಪ್ಪಿಸಿಕೊಳ್ಳುತ್ತಾನೆ. ಜ್ಞಾನಚಕ್ಷುವೆಂಬುದು ಅತ್ಯಂತ ಸೂಕ್ಷ್ಮವಾದದ್ದು. ಸತ್ಯವೆಂಬುದೇ ದೊಡ್ಡ ತಪಸ್ಸು. ಬಂಧನ ವೆಂಬುದು ದುಃಖಗಳಲ್ಲೆಲ್ಲ ಅತ್ಯಂತ ಘೋರವಾದದ್ದು. ತ್ಯಾಗವೆಂಬುದು ಮಹತ್ಸುಖದ ಮೂಲವು. ನಾವು ಬ್ರಹ್ಮನಿಂದ ಬ್ರಹ್ಮನ ಮೂಲಕವಾಗಿ ಹುಟ್ಟಿರುವೆವು. ಬ್ರಹ್ಮನಲ್ಲಿಯೇ ಮನಸ್ಸನ್ನು ತೊಡಗಿಸಿಕೊಂಡಿದ್ದರೆ, ಕೊನೆಗೆ ಬ್ರಹ್ಮನನ್ನೇ ಹೋಗಿ ಸೇರುವೆವು. ನಮ್ಮೊಳಗೇ ಗುಹೇಶ್ವರನಂತೆ ಅಡಗಿರುವ ಆತ್ಮನನ್ನು ಅರಸಬೇಕು. ಯುಧಿಷ್ಠಿರ: ''ಎಲ್ಲರಿಗೂ ಪ್ರಿಯನಾದ ಮನುಷ್ಯನು ಹೇಗಿರುವನು ಲೋಕವು ಹೇಳುವ ಪುಣ್ಯಗಳೆಲ್ಲವುನ್ನೊ ಸಂಪಾದಿಸಿರುವವನೆಂದು ಯಾರನ್ನು ಕುರಿತು ಹೇಳಬಹುದು ಭೀಷ್ಮ : ''ನೀನು ಹೇಳುವಂತಹ ವ್ಯಕ್ತಿಯು ಬಹುಶ್ರುತನೂ ಸಜ್ಜನನೂ ತಪಸ್ವಿಯೂ ಆಗಿರುವನು. ಅಹಂಕಾರದಿಂದ ಅವನ ರಕ್ತವು ಎಂದಿಗೂ ಕುದಿಯದು. ಕ್ರೋಧವಾಗಲಿ ಅತೃಪ್ತಿಯಾಗಲಿ ಅವನಲ್ಲಿ ಕಾಣಸಿಗದು. ಇಂದ್ರಿಯಗಳು ಅವನನ್ನು ಹಾದಿ ತಪ್ಪಿಸವು. ಪರವು ಸತ್ಯದ ಸಾಕ್ಷಾತ್ಕಾರದಿಂದ ಲಭಿಸುವ ಶಾಂತಿಯನ್ನು ಯಾವಾಗಲೂ ಅವನು ಅನುಭವಿಸುತ್ತಿರುವನು. ಯೂಧಿಷ್ಠಿರ : ಒಬ್ಬನು ಪಾಪಿಯಾಗುವುದು ಹೇಗೆ, ಪುಣ್ಯವಂತನಾಗುವುದು ಹೇಗೆ ತ್ಯಾಗಿಯಾಗಲು ಅವನಿಗೆ ಸಹಾಯ ಯಾವುದು ವಿಮೋಚನೆಯನ್ನು ಅವನು ಹೇಗೆ ಪಡೆಯುವನು ಭೀಷ್ಮ ಆಸೆಯೇ ಮನುಷ್ಯನು ಪಾಪಿಯಾಗಲು ಕಾರಣ. ವಿಷಯವಸ್ತುವನ್ನು ನೋಡಿದಾಗ ಆಸೆಯಿಂದ ಅದನ್ನು ಪಡೆಯಲೆತ್ನಿಸುವನು. ಆಸೆಯ ಮೂಲಕವಾಗಿ ಅದಕ್ಕೆ ಬಂಧಿತನಾಗುವನು. ಜೊತೆಗೇ ಅದರ ಮೇಲೆ ಲೋಭ, ಉಳಿದವುಗಳ ಮೇಲೆ ಹೇಯಭಾವನೆ, ವಿವೇಚನೆ ಹೊರಟು ಹೋಗುವಿಕೆ ಎಲ್ಲವೂ ಉಂಟಾಗುವುವು. ಮನಸ್ಸು ಭ್ರಮೆಗೀಡಾಗಿ ಮನುಷ್ಯನು ಸನ್ನಡತೆಯನ್ನು ಬಿಟ್ಟುಬಿಡುವನು. ತನ್ನಲ್ಲಿಲ್ಲದ ಮೌಲ್ಯಗಳನ್ನು ಇವೆಯೆಂದು ಭ್ರಮಿಸಿಕೊಂಡಿರುವುದೇ ಅವನ ಧೋರಣೆಯಾಗಿ, ಅವನು ಆಷಾಢ ಭೂತಿಯೆನಿಸಿಕೊಳ್ಳುವನು.

ಮುಂದುವರಿಯುವುದು...

ಏಳು ಪ್ರಶಸ್ತಿ ಮುಡಿಗೇರಿಸಿಕೊಂಡ ಮೊದಲ ವಿಮಾನ ನಿಲ್ದಾಣ

ಬೃಹತ್ ಸಮಾವೇಶದಲ್ಲಿ ಸರಣಿ ಪ್ರಶಸ್ತಿಗಳನ್ನು ಪಡೆದ ಮೊದಲ ಭಾರತೀಯ ವಿಮಾನ ಇದಾಗಿದೆ

• ಉದಯವಾಹಿನಿ, ಬೆಂಗಳೂರು

ಕರ್ನಾಟಕ ರಾಜ್ಯ ರಾಜಧಾನಿ ತನ್ನದೇ ಆದ ವಿಶೇಷತೆಗಳಿಂದ ಜಗತ್ತಿನಾದ್ಯಂತ ಗಮನ ಸೆಳೆಯುತ್ತಲೇ ಬಂದಿದೆ. ವಾರ್ಷಿಕವಾಗಿ ಮಿಲಿಯನ್ ಗಟ್ಟಲೇ ಜನರಿಗೆ ಸೇವೆ ನೀಡುರತ್ತಿರುವ ದೇವನಹಳ್ಳಿಯ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವು (ಕೆಐಎ) ವಿವಿಧ ವಿಭಾಗಗಳಲ್ಲಿ ಒಟ್ಟು 'ಸಪ್ತ ಪ್ರಶಸ್ತಿಗಳನ್ನು ಮುಡಿಗೇರಿಸಿಕೊಂಡಿದೆ. ಕ್ಯಾಲಿಫೋರ್ನಿಯಾದ ಪ್ರಮುಖ ನಗರವೊಂದರಲ್ಲಿ ನಡೆದ ಪ್ರತಿಷ್ಠಿತ ಏರ್‌ಪೋರ್ಟ್ ಫುಡ್ ಆಂಡ್ ಬೆವರೇಜ್ (ಎಫ್‌ಎಬಿ) ಜೊತೆಗೆ ಹಾಸ್ಪಿಟಾಲಿಟಿ ಕಾನ್ಫರೆನ್ಸ್ ಪ್ರಶಸ್ತಿಗಳಲ್ಲಿ ಬೆಂಗಳೂರಿನ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ (ಕೆಐಎ) 07 ಪ್ರಶಸ್ತಿಗಳು ಲಭಿಸಿವೆ ಎಂದು 'ಟೈಮ್ಸ್ ಆಫ್ ಇಂಡಿಯಾ' ವರದಿ ಮಾಡಿದೆ.

ಉದಯವಾಹಿನಿ ಚಿತ್ರ

ವಿಶ್ವದಲ್ಲಿ ಪ್ರಮುಖ ಕಾರ್ಯಕ್ರಮ

ಬೆಂಗಳೂರು ಇಂಟರ್‌ನ್ಯಾಶನಲ್ ಏರ್‌ಪೋರ್ಟ್ ಲಿಮಿಟೆಡ್ BIAL ನೀಡಿರುವ ಮಾಹಿತಿ ಪ್ರಕಾರ, ಬೆಂಗಳೂರು ಕೆಐಎ ನಿರ್ವಾಹಕರು ಹಾಗೂ ಏರ್‌ಪೋರ್ಟ್ ಕ್ಯಾಲಿಫೋರ್ನಿಯಾದ ಒಂಟಾರಿಯೊ ಬೃಹತ್ ಸಮಾವೇಶ ದಲ್ಲಿ ಸರಣಿ ಪ್ರಶಸ್ತಿಗಳನ್ನು ಪಡೆದ ಮೊದಲ ಭಾರತೀಯ ವಿಮಾನ ಇದಾಗಿದೆ ಎಂದು ಹೇಳಲಾಗಿದೆ.

ವಿಮಾನ ನಿಲ್ದಾಣದ ಫುಡ್ ಆಂಡ್ ಬೆವರೇಜ್ ಮತ್ತು ಹಾಸ್ಪಿಟಾಲಿಟಿ ರಂಗದಲ್ಲಿ ಬೆಂಗಳೂರು ಏರ್‌ಪೋರ್ಟ್ ಸಾಧನೆ ಕಂಡು ಈ ಪ್ರಶಸ್ತಿಗಳು ಧಕ್ಕಿವೆ. ಈ ವಿಭಾಗದಲ್ಲಿ ವಿಶ್ವದಲ್ಲಿ ಪ್ರಮುಖ ಕಾರ್ಯಕ್ರಮ ನಡೆದಿತ್ತು. ಇದರಲ್ಲಿ ಏರ್‌ಪೋರ್ಟ್ ಫುಡ್ ಆಂಡ್ ಬೆವರೇಜ್ ಉದ್ಯಮದಲ್ಲಿ ಉನ್ನತ ಗುಣಮಟ್ಟ ಹೊಂದಿರುವ ಕೆಐಎಗೆ ಎಫ್‌ಎಬಿ ಪುರಸ್ಕಾರ ನೀಡಲಾಯಿತು. ಬೆಂಗಳೂರು ಏರ್‌ಪೋರ್ಟ್‌ಗೆ ಬಂದ ಈ ಪ್ರಶಸ್ತಿಗಳು ರಾಜ್ಯದ ಹಿರಿಮೆಯನ್ನು ಹೆಚ್ಚಿಸಿದೆ. ಕೆಐಎ ಲೌಂಜ್‌ಗಳು ರಾಜ್ಯದ ಸಾಂಸ್ಕೃತಿಕ ಪರಂಪರೆ ಬಿಂಬಿಸುವಂತಹ ವಿನ್ಯಾಸ ಹೊಂದಿವೆ. ಪ್ರಯಾಣಿಕರಿಗೆ ಉತ್ತಮ ಅನುಭವ ನೀಡುತ್ತದೆ.

ಬೆಂಗಳೂರು ಏರ್‌ಪೋರ್ಟ್‌ಗೆ ಟರ್ಮಿನಲ್ ಎರಡರಲ್ಲಿ ಹೊಸದಾಗಿ 080 ಡೊಮೆಸ್ಟಿಕ್ ಲೌಂಜ್ ತೆರೆಯಲಾಗಿದ್ದು, ಇದು ಈ ಬಾರಿಯ 'ವರ್ಷದ ಏರ್‌ಪೋರ್ಟ್ ಲೌಂಜ್' ಪ್ರಶಸ್ತಿ ಪಡೆಯಲು ಸಹಾಯವಾಯಿತು ಎಂದು BIAL ತಿಳಿಸಿದೆ.

ಇನ್ನೂ ಬೆಂಗಳೂರು ವಿಮಾನ ನಿಲ್ದಾಣದಲ್ಲಿ ಮೊದಲ 'ಮಿಟ್ಟಿ ಕೆಫೆಗಳ' ಸ್ಥಾಪಿಸಲಾಗಿದೆ. ಇದು ಅಂಗವಿಕಲ ಪ್ರಯಾಣಿಕರಿಗೆ ಹೆಚ್ಚು ಪ್ರಯೋಜನಕಾರಿಯಾಗಿದೆ. ಈ ಮಿಟ್ಟಿ ಕೆಫೆ ಮತ್ತು ಬಿಐಎಎಲ್ ಸಹಯೋಗದ ಗೌರವಾರ್ಥ 'ಮಾನವೀಯ ಪ್ರಶಸ್ತಿ'ಗೆ ಏರ್‌ಪೋರ್ಟ್ ಭಾಜನವಾಗಿದೆ. ಬೆಂಗಳೂರು ಏರ್‌ಪೋರ್ಟ್‌ನಲ್ಲಿ ವಾರ್ಷಿಕ 25 ಮಿಲಿಯನ್ ಪ್ರಯಾಣಿಕರು ಸಂಚಾರ ನಡೆಸುತ್ತಾರೆ. ವಿಶೇಷ ವಿನ್ಯಾಸ, ಥೀಮ್ ನಲ್ಲಿ ಸ್ಥಾಪಿಸಲಾದ ಕೆಐಎ ಟರ್ಮಿನಲ್ 2 ಶುರುವಾದ ಬಳಿಕ ಅತ್ಯಧಿಕ ಪುರಸ್ಕಾರಗಳು ಸಂದಿವೆ. ಇನ್ನು ದೇಶದ ಮೂರನೇ ಅತೀ ದೊಡ್ಡ ಜನನಿಬಿಡ ಏರ್‌ಪೋರ್ಟ್‌ಗಳ ಸಾಲಿನಲ್ಲಿ ಬೆಂಗಳೂರು ಇದೆ.

ಸಪ್ತ ಪ್ರಶಸ್ತಿಗಳನ್ನು ಪಡೆದಿದ್ದಕ್ಕೆ ಬಿಐಎಎಲ್ ಮುಖ್ಯಸ್ಥ ಕೆನ್ನೆತ್ ಗುಲ್ಡ್ ಬ್ಜೆರ್ಗ್ ಅವರು ಪ್ರತಿಕ್ರಿಯಿಸಿ, ಎಫ್‌ಎಬಿ ಅವಾರ್ಡ್ಸ್‌ನಲ್ಲಿ ನಮ್ಮ ಏರ್‌ಪೋರ್ಟ್ ಪ್ರಮುಖ ಪ್ರಶಸ್ತಿ ಹಾಗೂ ಗೌರವಗಳನ್ನು ಪಡೆದುಕೊಂಡಿದೆ. ಹೀಗೆ ಗೌರವ ಪಡೆದ BIAL ಮೊದಲ ಭಾರತೀಯ ವಿಮಾನ ನಿಲ್ದಾಣ ಎನ್ನಲು ಹೆಮ್ಮೆ ಇದೆ ಎಂದರು. ಈ 080 ಡೊಮೆಸ್ಟಿಕ್ ಲೌಂಜ್ ವಿಶಾಲವಾಗಿದ್ದು, ನಮ್ಮ ಸಾಂಸ್ಕೃತಿಕ ಶ್ರೀಮಂತಿಕೆಯ ಪ್ರತಿಬಿಂಬವಾಗಿದೆ. ಆಧುನಿಕ ಸೌಕರ್ಯದಿಂದಲೇ ವಿನ್ಯಾಸಗೊಂಡರೂ ಸಹಿತ ಸಾಂಪ್ರದಾಯಿಕ ಅಂಶಗಳ ಒಳಗೊಂಡಿದೆ. ಹೀಗಾಗಿಯೇ ಇದೊಂದು ವಿಶೇಷತೆ ನಮ್ಮಲ್ಲಿದೆ ಎಂದು ತಿಳಿಸಿದರು.

ರಾಷ್ಟ್ರಧ್ವಜ ಸಂಹಿತೆ, ಶಿಷ್ಟಾಚಾರ ನಿಯಮಗಳು

• ಉದಯವಾಹಿನಿ, ಬೆಂಗಳೂರು

ಭಾರತೀಯರು 2024ರ ಆಗಸ್ಟ್ 15 ರಂದು 78ನೇ ಸ್ವಾತಂತ್ರ್ಯ ದಿನಾಚರಣೆ ಆಚರಣೆಗೆ ತಯಾರಿ ನಡೆಸಿದ್ದಾರೆ. ಈ ಸಂದರ್ಭದಲ್ಲಿ ರಾಷ್ಟ್ರಧ್ವಜವನ್ನು ಬಳಕೆ ಮಾಡಲಾಗುತ್ತದೆ. ಆದರೆ ರಾಷ್ಟ್ರಧ್ವಜ ಬಳಕೆ ಮಾಡುವ ಸಂದರ್ಭದಲ್ಲಿ ಸಂಹಿತೆ, ಶಿಷ್ಟಾಚಾರದ ನಿಯಮಗಳನ್ನು ಸಹ ಪಾಲನೆ ಮಾಡಬೇಕಿದೆ. ಆಗಸ್ಟ್ 15ರ ಗುರುವಾರ ಸ್ವಾತಂತ್ರ್ಯ ದಿನಾಚರಣೆಯನ್ನು ಎಲ್ಲಾ ಸರ್ಕಾರಿ ಕಚೇರಿ, ಗ್ರಾಮ ಪಂಚಾಯಿತಿ ಹಾಗೂ ಶಾಲಾ, ಕಾಲೇಜುಗಳಲ್ಲಿ ಕಡ್ಡಾಯವಾಗಿ ಆಚರಿಸಲಾಗುತ್ತದೆ. ಈ ಆಚರಣೆ ಸಮಯದಲ್ಲಿ ತಪ್ಪದೇ ರಾಷ್ಟ್ರಧ್ವಜ ಸಂಹಿತೆ, ಶಿಷ್ಟಾಚಾರ ಪಾಲನೆ ಮಾಡಬೇಕು ಎಂದು ಎಲ್ಲಾ ಅಧಕಾರಿ/ಸಿಬ್ಬಂದಿ ಗಳಿಗೆ ಸೂಚನೆ ನೀಡಲಾಗಿದೆ. ಶಾಲಾ, ಕಾಲೇಜು ವಿದ್ಯಾರ್ಥಿಗಳು, ಸಾರ್ವಜನಿಕರು ರಾಷ್ಟ್ರಧ್ವಜ ಬಳಕೆ ಮಾಡುವಾಗ ಕೇಸರಿ, ಬಿಳಿ, ಹಸಿರು ಕ್ರಮ ವಾಗಿರುವಂತೆ ನೋಡಿಕೊಳ್ಳಬೇಕು, ಕಾರ್ಯಕ್ರಮ ಮುಗಿದ ನಂತರ ರಾಷ್ಟ್ರಧ್ವಜವನ್ನು ಎಲ್ಲೆಂದರಲ್ಲಿ ಹಾಕಬಾರದು, ಕೆಲವರು ಬೈಕ್‌ನಲ್ಲಿ ಕಟ್ಟುವಾಗ ಕೆಳಗೆ ಕಟ್ಟುವರು, ಕೆಲವರು ಸೈಕಲ್‌ನಲ್ಲಿ ಅಳವಡಿಸಿಕೊಂಡು ಹೋಗುವಾಗ ಸೊಂಟದಲ್ಲಿ ಧ್ವಜವನ್ನು ಇಟ್ಟುಕೊಳ್ಳುವರು.

ಈ ರೀತಿ ಆಗದಂತೆ ಎಚ್ಚರ ವಹಿಸಬೇಕಿದೆ. ಆಗಸ್ಟ್ 15ರ ಸ್ವಾತಂತ್ರ್ಯೋತ್ಸವದಲ್ಲಿ ಪ್ಲಾಸ್ಟಿಕ್ ರಾಷ್ಟ್ರಧ್ವಜ ಮಾರಾಟ, ಬಳಕೆಯನ್ನು ನಿಷೇಧಿಸಲಾಗಿದೆ. ರಾಷ್ಟ್ರಧ್ವಜವನ್ನು ಕೈಯಿಂದ ನೂಲುವ, ಕೈಯಿಂದ ನೇಯ್ದ ಅಥವಾ ಯಂತ್ರದಿಂದ ಮಾಡಿರುವ ಹಾಗೂ ಹತ್ತಿ, ಪಾಲಿಸ್ಟಾರ್, ಉಣ್ಣೆ, ರೇಷ್ಮೆ ಖಾದಿಯಿಂದ ಮಾಡಿರುವ ಧ್ವಜಗಳನ್ನು ಬಳಸಬಹುದು.

ಉದಯವಾಹಿನಿ ಚಿತ್ರ

ರಾಷ್ಟ್ರಧ್ವಜ ಎಲ್ಲೆಂದರಲ್ಲಿ ಹಾಕಬೇಡಿ

ಪ್ಲಾಸ್ಟಿಕ್ ಧ್ವಜ ಮಾರಾಟ ಮಾಡುವಂತಹ ಅಂಗಡಿ ಮಾಲೀಕರುಗಳ ವಿರುದ್ಧ ಪ್ಲಾಸ್ಟಿಕ್ ಪರಿಸರ ಸಂರಕ್ಷಣಾ ಕಾಯ್ದೆಯಡಿಯಲ್ಲಿ ಕಾನೂನು ರೀತಿ ಕ್ರಮಕೈಗೊಳ್ಳಲಾಗುತ್ತ

ನಿರ್ವಹಣೆ ಕೊರತೆ: ಸೋರುತಿಹುದು ಸ್ವಾತಂತ್ರ್ಯ ಸೌಧದ ಮಾಳಿಗೆ

● ಸ್ವಚ್ಛಗೊಳಿಸುವಂತೆ ಕೋರಿ ಉತ್ತರಾಧಿಕಾರಿಗಳ ಸಂಘದ ಸದಸ್ಯರು ಮನವಿ , ಆದರೂ ಅಧಿಕಾರಿಗಳು ಸ್ಪಂದಿಸಿಲ್ಲ

• ಉದಯವಾಹಿನಿ ಚಿತ್ರದುರ್ಗ

ಸ್ವಾತಂತ್ರ್ಯ ಸಂಗ್ರಾಮದ ನೆನಪುಗಳ ಚಿತ್ರಶಾಲೆಯಾಗಬೇಕಿದ್ದ ನಗರದ ಹೋರಾಟಗಾರರ ಸ್ಮಾರಕ ಸೌಧ (ವೀರಸೌಧ) ನಿರ್ವಹಣೆ ಕೊರತೆಯಿಂದ ಪಾಳು ಬಿದ್ದಿದೆ. ಕ್ರೀಡಾಂಗಣ ರಸ್ತೆಯಲ್ಲಿರುವ ಈ ಭವನದ ಚಾವಣಿ ಸೋರುತ್ತಿದೆ, ಗೋಡೆಗಳು ಬಿರುಕು ಬಿಟ್ಟಿವೆ, ಕಿಟಕಿಯ ಗಾಜು ಒಡೆದು ಹೋಗಿವೆ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಜಿಲ್ಲೆಯ ಹೋರಾಟಗಾರರ ಪಾತ್ರ ಬಲುದೊಡ್ಡದು.

ತುರುವನೂರು, ಮರಡಿಹಳ್ಳಿ, ರಾಮಜೋಗಿಹಳ್ಳಿ, ರಾಮಗಿರಿ, ರಾಮಾಪುರ, ಹರಿಯಬ್ಬೆ, ಶ್ರವಣಿಗಿರಿ ಮುಂತಾದ ಗ್ರಾಮಗಳ ಹೆಚ್ಚಿನ ಜನರು ಸ್ವಾತಂತ್ರ್ಯ ಹೋರಾಟಗಾದಲ್ಲಿ ಭಾಗಿಯಾಗಿದ್ದರು.

ಜಿಲ್ಲೆಯಲ್ಲಿ 12 ಜನ ಹೋರಾಟಗಾರರಿದ್ದು, ಅಂದಿನ ದಿನಗಳ ನೆನಪುಗಳನ್ನು ಬಿಚ್ಚಿಡುತ್ತಾರೆ. ಜಿಲ್ಲೆಯಾದ್ಯಂತ 145 ಮಂದಿ ಸ್ವಾತಂತ್ರ್ಯ ಹೋರಾಟಗಾರರ ಪತ್ನಿಯರಿದ್ದು, ಮಾಸಾಶನ ಪಡೆಯುತ್ತಿದ್ದಾರೆ. ಹೋರಾಟಗಾರರು ಹಾಗೂ ಕುಟುಂಬ ಸದಸ್ಯರೆಲ್ಲರೂ ಸೇರಿ 'ಹೋರಾಟಗಾರರ ಉತ್ತರಾಧಿಕಾರಿಗಳ ಸಂಘ' ರಚಿಸಿದ್ದು ವಿವಿಧ ಚಟುವಟಿಕೆ ನಡೆಸುತ್ತಿದ್ದಾರೆ. ಯೋಗ ತರಬೇತಿ, ಆರೋಗ್ಯ ತಪಾಸಣಾ ಶಿಬಿರ, ಸಾಂಸ್ಕೃತಿಕ ಮತ್ತಿತರ ಕಾರ್ಯಕ್ರಮ ಆಯೋಜಿಸುತ್ತಿದ್ದಾರೆ. ಆದರೆ, ಸ್ಮಾರಕ ಸೌಧ ದುರಸ್ತಿ ಕಾಣದ ಹಿನ್ನೆಲೆಯಲ್ಲಿ ಸಂಘದ ಚಟುವಟಿಕೆಗಳಿಗೆ ತೊಡಕಾಗಿದೆ.

ವೀರಸೌಧಕ್ಕೆ ಕಾಯಕಲ್ಪ ನೀಡುವಂತೆ ಒತ್ತಾಯಿಸಿ ಸಂಘದ ಸದಸ್ಯರು ಹಲವು ವರ್ಷಗಳಿಂದಲೂ ಹೋರಾಟ ನಡೆಸುತ್ತಿದ್ದರೂ ಜಿಲ್ಲಾಡಳಿತ ತಿರುಗಿ ನೋಡದ ಕಾರಣ ಕಟ್ಟಡ ಪಾಳು ಬೀಳುವಂತಾಗಿದೆ. 77ನೇ ಸ್ವಾತಂತ್ರ್ಯ ದಿನಾಚರಣೆಗೆ ವಾರವಷ್ಟೇ ಉಳಿದಿದ್ದು ಈವರೆಗೂ ವೀರಸೌಧದ ಆವರಣವನ್ನು ಸ್ವಚ್ಛಗೊಳಿಸಿಲ್ಲ.

ಸ್ವಚ್ಛಗೊಳಿಸುವಂತೆ ಕೋರಿ ಉತ್ತರಾಧಿಕಾರಿಗಳ ಸಂಘದ ಸದಸ್ಯರು ಮನವಿ ಮಾಡಿದ್ದಾರೆ. ಆದರೂ ಅಧಿಕಾರಿಗಳು ಸ್ಪಂದಿಸಿಲ್ಲ.

ಕಟ್ಟಡದ ಹೊರ ಭಾಗದಲ್ಲಿರುವ ಧ್ವಜಸ್ತಂಭ, ವೇದಿಕೆ ಬಳಿ ಮುಳ್ಳುಗಿಡ ಬೆಳೆದಿದ್ದು, ಕಾಲಿಡಲಾಗದ ಸ್ಥಿತಿ ಇದೆ. ಆವರಣದಲ್ಲಿ ಹಾಕಲಾಗಿದ್ದ ಕಲ್ಲುಬೆಂಚುಗಳು ಮುರಿದು ಬಿದ್ದಿದ್ದು ಕೂರಲೂ ವ್ಯವಸ್ಥೆ ಇಲ್ಲ. ಮುಕ್ಕಾಲು ಎಕರೆ ಪ್ರದೇಶದಲ್ಲಿರುವ ಸ್ಮಾರಕ ಸೌಧದ ಆವರಣದಲ್ಲಿ 2 ಕಟ್ಟಡಗಳಿವೆ. ಒಂದು ಕಟ್ಟಡ ಸಭಾಂಗಣ ಹಾಗೂ ಕಚೇರಿ ಇದೆ. ಇನ್ನೊಂದು ಕಟ್ಟಡದಲ್ಲಿರುವ ಗ್ರಂಥಾಲಯವನ್ನು ಗ್ರಂಥಾಲಯ ಇಲಾಖೆ ನಡೆಸುತ್ತಿದೆ. ಕಟ್ಟಡ ನಿರ್ವಹಣೆಗೆ ಜಿಲ್ಲಾಡಳಿತ ಯಾವುದೇ ಅನುದಾನ ನೀಡುತ್ತಿಲ್ಲ, ಸ್ವಚ್ಛತೆಗೆ ಸಿಬ್ಬಂದಿಯನ್ನೂ ನೇಮಕ ಮಾಡದ ಕಾರಣ ಇಡೀ ಆವರಣ ಅವ್ಯವಸ್ಥೆಯ ಆಗರವಾಗಿದೆ ಎಂಬುದು ಸಾರ್ವಜನಿಕರ ದೂರು.

ಸ್ವಾತಂತ್ರ್ಯ ಹೋರಾಟಗಾರರ ನೆನಪಿನಲ್ಲಿ ಸರ್ಕಾರ 2006ರಲ್ಲಿ ಕಟ್ಟಡ ನಿರ್ಮಾಣ ಮಾಡಿದೆ. ಚಾವಣಿ ಸೋರುತ್ತಿದ್ದು ಮಳೆ ಬಂದರೆ ನೀರು ತುಂಬಿಕೊಳ್ಳುತ್ತದೆ.

ಗೋಡೆಗಳು ಬಿರುಕುಟ್ಟಿರುವ ಕಾರಣ ಅಲ್ಲಿಂದಲೂ ನೀರಿಳಿಯುತ್ತದೆ. ನೆಲಹಾಸು ಕಿತ್ತು ಹೋಗಿದ್ದು ಅಲ್ಲಲ್ಲಿ ತೇಪೆ ಹಾಕಲಾಗಿದೆ. ಹೋರಾಟಗಾರರ ಪೇಂಟಿಂಗ್‌ಗಳು, ಭಾವಚಿತ್ರಗಳಿದ್ದು ಅವುಗಳಿಗೆ ಸಂರಕ್ಷಣೆ ಇಲ್ಲವಾಗಿದೆ.

> ಖಾಸಗಿ ಕಂಪನಿಗಳ ಸಿಎಸ್‌ಆರ್ ಅನುದಾನ ಬಳಸಿ ಸಾತಂತ್ರ್ಯ ಹೋರಾಟಗಾರರ ಸ್ಮಾರಕ ಸೌಧ ದುರಸ್ತಿ ಮಾಡಿಸಲು ಪ್ರಯತ್ನಿಸಲಾಗುವುದು. ಜೊತೆಗೆ ಆವರಣ ಸ್ವಚ್ಛಗೊಳಿಸಲು ಸಿಬ್ಬಂದಿಗೆ ಸೂಚಿಸುತ್ತೇನೆ
>
> -ಬಿ.ಟಿ.ಕುಮಾರಸ್ವಾಮಿ, ಹೆಚ್ಚುವರಿ, ಜಿಲ್ಲಾಧಿಕಾರಿ

ಉದಯವಾಹಿನಿ ಚಿತ್ರ

ಬಿಲ್ ಕಟ್ಟಿಲ್ಲ; ವಿದ್ಯುತ್ ಪೂರೈಕೆ ಸ್ಥಗಿತ

ಹಲವು ವರ್ಷಗಳಿಂದಲೂ ವಿದ್ಯುತ್ ಬಿಲ್ ಪಾವತಿ ಮಾಡದ ಕಾರಣ ಸ್ವಾತಂತ್ರ್ಯ ಹೋರಾಟಗಾರರ ಭವನಕ್ಕೆ ವಿದ್ಯುತ್ ಪೂರೈಕೆ ಸ್ಥಗಿತಗೊಳಿಸಲಾಗಿದೆ. ಬೆಸ್ಕಾಂ ಅಧಿಕಾರಿಗಳು ಹಲವು ಬಾರಿ ಸೂಚನೆ ನೀಡಿದರೂ ಬಿಲ್ ಪಾವತಿ ಮಾಡದ ಹಿನ್ನೆಲೆಯಲ್ಲಿ ಸಂಪರ್ಕ ಬಂದ್ ಆಗಿದೆ. ಭವನ ನೋಡಿಕೊಳ್ಳಲು ಕಾವಲುಗಾರರೊಬ್ಬರನ್ನು ನೇಮಿಸಿದ್ದು ಅವರಿಗೆ ನಾವು ಮಾಸಿಕ ಕೇವಲ 2000 ವೇತನ ನೀಡುತ್ತಿದ್ದೇವೆ. ಜಿಲ್ಲಾಡಳಿತದಿಂದ ಕಾವಲುಗಾರ ಸಿಬ್ಬಂದಿಯನ್ನು ನೇಮಿಸಿ ಸರಿಯಾಗಿ ಭವನವನ್ನು ನಿರ್ವಹಣೆ ಮಾಡಬೇಕು' ಎಂಬುದು ಉತ್ತರಾಧಿಕಾರಿಗಳ ಸಂಘದ ಕೋರಿಕೆ.

> ಸ್ವಾತಂತ್ರ್ಯ ಸಂಗ್ರಾಮದಲ್ಲಿ ಜಿಲ್ಲೆಯ ಹೋರಾಟಗಾರರ ಪಾತ್ರ ದೊಡ್ಡದು

ಸುಗಮ ಸಂಚಾರಕ್ಕೆ ಪೊಲೀಸ್ ಇಲಾಖೆಯಿಂದ ಅನುವು

• ಉದಯವಾಹಿನಿ ಸಿರುಗುಪ್ಪ

ನಗರದ ಬಸ್ ನಿಲ್ದಾಣ, ತರಕಾರಿ ಮಾರುಕಟ್ಟೆ ಹತ್ತಿರದ ಹೂವು ಮತ್ತು ಹಣ್ಣು ಇನ್ನಿತರ ವ್ಯಾಪಾರದ ತಳ್ಳುಗಾಡಿ ಗಳನ್ನು ಹಿಂದಕ್ಕೆ ಸರಿಸಿದ ಪೋಲೀಸ್ ಇಲಾಖೆಯು ಇಟ್ಟಿಗೆಗಳಿಂದ ಗಡಿಯನ್ನು ನಿರ್ಮಿಸಿ ರಸ್ತೆಯ ಬಳಿ ಬಾರದಂತೆ ಸೂಚಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲಾಯಿತು. ನಮ್ಮ ತಳ್ಳುಗಾಡಿಗಳು ಇದ್ದಲ್ಲೇ ಇರುತ್ತವೆ ಸಾರ್ ಬೇರೆ ಕಡೆಯಿಂದ ವಾಹನಗಳಲ್ಲಿ ಬಂದು ತರಕಾರಿ ಮತ್ತು ಹಣ್ಣು ಮಾರುವವರಿಂದ ತೊಂದರೆಯಾಗುತ್ತಿದೆ ಎಂದು ಬೀದಿ ಬದಿ ವ್ಯಾಪಾರಿಗಳು ತಿಳಿಸಿದರು.

ಪಿ.ಎಸ್.ಐ ಪರಶುರಾಮ ಅವರು ಮಾತನಾಡಿ ವ್ಯಾಪಾರದ ಪೈಪೋಟಿಯಿಂದಾಗಿ ತಳ್ಳು ಗಾಡಿಯ ವ್ಯಾಪಾರಿಗಳು ರಸ್ತೆಯ ಪಕ್ಕಕ್ಕೆ ಬಂದು ನಿಲ್ಲುವ ಕಾರಣ ಗ್ರಾಹಕರು ರಸ್ತೆಯ ಮೇಲೆ ತಮ್ಮ ವಾಹನಗಳನ್ನು ನಿಲ್ಲಿಸಿ ಖರೀದಿಸುವುದರಿಂದ ಸಾರ್ವಜನಿಕರ ಪ್ರಯಾಣಕ್ಕೆ ತೊಂದರೆಯಾಗುತ್ತಿರುವ ಬಗ್ಗೆ ನಮ್ಮ ಗಮನಕ್ಕೆ ಬಂದಿರುವ ಕಾರಣ ಸಾರ್ವಜನಿಕರ ಹಿತಾದೃಷ್ಟಿಯಿಂದಾಗಿ ತಳ್ಳುಗಾಡಿಗಳನ್ನು ಹಿಂದಕ್ಕೆ ಸರಿಸಲಾಗಿದೆ. ಬಸ್ ನಿಲ್ದಾಣ ಮತ್ತು ತರಕಾರಿ ಮಾರುಕಟ್ಟೆಗಾಗಿ ಬರುವ ಸಾರ್ವಜನಿಕರಿಗೆ ಸದಾ ಕಿರಿಕಿರಿಯಾಗುತ್ತಿದ್ದ ಪರಿಣಾಮ ಸಂಚಾರ ಸುಗಮಗೊಳಿಸಲಾಗಿದೆ. ಖಾಸಗಿ ಬಸ್ ನಿಲುಗಡೆಯ ತೆರವಿಗಾಗಿ ಸಂಬಂದಪಟ್ಟ ಸಾರಿಗೆ ಅಧಿಕಾರಿಗಳಿಂದ ದೂರು ಅಥವಾ ಮನವಿ ಸಲ್ಲಿಕೆಯಾದರೆ ಸೂಕ್ತ ಕ್ರಮ ಕೈಗೊಳ್ಳಲಾಗುವುದೆಂದರು. ಸರ್ಕಾರಿ ಬಸ್ ನಿಲ್ದಾಣದ ಹತ್ತಿರ ರಸ್ತೆಗೆ ಅಡ್ಡಲಾಗಿ ನಿಲ್ಲುವ ಖಾಸಗಿ ಬಸ್‌ಗಗಳಿಂದ ವಾಹನಗಳ ಸಂಚಾರಕ್ಕೆ ಅಡ್ಡಿಯುಂಟಾಗುವ ಬಗ್ಗೆ ಸಾರ್ವಜನಿಕರು ಆರೋಪಿಸಿದರು. ಈ ಬಗ್ಗೆ ವ್ಯಪಸ್ಥಾಪಕ ತಿರುಮಲೇಶ ಅವರು ಪ್ರತಿಕ್ರಿಯಿಸಿ ನಿಲ್ದಾಣದ ಬಳಿ ನಿಲ್ಲುವ ಖಾಸಗಿ ಬಸ್‌ಗಳ ನಿಲುಗಡೆಯನ್ನು ತೆರವುಗೊಳಿಸುವಂತೆ ಈಗಾಗಲೇ ಮೂರು ಬಾರಿ ಮನವಿ ಮಾಡಲಾಗಿದ್ದು ಮತ್ತೊಮ್ಮೆ ಮನವಿ ಮಾಡಲಾಗುವುದೆಂದರು.

ಉದಯವಾಹಿನಿ ಚಿತ್ರ

ಜಿಡಗಾ ಶ್ರೀಮಠದಲ್ಲಿ ನಾಗದೇವರಿಗೆ ಹಾಲೆರೆದು ಪೂಜೆ

• ಉದಯವಾಹಿನಿ ಆಳಂದ

ಮುಗಳಖೋಡದ ಜೀಡಗಾ ಶ್ರೀಮಠದ ಪರಮಪೂಜ್ಯ ಡಾ. ಶ್ರೀ ಮುರುಘರಾಜೇಂದ್ರ ಮಹಾಸ್ವಾಮಿಗಳು ಇಂದು ಸುಕ್ಷೇತ್ರ ನವ ಕಲ್ಯಾಣ ಜೀಡಗಾ ಶ್ರೀಮಠದಲ್ಲಿ ನಾಗರ ಪಂಚಮಿಯನ್ನು ಭವ್ಯವಾಗಿ ಆಚರಿಸಿದರು.

ಪರಂಪರೆಯಂತೆ, ಶ್ರೀಮಠದ ನಾಗದೇವರ ಮಹಾಸ್ವಾಮಿಗಳವರು ವಿಶೇಷ ಪೂಜೆ ಸಲ್ಲಿಸಿ ಹಾಲು ಸಮರ್ಪಿಸಿದರು. ಈ ಪುಣ್ಯ ಸಂದರ್ಭದಲ್ಲಿ ಅನೇಕ ಭಕ್ತ ತಾಯಂದಿರು ತಮ್ಮ ಕುಟುಂಬ ಸಮೇತ ಭಾಗವಹಿಸಿದರು. ಮಕ್ಕಳಿಂದ ಪೂಜೆ ಹಾಗೂ ಶ್ರದ್ಧೆಯ ಆಚರಣೆ ಅತ್ಯಂತ ಸಂತೋಷದ ಕ್ಷಣವನ್ನಾಗಿ ಪರಿವರ್ತಿಸಿತು.

ಶಿವಯೋಗಿ ಜ್ಞಾನ ಮಂದಿರದ ಶಾಲಾ ಮಕ್ಕಳು ಪೂಜಾ ವಿಧಾನದಲ್ಲಿ ಭಾಗವಹಿಸಿ, ಸಂಭ್ರಮದಿಂದ ಕಾರ್ಯಕ್ರಮವನ್ನು ವೀಕ್ಷಿಸಿದರು.

ಈ ಆಚರಣೆ ನಾಗರ ಪಂಚಮಿಯ ಮಹತ್ವವನ್ನು ಉಲಾಶಿಸುವಂತಹ ಕಾರ್ಯಕ್ರಮವಾಗಿದ್ದು, ಸ್ಥಳೀಯ ಜನತೆ ಹಾಗೂ ಭಕ್ತರ ಮನದಲ್ಲಿ ಸದಾ ನೆನಪಾಗುವಂತಿತ್ತು. ಪವಿತ್ರ ನಾಗರ ಪಂಚಮಿ ಈ ದಿನ, ನಾವು ನಮ್ಮ ಮನಸ್ಸು ಮತ್ತು ಮನವನ್ನು ಶುದ್ಧಗೊಳಿಸಿ, ನಾಗದೇವರನ್ನು ಪೂಜಿಸುತ್ತೇವೆ. ಈ ಪೂಜೆಯ ಮಹತ್ವವನ್ನು ನಾವು ಎಲ್ಲರಿಗೂ ತಲುಪಿಸಬೇಕು. ಪ್ರಾಣಿ ಮತ್ತು ಪ್ರಕೃತಿಯ ರಕ್ಷಣೆ ನಮ್ಮ ಕರ್ತವ್ಯವಾಗಿದ್ದು, ನಾಗರ ಪಂಚಮಿಯು ನಮ್ಮ ಜೀವನದ ಈ ಸತ್ಯವನ್ನು ಮತ್ತೆ ನೆನಪಿಸುತ್ತದೆ. ನಾಗದೇವರ ಆಶೀರ್ವಾದದಿಂದ ನಮ್ಮ ಸಮಾಜದಲ್ಲಿ ಶಾಂತಿ, ಸಮೃದ್ಧಿ, ಮತ್ತು ಸಂತೋಷವಿರಲಿ ಎಂದು ಪ್ರಾರ್ಥಿಸುತ್ತೇನೆ. ನಿಮಗೆಲ್ಲರಿಗೆ ನಾಗರ ಪಂಚಮಿಯ ಶುಭಾಶಯಗಳು, ಎಂದು ಅವರು ಭಕ್ತರಿಗೆ ಆಶೀರ್ವಚನ ನೀಡಿದರು.

ಉದಯವಾಹಿನಿ ಚಿತ್ರ

> ನಾಗರ ಪಂಚಮಿ ನಮ್ಮ ಸಂಸ್ಕೃತಿಯ ಬಹಳ ಪ್ರಾಚೀನ ಆಚರಣೆಗಳಲ್ಲಿ ಒಂದು. ಇದು ಪ್ರಾಣಿ, ಪ್ರಕೃತಿ, ಮತ್ತು ಪರಮಾತ್ಮನನ್ನು ಒಗ್ಗೂಡಿಸುವ ದೇವೋಪಾಸನೆಯ ಪರಂಪರೆಯನ್ನು ಪ್ರತಿಬಿಂಬಿಸುತ್ತದೆ. ನಾಗದೇವತೆ ನಮಗೆ ಹಿತಕರವಾದ ಕೃಷಿ, ಆರೋಗ್ಯ, ಮತ್ತು ಸಂತೋಷದೊಂದಿಗೆ ನಮ್ಮ ಜೀವನವನ್ನು ಸಮೃದ್ಧಗೊಳಿಸಲು ಅನುಗ್ರಹಿಸುತ್ತಾರೆ ಎಂಬ ನಂಬಿಕೆ ಹಿಂದಿನಿಂದಲೂ ನಡೆದು ಬಂದಿದೆ
>
> -ಡಾ. ಶ್ರೀ ಮುರುಘರಾಜೇಂದ್ರ ಮಹಾಸ್ವಾಮಿಗಳು

ಅವೈಜ್ಞಾನಿಕ ಆಚರಣೆ ಬಿಟ್ಟು ವೈಜ್ಞಾನಿಕ ಆಚರಣೆ ಮಾಡಬೇಕು: ಅಧ್ಯಕ್ಷ ಪಾಟೀಲ

• ಉದಯವಾಹಿನಿ, ಚಿಂಚೋಳಿ

ವಿಶ್ವಗುರು ಮಹಾತ್ಮ ಬಸವಣ್ಣನವರು ಹಾಕಿಕೊಟ್ಟ ಮಾರ್ಗದಲ್ಲಿ ನಾವೆಲ್ಲರೂ ನಡೆದು ಅವರ ವಚನಗಳು ಪ್ರತಿಯೊಂದು ಮನೆಗಳಿಗೆ ತಲುಪಿಸುವ ಕಾರ್ಯ ಮಾಡಬೇಕಾಗಿದೆ ಎಂದು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಅಧ್ಯಕ್ಷ ಶರಣುಪಾಟೀಲ ಮೋತಕಪಳ್ಳಿ ಹೇಳಿದರು.

ಪಟ್ಟಣದ ಚಂದಾಪೂರದ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯಲ್ಲಿ ನೀಲಾಂಬಿಕ ಸೇವಾ ಟ್ರಸ್ಟ್ ಮತ್ತು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಹಾಗೂ ಬಸವಪರ ಸಂಘಟನೆಗಳ ಸಯೋಗದಲ್ಲಿ ನಾಗರ ಪಂಚಮಿಯನ್ನು ಬಸವ ಪಂಚಮಿಯಾಗಿ ಆಚರಣೆ ಮಾಡಿ ಬಡರೋಗಿಗಳಿಗೆ ಹಾಲು ಹಣ್ಣುಹಂಪಲು ವಿತರಣೆ ಮಾಡಿ ಮಾತನಾಡಿದ ಅವರು, ಬಸವಣ್ಣನವರು ಗುಡಿ ಗೋಪುರ ದೇವಾಸ್ಥಾನಗಳಿಗೆ ತೆರಳಿ ದೇವರನ್ನು ಹುಡುಕುವ ಬದಲು ಕೈಯಲ್ಲಿ ಲಿಂಗ ಹಿಡಿದು ದೇವರ ಧ್ಯಾನ ಮಾಡಿದರೆ ದೇವರು ಒಲಿಯುವಂತೆ ಮಾಡಿದ ಬಸವಣ್ಣನವರು ಪ್ರತಿಯೋಬ್ಬರಿಗೆ ಲಿಂಗವನ್ನು ನೀಡಿದ್ದಾರೆ ನಾವೆಲ್ಲರೂ ಮೂಡನಂಬಿಕೆಯಿಂದ ಹೊರಬಂದು ವೈಜ್ಞಾನಿಕ ಚಿಂತನೆ ಮಾಡಿ ಸರಿಯಾದ ದಾರಿಯಲ್ಲಿ ನಡೆಯಬೇಕು, ಹಾವು ಹಾಲು ಕುಡಿಯುವುದಿಲ್ಲ ಗಾಳಿಯ ಮೇಲೆ ಜೀವಿಸುತ್ತದೆ ಹುಳಗಳು ತಿಂದರು ಜೀರ್ಣವಾಗದೆ ಹೊರಗಡೆ ಉಗುಳುತ್ತದೆ ಹಾಗೆ ಅವೈಜ್ಞಾನಿಕ ಆಚರಣೆ ಬಿಟ್ಟು ವೈಜ್ಞಾನಿಕ ಮನೋಭಾವನೆ ಬೆಳೆಸಿಕೊಂಡು ಆಚರಣೆಗಳು ಮಾಡಬೇಕು ಎಂದರು.

ಶಾಂತವೀರ ಹೀರಾಪೂರ, ಶಕುಂತಲಾ ಹುಲಿ, ಟಿಹೆಚ್‌ಓ ಮಹ್ಮದ್ ಗಫಾರ, ಪಿಎಸ್‌ಐ ಗಂಗಮ್ಮಾ, ಎಎಂಒ ಡಾ.ಸಂತೋಷ ಪಾಟೀಲ ಮಾತನಾಡಿದರು. ಸೂರ್ಯಕಾಂತ ಹುಲಿ ಸ್ವಾಗತಿಸಿದರು, ಪ್ರೊ.ಮಲ್ಲಿಕಾರ್ಜುನ ಪಾಲಾಮೋರ್ ನಿರೂಪಿಸಿದರು, ಕಾಶಿನಾಥ ಹುಣಜೆ ವಂದಿಸಿದರು. ಈ ಸಂದರ್ಭದಲ್ಲಿ ನಂದಿಕುಮಾರ ಪಾಟೀಲ, ವಿರೇಶ ಎಂಪಳ್ಳಿ, ನೀಲಕಂಠ ಸೀಳಿನ, ಅಜೀತ್ ಪಾಟೀಲ, ರೇವಣಸಿದ್ದಯ್ಯ ಹಿರೇಮಠ, ಆನಂದ ಹಿತ್ತಲ, ಜಗನ್ನಾಥ ಇದಲಾಯಿ, ಮಲ್ಲಿಕಾರ್ಜುನ, ಸಂಜುಪಾಟೀಲ, ಜಗನ್ನಾಥ ಸಾಲೆಬೀರನಳ್ಳಿ, ಶಂಕರ ಶಿವಪೂರಿ, ಶಿವಸ್ವಾಮಿ, ಸುರೇಶ ದೇಶಪಾಂಡೆ, ಸಂತೋಷ ಕಡಗದ, ಅನೇಕರಿದ್ದರು.

ಉದಯವಾಹಿನಿ ಚಿತ್ರ

> ವಚನ ಸಾಹಿತ್ಯ ದಾಸ ಸಾಹಿತ್ಯ ಅತ್ಯಂತ ಶ್ರೇಷ್ಠವಾದ ವಚನಗಳಾಗಿದ್ದು ಬಸವಾದಿ ಶರಣರ ವಚನಗಳೆ ನಮಗೆಲ್ಲ ದಾರಿದೀಪವಾಗಿವೆ, ಮೂಡನಂಬಿಕೆ ಹೋಗಲಾಡಿಸಲು ಬಸವಣ್ಣನವರು 12ನೇ ಶತಮಾನದಲ್ಲಿಯೆ ಹೋರಾಡಿ ಅಂತರ್ಜಾತಿ ವಿವಾಹ ಮಾಡಿಸುವ ಮೂಲಕ ಯಾವುದೇ ಜಾತಿಧರ್ಮ ಎನ್ನದೆ ನಾವೆಲ್ಲರೂ ಒಂದೇ ಎಂದು ತೋರಿಸಿಕೊಟ್ಟಿದ್ದಾರೆ
>
> -ಶಂಕರ ರಾಠೋಡ, ತಾಪಂ ಇಓ

ಬಾಕಿ ವೇತನ ಬಿಡುಗಡೆಗೆ ಆಗ್ರಹಿಸಿ ಪ್ರತಿಭಟನೆ

• ಉದಯವಾಹಿನಿ ಶಿಗ್ಗಾವಿ

ತಾಲ್ಲೂಕಿನ ಬಂಕಾಪುರ ಪಟ್ಟಣದ ಪುರಸಭೆ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹೊರ ಗುತ್ತಿಗೆ ವಾಹನ ಚಾಲಕರು ಮತ್ತು ಲೋಡರ್ಸ್ ಕಾರ್ಮಿಕರ 10 ತಿಂಗಳ ಬಾಕಿ ವೇತನ, 14 ತಿಂಗಳ ಪಿ.ಎಫ್ ಮತ್ತು ಇಎಸ್‌ಐ ಪಾವತಿಸಬೇಕು ಎಂದು ಆಗ್ರಹಿಸಿ ಶುಕ್ರವಾರ ಹೊರಗುತ್ತಿಗೆ ವಾಹನ ಚಾಲಕರ ಸಂಘದ ಪದಾಧಿಕಾರಿಗಳು ಪುರಸಭೆಯ ಎದುರು ಪ್ರತಿಭಟನೆ ನಡೆಸಿದರು.

ಹೊರಗುತ್ತಿಗೆ ವಾಹನ ಚಾಲಕರ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ರಾಜಪ್ಪ ಹೊಸಮನಿ ಮಾತನಾಡಿ, ಹೊರಗುತ್ತಿಗೆ ವಾಹನ ಚಾಲಕರು ಮತ್ತು ಲೋಡರ್ ಸಿಬ್ಬಂದಿಯ ವೇತನವನ್ನು ಪ್ರತಿ ತಿಂಗಳು 5ನೇ ದಿನಾಂಕದೊಳಗೆ ಪಾವತಿಸಬೇಕೆಂದು ಸರ್ಕಾರದ ಆದೇಶವಿದ್ದರೂ ಸ್ಥಳೀಯ ಬಂಕಾಪುರ ಪುರಸಭೆ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹೊರಗುತ್ತಿಗೆ ವಾಹನ ಚಾಲಕರು ಮತ್ತು ಲೋಡರ್ ಸಿಬ್ಬಂದಿಗೆ ಕಳೆದ 10 ತಿಂಗಳಿಂದ ವೇತನ ಪಾವತಿಸಿಲ್ಲ. 14 ತಿಂಗಳ ಪಿ.ಎಫ್-ಇಎಸ್‌ಐ ಪಾವತಿಸಿಲ್ಲ.

ಈ ಬಗ್ಗೆ ಹಲವು ಬಾರಿ ಮುಖ್ಯಾಧಿಕಾರಿಗಳಿಗೆ ಮೌಖಿಕವಾಗಿ ಗಮನಕ್ಕೆ ತಂದಿದ್ದು, ಆದಾಗ್ಯೂ, ಈ ವರೆಗಿನ ವೇತನ ಪಾವತಿ ಮಾಡಿರುವುದಿಲ್ಲ, ಹೊರಗುತ್ತಿಗೆ ಕಾರ್ಮಿಕರು ಬಡವರಿದ್ದು, ಆರ್ಥಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿದವರಾಗಿದ್ದು ಜೀವನ ನಡೆಸಲು ತೀರಾ ತೊಂದರೆ ಆಗಿದೆ.

ತಕ್ಷಣ ಗುತ್ತಿಗೆ ವಾಹನ ಚಾಲಕರ ಹಾಗೂ ಲೋಡರ್ಸ್‌ಗಳ ವೇತನವನ್ನು ಪಾವತಿಸಬೇಕು ಎಂದು ಆಗ್ರಹಿಸಿದರು. ಜಿಲ್ಲಾ ಘಟಕದ ಉಪಾಧ್ಯಕ್ಷ ಶಿವರಾಜ್ ಕಟ್ಟಿಮನಿ, ಕಾರ್ಯದರ್ಶಿ ಗುರುನಾಥ್ ಅಡಿವೆಣ್ಣನವರ, ಖಜಾಂಚಿ ರಮೇಶ್ ಭೋವಿ ನೇತೃತ್ವ ವಹಿಸಿದ್ದರು.

ಉದಯವಾಹಿನಿ ಚಿತ್ರ

ಇಂಡಿಯ ನಿಂಬೆ ದೆಹಲಿಯಲ್ಲಿ ಪ್ರದರ್ಶನ

• ಉದಯವಾಹಿನಿ ಇಂಡಿ

ಇಂಡಿಯ ನಿಂಬೆ ದೆಹಲಿಯಲ್ಲಿ 3 ದಿನಗಳ ಕಾಲ ಬಯೋಟೆಕ್ ಇಂಡಿಯಾ ಪ್ರದರ್ಶನ ಮೇಳದಲ್ಲಿ ಪ್ರದರ್ಶನಗೊಂಡಿದೆ. ಭಾರತದ ಪ್ರಮುಖ ವ್ಯಾಪಾರ ಮೇಳವು ನ್ಯಾಚುರಲ್ ಎಕ್ಸಪೋ ಇಂಡಿಯಾ ಸಾವಯುವ ಮತ್ತು ನೈಸರ್ಗಿಕ ಉತ್ಪನ್ನಗಳ ಪ್ರದರ್ಶನದಲ್ಲಿ ಇಂಡಿ ನಿಂಬೆಯನ್ನು ತಡವಲಗಾ ಗ್ರಾಮದ ರೈತ ಭೀಮರಾಯ ಹಿರಾಪುರ ಸಾವಯುವ ನಿಂಬೆ ಬೆಳೆದು ಪ್ರದರ್ಶಿಸಿದ್ದಾರೆ. ಇಂಡಿಯ ತೋಟಗಾರಿಕೆ ಹಿರಿಯ ಸಹಾಯಕ ನಿರ್ದೇಶಕ ಎಚ್.ಎಸ್.ಪಾಟೀಲ ಮತ್ತು ರೈತ ಭೀಮರಾಯ ಹಿರಾಪುರ ಕರ್ನಾಟಕ ಪ್ರತಿನಿಧಿಯಾಗಿ ಪಾಲ್ಗೊಂಡಿದ್ದರು. ರೈತರು, ಎಫ್‌ಪಿಒಗಳು, ಉತ್ಪಾದಕರು, ತಯಾರಕರು, ಖರೀದಿದಾರರು, ಆಮದುದಾರರು, ರಫ್ತುದಾರರು ಈ ಪ್ರದರ್ಶನದಲ್ಲಿ ಪಾಲ್ಗೊಂಡಿದ್ದ

ದಿನ ಭವಿಷ್ಯ

ರಾಹುಕಾಲ	ಸಾಯಂಕಾಲ	04:30 ರಿಂದ 06:00
ಗುಳಿಕ ಕಾಲ	ಮಧ್ಯಾಹ್ನ	03:00 ರಿಂದ 04:30
ಯಮಗಂಡ ಕಾಲ	ಮಧ್ಯಾಹ್ನ	12:00 ರಿಂದ 01:30

ಮೇಷ ಕೆಲವರು ನಿಮಗೆ ಏನನ್ನಾದರೂ ಕಲಿಯಲು ಬಹಳ ವಯಸ್ಸಾಗಿದೆಯೆಂದು ಭಾವಿಸಬಹುದು. ಆದರೆ ಅದು ನಿಜವಲ್ಲ – ನಿಮ್ಮ ಪ್ರಖರ ಮತ್ತು ಸಕ್ರಿಯ ಮನಸ್ಸಿನಿಂದ ನೀವು ಹೊಸ ವಿಷಯಗಳನ್ನು ಸುಲಭವಾಗಿ ಕಲಿಯುವಿರಿ.

ವೃಷಭ ಮಾನಸಿಕ ಶಾಂತಿಗಾಗಿ ನಿಮ್ಮ ಒತ್ತಡವನ್ನು ಪರಿಹರಿಸಿ. ನೀವು ಸಾಲ ತೆಗೆದುಕೊಳ್ಳಲು ಹೊರಟಿದ್ದರೆ ಮತ್ತು ಈ ಕೆಲಸದಲ್ಲಿ ದೀರ್ಘಕಾಲ ತೊಡಗಿಸಿಕೊಂಡಿದ್ದರೆ, ಇಂದು ನೀವು ಸಾಲ ಪಡೆಯಬಹುದು.

ಮಿಥುನ ನೀವು ಕೆಲವು ಉನ್ನತ ವ್ಯಕ್ತಿಗಳನ್ನು ಭೇಟಿಯಾಗಬಹುದಾದ್ದರಿಂದ ಗಾಬರಿಯಾಗಬೇಡಿ ಮತ್ತು ವಿಶ್ವಾಸ ಕಳೆದುಕೊಳ್ಳದಿರಿ. ಇದು ವ್ಯಾಪಾರಕ್ಕೆ ಬಂಡವಾಳದಂತೆ ಉತ್ತಮ ಆರೋಗ್ಯಕ್ಕೆ ಅಗತ್ಯವಾಗಿದೆ.

ಕರ್ಕಾಟಕ ನಿಮ್ಮ ಕೆಟ್ಟ ಚಟಗಳು ನಿಮ್ಮನ್ನು ನಾಶಗೊಳಿಸುತ್ತವೆ. ನೀವು ನಿಮ್ಮ ಇಂದಿನ ದಿನವನ್ನು ಉತ್ತಮಗೊಳಿಸಲು ಕಳೆದ ದಿನಗಳಲ್ಲಿ ಹಣವನ್ನು ಹೂಡಿಕೆ ಮಾಡಿದ್ದರೆ, ಅದರ ಪ್ರಯೋಜನವನ್ನು ಇಂದು ನೀವು ಪಡೆಯಬಹುದು.

ಸಿಂಹ ಹೊರಾಂಗಣ ಕ್ರೀಡೆ ನಿಮ್ಮನ್ನು ಸೆಳೆಯುತ್ತದೆ–ಧ್ಯಾನ ಮತ್ತು ಯೋಗ ಲಾಭ ತರುತ್ತವೆ. ಎಲ್ಲಾದರೂ ಹೂಡಿಕೆ ಮಾಡಿರುವ ಜನರು, ಇಂದಿನ ದಿನ ಅವರಿಗೆ ಆರ್ಥಿಕ ನಷ್ಟ ಸಂಭವಿಸಬಹುದು.

ಕನ್ಯಾ ನೀವು ಇತರರೊಡನೆ ನಿಮ್ಮ ಖುಷಿಯ ಕ್ಷಣಗಳನ್ನು ಹಂಚಿಕೊಳ್ಳುತ್ತಿದ್ದಂತೆ ನಿಮ್ಮ ಆರೋಗ್ಯ ಅರಳುತ್ತದೆ. ಆದರೆ ಇದನ್ನು ನಿರ್ಲಕ್ಷಿಸುವುದು ನಿಮಗೆ ತೊಂದರೆ ತರುತ್ತದೆ. ಇಂದು ನೀವು ಸುಲಭವಾಗಿ ಬಂಡವಾಳ ಪಡೆಯಬಹುದು.

ತುಲಾ ಯಾವುದಾದರೂ ಸೃಜನಾತ್ಮಕ ಕೆಲಸದಲ್ಲಿ ನಿಮ್ಮನ್ನು ತೊಡಗಿಸಿಕೊಳ್ಳಿ. ಸೋಮಾರಿಯಾಗಿ ಕುಳಿತುಕೊಳ್ಳುವ ನಿಮ್ಮ ಅಭ್ಯಾಸ ಮಾನಸಿಕ ಶಾಂತಿಗೆ ಮಾರಣಾಂತಿಕವಾಗಬಹುದು.

ವೃಶ್ಚಿಕ ನೀವು ಯಾವುದೇ ಹೊಸ ಯೋಜನೆಯನ್ನು ಆರಂಭಿಸುವ ಮೊದಲು ಅವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬಹುದು. ಪ್ರೀತಿಯ ಸಂಗೀತವನ್ನು ಯಾವಾಗಲೂ ಅದರಲ್ಲೇ ಮುಳುಗಿರುವವರು ಕೇಳಬಹುದು.

ಧನಸ್ಸು ವ್ಯವಹಾರಗಳು ನಿಯಂತ್ರಣದಲ್ಲಿರುತ್ತವೆ. ಕೆಲವರಿಗೆ ಅನಿರೀಕ್ಷಿತ ಪ್ರಯಾಣ ಒತ್ತಡಭರಿತವೂ ಮತ್ತು ಉದ್ವೇಗಭರಿತವೂ ಆಗಿರುತ್ತದೆ. ಇಂದು, ನೀವು ಪರಸ್ಪರರ ಸುಂದರ ಭಾವನೆಗಳ ಜೊತೆ ನಿಕಟ ಸಂಪರ್ಕ ಹೊಂದಿರುತ್ತೀರಿ.

ಮಕರ ನಿಮ್ಮ ಶಕ್ತಿಯ ಮಟ್ಟ ಹೆಚ್ಚಿರುತ್ತದೆ ಮತ್ತು ನೀವು ಇದನ್ನು ಬಾಕಿಯಿರುವ ಕೆಲಸಗಳನ್ನು ಪೂರ್ಣಗೊಳಿಸಲು ಬಳಸಬೇಕು. ಹೆಚ್ಚುವರಿ ಹಣವನ್ನು ರಿಯಲ್ ಎಸ್ಟೇಟ್‌ನಲ್ಲಿ ಹೂಡಿಕೆ ಮಾಡಬೇಕು.

ಕುಂಭ ಇಂದು ನೀವು ಎಂತಹ ಒಳ್ಳೆಯ ಕೆಲಸ ಮಾಡಿದ್ದೀರೆಂದು ತೋರಿಸಲು ನಿಮ್ಮ ಪ್ರೀತಿ ಅರಳುತ್ತದೆ. ಯಾವುದೇ ಹೊಸ ಕೆಲಸವನ್ನು ಪ್ರಾರಂಭಿಸುವ ಮೊದಲು ಅದರ ಬಗ್ಗೆ ಅನುಭವಿ ಜನರೊಂದಿಗೆ ಮಾತನಾಡಬೇಕು.

ಮೀನ ನಿಮ್ಮ ಕುಟುಂಬದ ಸದಸ್ಯರ ಭಾವನೆಗಳನ್ನು ನೋಯಿಸುವುದನ್ನು ತಪ್ಪಿಸುವ ಮೂಲಕ ನಿಮ್ಮ ಕೋಪವನ್ನು ನಿಯಂತ್ರಿಸಿ. ನಿಮ್ಮ ಪ್ರೀತಿಪಾತ್ರರ ನಿಷ್ಠೆಯನ್ನು ಅನುಮಾನಿಸಬೇಡಿ.

ಪತ್ರಕರ್ತರು ಸತ್ಯಾಸತ್ಯತೆ ಅರಿತು ಸುದ್ದಿ ಮಾಡಬೇಕು

● ಯಾವುದೇ ಪಕ್ಷದವರ ಪರವಾಗಿ ಮಾತನಾಡದೆ ಸತ್ಯದ ಪರವಾಗಿ ಸುದ್ದಿ ಮಾಡಬೇಕು: ಶಿವಸುಂದರ

• ಉದಯವಾಹಿನಿ ಚಿತ್ತಾಪುರ

ಸಮಾಜ ಸುಧಾರಣೆಯಲ್ಲಿ ಮತ್ತು ಸಾರ್ವಜನಿಕರಿಗೆ ಉತ್ತಮ ಸಮಾಚಾರಗಳನ್ನು ಮುಟ್ಟಿಸಬೇಕಾ ದರೆ ಪತ್ರಕರ್ತರು ಸತ್ಯಾಸತ್ಯತೆಯನ್ನು ಅರಿತು ಸುದ್ದಿ ಯಾಗಬೇಕು ಎಂದು ಲೇಖಕ ಮತ್ತು ಪ್ರಗತಿಪರ ಚಿಂತಕ ಶಿವಸುಂದರ ಬೆಂಗಳೂರು ಅವರು ಪತ್ರಕರ್ತರಿಗೆ ಕಿವಿಮಾತು ಹೇಳಿದರು.

ಕಾರ್ಯವನ್ನೆ ಮರೆತ ಪತ್ರಕರ್ತರಿಂದ ದೇಶಕ್ಕೆ ಕಂಟಕ

ಪಟ್ಟಣದ ತಾಲ್ಲೂಕ ಪಂಚಾಯತ ಸಭಾಂ ಗಣದಲ್ಲಿ ನಡೆದ ತಾಲ್ಲೂಕ ಮಟ್ಟದ ಪತ್ರಿಕಾ ದಿನಾಚರಣೆ ಕಾರ್ಯಕ್ರಮದ ಅಂಗವಾಗಿ ಮುಖ್ಯ ಭಾಷಣಕಾರರಾಗಿ ಮಾತನಾಡಿದ ಅವರು ಆಡಳಿತ ಪಕ್ಷಗಳು ಮತ್ತು ವಿರೋಧ ಪಕ್ಷಗಳನ್ನು ಹೇಳಿರುವ ಮಾತುಗಳನ್ನೆ ವಿಶ್ಲೇಷಣೆ ಮಾಡಿ ಸುದ್ದಿ ಮಾಡುವುದಕ್ಕಿಂತ ಮುಂಚಿತವಾಗಿ ಸಮಾಜ ಸುಧಾರಣೆಗಾಗಿ ಮತ್ತು ಸಾರ್ವಜನಿಕರಿಗೆ ಉತ್ತಮ ಸಂದೇಶ ನೀಡಬೇಕಾದರೆ ಪತ್ರಕರ್ತರು ರಾಜಕೀಯ ಪಕ್ಷದವರು ಹೇಳಿದ ಮಾತುಗಳಲ್ಲಿ ಸತ್ಯಾಸತ್ಯತೆಯನ್ನು ಅರಿತು ಸುಳ್ಳು ಹೇಳುವ ಯಾವುದೇ ಪಕ್ಷದವರ ಪರವಾಗಿ ಮಾತನಾಡದೆ ಸತ್ಯದ ಪರವಾಗಿ ಸುದ್ದಿ ಮಾಡಬೇಕು ಇಲ್ಲದಿದ್ದರೆ ಪತ್ರಕರ್ತರು ಕಾರ್ಯ ಮರೆತಂತಾಗುತ್ತದೆ.

ಅಲ್ಲದೆ ಯಾವುದೇ ಒಂದು ಸುದ್ದಿ ಮಾಡುವಲ್ಲಿ ಕೇವಲ ಸತ್ಯವನ್ನು ಅರಿತು ಸುದ್ದಿ ಮಾಡಿದರೆ ಸಾಲದು ಆ ವಿಷಯದ ಬಗ್ಗೆ ಇನ್ನಷ್ಟು ಆಳಕ್ಕೆ ಇಳಿದು ವಿಷಯದ ಬಗ್ಗೆ ಪ್ರಶ್ನೆಗಳನ್ನು ಕೇಳುವುದರ ಮೂಲಕ ದೂರದಿಂದ ಕಾಣದನ್ನು ಪತ್ರಕರ್ತರು ತೀರಾ ಸಮೀಪದಿಂದ ಅರಿತುಕೊಂಡು ಸುದ್ದಿಯಾಗಬೇಕು, ಪತ್ರಕರ್ತರು ಯಾವುದೇ ವಿಷಲಾಗಲಿ ಅದರ ಬಗ್ಗೆ ಅನೇಕ ಪ್ರಶ್ನೆಗಳನ್ನು ಕೇಳುವುದರಿಂದ ಸತ್ಯ ಹೊರಗೆ ಬಿಳುತ್ತದೆ, ಇಂತಹ ಸತ್ಯವನ್ನು ಅರಿಯುವ ಕಾರ್ಯವನ್ನು ಪತ್ರಕರ್ತರು ಮಾಡಬೇಕು. ಸಮಾಜದಲ್ಲಿನ ಆಗುಹೋಗುಗಳಬಗ್ಗೆ, ಸಮಾಜ ಸುಧಾರಣೆಯ ಬಗ್ಗೆ ಸುದ್ದಿ ಮಾಡುವುದರ ಬಗ್ಗೆ ಸುದ್ದಿಗಳಿಂದ ಸದ್ದು ಮಾಡುತ್ತಾ ಕಾರ್ಯನಿರತ ಪತ್ರಕರ್ತರಾಗಿದ್ದಾರೆ ಆದರೆ ಇದಾವುದರ ಬಗ್ಗೆ ಅರಿವಿಲ್ಲದೆ ತಮ್ಮ ಜವಾಬ್ದಾರಿ ಹಾಗೂ ತಮ್ಮ ಕಾರ್ಯವನ್ನೆ ಮರೆತ ಪತ್ರಕರ್ತರಿಂದ ದೇಶಕ್ಕೆ ಕಂಟಕವಾಗಿದೆ ಎಂದು ವಿಷಾದ ವ್ಯಕ್ತಪಡಿಸಿದರು.

ಇದರಿಂದ ಮನೆಗೆ ಆಧಾರ ಸ್ತಂಭವಾಗಿರುವ ಪತ್ರಕರ್ತರು ತಮ್ಮ ಪ್ರಾಣ ಕಳೆದುಕೊಳ್ಳುವಂತಹ ಪರಿಸ್ಥಿತಿಯು ಎದುರಿಸುತ್ತಾದ್ದಾರೆ ಇಂತಹ ಗ್ರಾಮೀಣ ಭಾಗದ ಪತ್ರಕರ್ತರಿಗೆ ಸರ್ಕಾರದ ವತಿಯಿಂದ ಪತ್ರಕರ್ತರು ಮತ್ತು ಕುಟುಂಬಸ್ತರಿಗೆ ಜೀವವಿಮೆ, ವಸತಿ ಯೋಜನೆಯಡಿ ಸೂರು ಕಲ್ಪಿಸಬೇಕು, ಉಚಿತ ಬಸ್ ಪಾಸ್ ಜಾರಿಗೆ ತರಬೇಕು, ಎಂಬ ಬೇಡಿಕೆಗಳನ್ನು ಸರ್ಕಾರವು ನೀಡಬೇಕು ಎಂದು ಹೇಳಿದರು.

ಉದಯವಾಹಿನಿ ಚಿತ್ರ

ಗ್ರಾಮೀಣ ಭಾಗದ ಪತ್ರಕರ್ತರು ಕೆಲವೊಂದು ಬಾರಿ ಯಾವುದೇ ಲಾಭದ ಅಪೇಕ್ಷೆ ಇಲ್ಲದೆ ತಮ್ಮ ಸ್ವಂತ ಖರ್ಚಿನಲ್ಲಿ ಹತ್ತಾರು ಮೈಲಿ ದೂರದಲ್ಲಿ ಹೋಗಿ ಸುದ್ದಿ ಮಾಡುವ ಪ್ರಸಂಗ ಎದುರಿಸುತ್ತಿದ್ದಾರೆ, ಯಾವುದೇ ಸಂಬಳವಿಲ್ಲದೆ ಕಾರ್ಯನಿರ್ವಹಿಸುತ್ತಿರುವ ಪತ್ರಕರ್ತರು ಸಮಾಜದ ಜವಾಬ್ದಾರಿಯನ್ನು ಹೊತ್ತು ಕುಟುಂಬದ ಜವಾಬ್ದಾರಿಯನ್ನು ಮರೆಯುತ್ತಿದ್ದಾರೆ.

–ಡಾ. ಬಿ.ಪಾಟೀಲ್, ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥೆ

ಕಾಯ್ದೆಗಳ ಬಗ್ಗೆ ಸಾಕಷ್ಟು ಅಧ್ಯಯನ

ಪತ್ರಕರ್ತರು ಮತ್ತು ಪೊಲೀಸ್ ಇಲಾಖೆಯವರು ಕಾರ್ಯವೈಖರಿಯು ಒಂದೆ ನಾಣ್ಯದ ಎರಡು ಮುಖಂದಂತಿದ್ದು ಪತ್ರಕರ್ತರು ಕಾನೂನಿನ ಚೌಕಟ್ಟಿನಲ್ಲಿ ಕಾಯ್ದೆಗಳು ಬದಲಾಗುತ್ತಿವೆ. ಉದಾಹರಣೆಗೆ ಕಲಂ 144 ನಿಷೇಧಾಜ್ಞೆಯು ಇಂದು ಕಲಂ 163 ಆಗಿ ಬದಲಾವಣೆಯಾಗಿದೆ, ಪೋಕ್ಸೋ ಕಾಯಿದೆಯು ಬಹಳ ಕಟ್ಟುನಿಟ್ಟಿನ ಕಾಯ್ದೆಯಾಗಿದ್ದು ಅದರ ಮಾನದಂಡಗಳನ್ನು ನಾವು ಅನುಸರಿಸ ಬೇಕಾಗುತ್ತದೆ. ಇಂತಹ ಸುದ್ದಿ ಮಾಡಲು ಕಾಯ್ದೆಗಳ ಬಗ್ಗೆ ಸಾಕಷ್ಟು ಅಧ್ಯಯನ ಮಾಡಬೇಕಾಗಿದೆ ಎಂದು ಶಹಾಬಾದ್ ವಿಭಾಗದ ಡಿವೈಎಸ್ಪಿ ಶಂಕರಗೌಡ ಪಾಟೀಲ ಅವರು ಪತ್ರಕರ್ತರಿಗೆ ಸಲಹೆ ನೀಡಿದರು.

ಉದ್ಘಾಟಕರಾಗಿ ಆಗಮಿಸಿದ ಖ್ಯಾತ ಉದ್ದಿಮೆದಾರ ಮತ್ತು ಶಿಕ್ಷಣ ಪ್ರೇಮಿ ನಾಗರೆಡ್ಡಿ ಪಾಟೀಲ್ ಕರದಾಳ, ಜಿಲ್ಲಾಧ್ಯಕ್ಷ ಬಾಬುರಾವ ಯಡ್ರಾಮಿ, ಕಾರ್ಯ ಕ್ರಮ ಅಧ್ಯಕ್ಷತೆ ವಹಿಸಿದ ಸಂಘದ ಅಧ್ಯಕ್ಷ ಸಿದ್ದರಾಜ ಮಲ್ಕಂಡಿ, ಪಾಸ್ತಾವಿಕವಾಗಿ ಡಾ ಸಾಯಬಣ್ಣ ಗುಡುಬಾ ಮಾತನಾಡಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಮಟ್ಟದ ಪ್ರಶಸ್ತಿ ಪುರಸ್ಕೃತರಾದ ತಾಲ್ಲೂಕ ವರದಿಗಾರ ರಲಿಶಂಕರ ಬುರ್ಲಿ ಅವರಿಗೆ ಸನ್ಮಾನಿಸಿ ಗೌರವಿಸಲಾಯಿತು, ಅಲ್ಲದೆ ಪತ್ರಿಕಾ ದಿನಾಚರಣೆ ಅಂಗವಾಗಿ ಪಿಯುಸಿ ಮತ್ತು ಪದವಿ ಕಾಲೇಜು ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ್ದ ಪ್ರಬಂಧ ಸ್ಪರ್ಧೆಯಲ್ಲಿ ಭಾಗವಹಿಸಿ ವಿಜೇತರಾದ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ನಗದು ಬಹುಮಾನ, ಪ್ರಮಾಣ ಪತ್ರ ಮತ್ತು ನೆನಪಿನ ಕಾಣಿಕೆ ನೀಡಿ ಪ್ರೋತ್ಸಾಹಿಸಲಾಯಿತು. ಬ್ಲಾಕ ಕಾಂಗ್ರೇಸ್ ಅಧ್ಯಕ್ಷ ಭೀಮಣ್ಣ ಸಾಲಿ, ಬಿಜೆಪಿ ಮಂಡಲ ಅಧ್ಯಕ್ಷ ರವೀಂದ್ರ ಸಜ್ಜನಶೆಟ್ಟಿ, ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಕಾರಕಾರಣಿ ಸಮಿತಿಯ ಶಿವರಂಜನ್ ಸತ್ಯಂಪೇಟ್, ತಾಲ್ಲೂಕ ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿ ಕುಮಾರಿ ನೀಲಗಂಗಾ ಬಬಲಾದ, ಕ್ಷೇತ್ರ ಶಿಕ್ಷಣಾಧಿಕಾರಿ ಶಶಿಧರ ಬಿರಾದಾರ, ಚಿತ್ತಾಪುರ ಪುರಸಭೆ ಮುಖ್ಯಾಧಿಕಾರಿ ಮನೋಜಕುಮಾರ ಗುರಿಕಾರ್, ವಾಡಿ ಪುರಸಭೆ ಮುಖ್ಯಾಧಿಕಾರಿ ಫಕ್ರುದ್ದಿನ್ ಸಾಬ್ ಸೇರಿದಂತೆ ಅನೇಕರು ಇದ್ದರು.

ವಲಯ ಕನ್ನಡ ಸಾಹಿತ್ಯ ಪರಿಷತ್ತಿಗೆ ನೂತನ ಅಧ್ಯಕ್ಷರಾಗಿ ಮಡಿವಾಳಪ್ಪಗೌಡ ಆಯ್ಕೆ

• ಉದಯವಾಹಿನಿ ಕೆಂಭಾವಿ

ಸುಮಾರು ಎರಡೂವರೆ ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ವಲಯ ಕನ್ನಡ ಸಾಹಿತ್ಯ ಪರಿಷತ್ತಿಗೆ ನೂತನ ಅಧ್ಯಕ್ಷರಾಗಿ ಸಾಹಿತಿ, ಸಂಘಟಕ, ಮಡಿವಾಳಪ್ಪ ಗೌಡ ಪಾಟೀಲ್ ಹೆಗ್ಗಣದೊಡ್ಡಿ ಅವಿರೋಧವಾಗಿ ಆಯ್ಕೆಯಾದರು.

ಪಟ್ಟಣದ ಸ್ಪಂದನ ಶಾಲೆಯಲ್ಲಿ ಶುಕ್ರವಾರ ಸಂಜೆ ಜರುಗಿದ ವಲಯ ಕಸಾಪ ಸರ್ವ ಸದಸ್ಯರ ಸಭೆಯಲ್ಲಿ ಪತ್ರಕರ್ತ ಡಿ ಸಿ ಪಾಟೀಲ್ ಮಾತನಾಡಿ ಮಡಿವಾಳಪ್ಪಗೌಡ ಹೆಗ್ಗನದೊಡ್ಡಿ ಹೆಸರು ಸೂಚಿಸಿದರು. ಸಭೆಯಲ್ಲಿದ್ದ ಸಾಹಿತಿ ನಿಂಗನಗೌಡ ದೇಸಾಯಿ, ಶಿಕ್ಷಕ ಶಿವನಗೌಡ ಪಾಟೀಲ ಬೆಂಬಲಿಸಿದರು. ಶಿಕ್ಷಕ ಬಂದೇನವಾಜ್ ನಾಲತವಾಡ, ಪತ್ರಕರ್ತ ಗುರು ಕುಲಕರ್ಣಿ ಅನುಮೋದಿಸಿದರು. ಸುರಪುರ ತಾಲ್ಲೂಕು ಕಸಾಪ ಅಧ್ಯಕ್ಷ ಶರಣಬಸವ ಯಾಳವಾರ ಮಡಿ ವಾಳಪ್ಪ ಗೌಡರ ಹೆಸರನ್ನು ಸಭೆಯಲ್ಲಿ ಘೋಷಿಸುತ್ತಿದ್ದಂತೆ ಹಾಜರಿದ್ದ ಸರ್ವ ಸದಸ್ಯರು ಚಪ್ಪಾಳೆ ತಟ್ಟುವ ಮೂಲಕ ಅಂಗೀಕರಿಸಿದರು, ತದನಂತರ ಸುರಪುರ ಹಾಗೂ ಶಹಾಪುರ ತಾಲ್ಲೂಕು ಕಸಾಪ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ನೂತನ ಅಧ್ಯಕ್ಷರಿಗೆ ಸನ್ಮಾನಿಸಿ ಗೌರವಿಸಿ ಶುಭಹಾರೈಸಿದರು.

ಉದಯವಾಹಿನಿ ಚಿತ್ರ

ಯಾದಗಿರಿ ಜಿಲ್ಲಾ ಕಸಾಪದ ಸಾಂಸ್ಕೃತಿಕ ಪ್ರತಿನಿಧಿ ಪ್ರಕಾಶ ಅಂಗಡಿ ಕನ್ನೆಳ್ಳಿ ಪ್ರಾಸ್ತಾವಿಕ ಮಾತನಾಡಿದರು. ಹಿರಿಯ ಸಾಹಿತಿಗಳಾದ ಲಿಂಗನಗೌಡ ಮಾಲಿ ಪಾಟೀಲ್, ಶಾಂತಪ್ಪ ಬೂದಿಹಾಳ, ನಬಿಲಾಲ ಮಕಾನದಾರ, ಶಹಾಪುರ ತಾಲ್ಲೂಕು ಕಸಾಪ ಅಧ್ಯಕ್ಷ ರವೀಂದ್ರನಾಥ ಹೊಸ್ಮನಿ, ನಿಕಟ ಪೂರ್ವ ಕಸಾಪ ವಲಯ ಅಧ್ಯಕ್ಷ ಡಾ ಯಂಕನಗೌಡ ಪಾಟೀಲ, ಬಿಗುಡಿ ಕಸಾಪ ವಲಯ ಅಧ್ಯಕ್ಷ ಶರಣಬಸವ ಬಿರಾದಾರ, ಮಾತನಾಡಿದರು, ಸುರಪುರ ತಾಲ್ಲೂಕು ಕಸಾಪ ಅಧ್ಯಕ್ಷ ಶರಣಬಸವ ಯಾಳವಾರ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಪ್ರಮುಖರಾದ ವೀರಣ್ಣ ಕಲಿಕೇರಿ, ವಿಜಯಾಚಾರ್ಯ ಪುರೋಹಿತ, ಸಾಹೇಬರಡ್ಡಿ ಇಟಗಿ, ರಜಾಕ್ ಬಾಗವಾನ್ ಜಟ್ಟೇಪ್ಪ ಹದನೂರು, ರಂಗಪ್ಪ ವಡ್ಡರ್ ಪರಶುರಾಮ ನಾರಾಯಣಕರ್, ಲಕ್ಷ್ಮಣ ಬಸರಿಗಿಡ, ಸೂಗುರಯ್ಯ ಇಂಡಿ, ಇಲಿಯಾಸ್ ಪಟೇಲ್, ರೇವಣಸಿದ್ದಯ್ಯ ಮಠ, ಸೇರಿದಂತೆ ಸುರಪುರ ಮತ್ತು ಶಹಾಪುರ ತಾಲ್ಲೂಕಿನ ಕಸಾಪ ಪದಾಧಿಕಾರಿಗಳು, ಕನ್ನಡಾಭಿಮಾನಿಗಳು, ಕನ್ನಡ ಪರ ಸಂಘಟನೆಗಳ ಮುಖಂಡರು, ಉಪಸ್ಥಿತರಿದ್ದರು. ಎಚ್ ರಾಠೋಡ್ ನಿರೂಪಿಸಿದರು, ವೆಂಕಟೇಶಗೌಡ ಸ್ವಾಗತಿಸಿದರು, ದೇವು ಹೆಬ್ಬಾಳ ವಂದಿಸಿದರು.

2022ರ ಫೆಬ್ರುವರಿಯಲ್ಲಿ ನಡೆದ ಸುರಪುರ ತಾಲ್ಲೂಕು ಕಸಾಪ ಅಧ್ಯಕ್ಷರ ಆಯ್ಕೆ ಪ್ರಕ್ರಿಯೆಯಲ್ಲಿ ನಡೆದ ಕೆಲವು ಕಹಿ ಘಟನೆ ಮರೆತು, ಹಿರಿಯರು ಹಾಗೂ ಸರ್ವ ಸದಸ್ಯರು ಸೇರಿ ಅವಿರೋಧವಾಗಿ ವಲಯ ಕಸಾಪ ಅಧ್ಯಕ್ಷರಾಗಿ ಆಯ್ಕೆ ಮಾಡಿರುವುದಕ್ಕೆ ಕೃತಜ್ಞತೆ ಸಲ್ಲಿಸಿದ ಅವರು ಶೀಘ್ರದಲ್ಲೇ ವಲಯ ಕಸಾಪ ಸಮಿತಿಯ ಪದಾಧಿಕಾರಿಗಳ ಆಯ್ಕೆ ಮಾಡುವ ಮೂಲಕ ತಮ್ಮೆಲ್ಲರ ಸಹಕಾರದೊಂದಿಗೆ ಮುಂಬರುವ ದಿನಗಳಲ್ಲಿ ವಲಯ, ತಾಲ್ಲೂಕು, ಜಿಲ್ಲಾ ಮಟ್ಟದ ಸಾಹಿತ್ಯ ಸಮ್ಮೇಳನ ಮಾಡುವುದಾಗಿ ತಿಳಿಸಿದರು

–ಮಡಿವಾಳಪ್ಪಗೌಡ ಪಾಟೀಲ್, ನೂತನ ಅಧ್ಯಕ್ಷ

ಜಿಂಕೆ ಮಾಂಸ ಜಪ್ತಿ: ವ್ಯಕ್ತಿ ಬಂಧನ

• ಉದಯವಾಹಿನಿ, ಚಿಂಚೋಳಿ

ತಾಲ್ಲೂಕಿನ ಕುಂಚಾವರಂ ವಲಯದ ವನ್ಯಜೀವಿ ಶಾಖೆಯ ಅಂತಾವರಂಗಸ್ತಿನ ಬುರುಗ್ಡೊಡ್ಡಿ ಅರಣ್ಯ ಪ್ರದೇಶದಲ್ಲಿ ಮಧ್ಯಾಹ್ನ ಗಸ್ತು ತಿರುಗುತ್ತಿರುವಾಗ ಯಾರೋ ಚುಕ್ಕೆ ಜಿಂಕೆಯನ್ನು ಭೇಟೆಯಾಡಿ ಮಾಂಸದ ತುಂಡುಗಳನ್ನು ಕತ್ತರಿಸುತ್ತಿರುವುದನ್ನು ಕಂಡು ದಾಳಿ ಮಾಡಿದಾಗ ಒಬ್ಬ ಆರೋಪಿ ಸೆರೆಯಾದರೆ ಇನ್ನು ಐದು ಜನ ಪರಾರಿಯಾಗಿದ್ದಾರೆ ಎಂದು ವನ್ಯಜೀವಿ ಅರಣ್ಯ ಅಧಿಕಾರಿ ಭಾಗಪ್ಪಗೌಡ ತಿಳಿಸಿದ್ದಾರೆ.

ಬಂಧಿತ ಆರೋಪಿ ಸೇವು ಹರಿಶ್ಚಂದ್ರ ರಾಠೋಡ ಎಂದು ಗುರುತಿಸಿದ್ದು ಆರೋಪಿಗಳ ಎರಡು ಹೀರೋ ಹೋಂಡಾ ಬೈಕ್‌ಗಳು, ಚುಕ್ಕೆ ಜಿಂಕೆ ಮಾಂಸದ ತುಂಡುಗಳು ಮತ್ತು ನಾಲ್ಕು ಕಬ್ಬಿಣದ ಚೂರಿಗಳು ವಶಕ್ಕೆ ಪಡೆದು ಅರಣ್ಯ ಇಲಾಖೆಯ ಪ್ರಕರಣ ದಾಖಲಿಸಿಕೊಂಡು ಒಬ್ಬ ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ಪರಾರಿಯಾದ ಪ್ರೇಮಸಿಂಗ್ ಪೂರು, ನಾರಾಯಣ ಪೂರು, ಮನ್ನು ಮಾಣು, ಲಕ್ಷ್ಮಣ ಗೇಮು, ಲಕ್ಷ್ಮಣ

ಉದಯವಾಹಿನಿ ಚಿತ್ರ

ಹರಿಶ್ಚಂದ್ರರ ಐದು ಜನರಿಗೆ ಬಂಧಿಸಲು ಬಲೆ ಬೀಸಲಾಗಿದೆ. ಜಿಲ್ಲಾ ಅರಣ್ಯ ಸಂರಕ್ಷಣಾಧಿಕಾರಿ ಸುಮೀತಕುಮಾರ ಪಾಟೀಲ, ಜಿಲ್ಲಾ ಸಹಾಯಕ ಸಂರಕ್ಷಣಾಧಿಕಾರಿ ಮುನೀರ್ ಅಹೇಮದ್ ಮಾರ್ಗದರ್ಶನದಲ್ಲಿ ಚಿಂಚೋಳಿ ವನ್ಯಜೀವಿ ವಲಯ ಅರಣ್ಯಾಧಿಕಾರಿ ಭಾಗಪ್ಪಗೌಡ ನೇತೃತ್ವದಲ್ಲಿ ಕಾರ್ಯಾಚರಣೆ ನಡೆಸಲಾಯಿತು.

ಈ ಸಂದರ್ಭದಲ್ಲಿ ಕುಂಚಾವರರಂ ಶಾಖೆ ಉಪವಲಯ ಅರಣ್ಯಾಧಿಕಾರಿ ಭಾನು ಪ್ರತಾಪ್ ಸಿಂಗ್, ಶಾದಿಪುರ ಶಾಖೆ ಉಪವಲಯ ಅರಣ್ಯಾಧಿಕಾರಿ ಶಿವಾನಂದ ಬಿರಾದಾರ, ಚಂದ್ರಂಪಳ್ಳಿ ಶಾಖೆಯ ಉಪವಲಯ ಅರಣ್ಯಾಧಿಕಾರಿ ಅಂಕುಶ ಬಿ ಎಂ., ಸಿದ್ಧಾರೂಢ ಹೋಕ್ಕುಂಡಿ, ನಟರಾಜ, ಗಸ್ತು ಅರಣ್ಯಪಾಲಕ ಚೇತನ ದೊಡ್ಡಮನಿ, ರೂಪೇಶಕುಮಾರ, ಹೈದರ್ ಅಲಿ, ಶೇಕ್ ಅಮೀರ್ ಇನ್ನಿತರ ಅರಣ್ಯ ಇಲಾಖೆ ಸಿಬ್ಬಂದಿಗಳು ಇದ್ದರು.

ಇಂದು ವಿದ್ಯುತ್ ವ್ಯತ್ಯಯ

• ಉದಯವಾಹಿನಿ ಜೇವರ್ಗಿ

ಇಂದು ಕೆ ವಿ ವಿದ್ಯುತ್ ಮಾರ್ಗಗಳು ದುರಸ್ತಿ ಕಾಮಗಾರಿ ಕೈಗೊಂಡಿರುವುದರಿಂದ ಪಟ್ಟಣದ ವಿವಿಧೆಡೆ ಬೆಳಗ್ಗೆ 9 ರಿಂದ ಸಂಜೆ 6 ಗಂಟೆಯವರೆಗೆ ವಿದ್ಯುತ್ ಸರಬರಾಜು ನಿಲುಗಡೆ ಮಾಡಲಾಗುವುದು ಎಂದು ಜೆಸ್ಕಾಂ ಜೇವರ್ಗಿ ಉಪ ವಿಭಾಗದ ಸಹಾಯಕ ಕಾರ್ಯನಿರ್ವಾ

ನ್ಯಾಯಾಧೀಶರ ಮನೆಗಳಿಗೆ ನುಗ್ಗುವುದಾಗಿ ಪ್ರತಿಭಟನಾಕಾರರ ಬೆದರಿಕೆ

ಬಾಂಗ್ಲಾದಲ್ಲಿ ನ್ಯಾಯಾಂಗ ವ್ಯವಸ್ಥೆ ಮೇಲೂ ಪ್ರಹಾರ: ಪ್ರತಿಭಟನೆಗೆ ಬೆದರಿ ಸುಪ್ರೀಂಕೋರ್ಟ್ ನ್ಯಾಯಮೂರ್ತಿ ರಾಜೀನಾಮೆ

ಢಾಕಾ: ಬಾಂಗ್ಲಾದೇಶದಲ್ಲಿ ಶೇಖ್ ಹಸೀನಾ ಸರ್ಕಾರ ಪತನಗೊಂಡು ಆಡಳಿತ ವ್ಯವಸ್ಥೆ ಬದಲಾಗಿದ್ದರೂ, ಪ್ರತಿಭಟನೆ ಹಾಗೂ ಹಿಂಸಾಚಾರ ಸಂಪೂರ್ಣ ನಿಂತಿಲ್ಲ. ಶನಿವಾರ ಸುಪ್ರೀಂ ಕೋರ್ಟ್‌ಗೆ ಮುತ್ತಿಗೆ ಹಾಕಿದ್ದ ಪ್ರತಿಭಟನಾಕಾರರು ಅಲ್ಲಿನ ಮುಖ್ಯ ನ್ಯಾಯಮೂರ್ತಿ ಒಬೈದುಲ್ ಹಸನ್ ಅವರಿಗೆ ಒಂದು ಗಂಟೆಗ ಗಡುವು ನೀಡಿದ್ದರು. ಆದರ ಬೆನ್ನ ಲ್ಲೇ ಅವರು ರಾಜೀನಾಮೆಗೆ ನಿರ್ಧರಿಸಿದ್ದಾರೆ.

ಒಂದು ವೇಳೆ ನ್ಯಾಯಮೂರ್ತಿಗಳು ರಾಜೀನಾಮೆಗೆ ನಿರಾಕರಿಸಿದರೆ, ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿ, ಇತರೆ ನ್ಯಾಯಮೂರ್ತಿಗಳ ಮನೆಗಳಿಗೆ ನುಗ್ಗಲಾಗುವುದು ಎಂದು ಪ್ರತಿಭಟನಾಕಾರರು ಎಚ್ಚರಿಕೆ ನೀಡಿದ್ದರು.

ಬಾಂಗ್ಲಾದಲ್ಲಿ ಹಿಂಸಾಚಾರ: ಭಾರತಕ್ಕೆ ಎದುರಾಗಿದೆ ಆತಂಕ, ನುಸುಳುಕೋರರ ತಡೆಯುವ ತಲೆ ನೋವು ದೇಶದ ಸುಪ್ರೀಂ ಕೋರ್ಟ್, ದೇಶದೆಲ್ಲಡೆ ಇರುವ ಅಧೀನ ನ್ಯಾಯಾಲಯಗಳ ನ್ಯಾಯಾಧೀಶರುಗಳ ಸುರಕ್ಷತೆಯನ್ನು ಗಮನದಲ್ಲಿ ಇರಿಸಿಕೊಂಡು ತಾವು ಹುದ್ದೆಯಿಂದ ಕೆಳಕ್ಕಿಳಿಯಲು ನಿರ್ಧರಿಸಿರುವುದಾಗಿ

ಮುಖ್ಯ ನ್ಯಾಯಮೂರ್ತಿ ಮಾಧ್ಯಮಗಳಿಗೆ ತಿಳಿಸಿದ್ದಾರೆ. ಶನಿವಾರ ಸಂಜೆ ವೇಳೆಗೆ ಅಧ್ಯಕ್ಷ ಮೊಹಮ್ಮದ್ ಶಹಾಬುದ್ದೀನ್ ಅವರಿಗೆ ರಾಜೀನಾಮೆ ಪತ್ರಕಳು ಹಿಸುವುದಾಗಿ ಅವರು ತಿಳಿಸಿದ್ದಾರೆ.

ದೇಶದ ಎಲ್ಲಾ ನ್ಯಾಯಾಲಯಗಳ ನ್ಯಾಯಾಧೀಶರ ಜತೆ ಸಭೆ ನಡೆಸಲು ಮುಖ್ಯ ನ್ಯಾಯಮೂರ್ತಿ ಮುಂದಾದ ಬಳಿಕ ಬಾಂಗ್ಲಾದಲ್ಲಿ ಹೊಸದಾಗಿ ಪ್ರತಿಭಟನೆ ಶುರುವಾಗಿದೆ. ವಿದ್ಯಾರ್ಥಿಗಳು, ವಕೀಲರು ಸೇರಿದಂತೆ ನೂರಾರು ಜನರು ಸುಪ್ರೀಂ ಕೋರ್ಟ್ ಕಡೆ ಮೆರವಣಿಗೆ ತೆರಳಿ, ಅದರ ಆವರಣವನ್ನು ಆಕ್ರಮಿಸಿಕೊಂಡರು. ಸುಪ್ರೀಂ ಕೋರ್ಟ್ ರಕ್ಷಣೆಗೆ

ಒಂದು ಗಂಟೆಗಳ ಗಡುವು

ಬಾಂಗ್ಲಾದೇಶದಲ್ಲಿ ಶಾಸಕಾಂಗ ವ್ಯವಸ್ಥೆ ಪತನಗೊಂಡು ಮಧ್ಯಂತರ ಸರ್ಕಾರ ಅಸ್ತಿತ್ವಕ್ಕೆ ಬಂದ ಬಳಿಕ, ಪ್ರತಿಭಟನಾಕಾರರು ನ್ಯಾಯಾಂಗ ವ್ಯವಸ್ಥೆ ಮೇಲೂ ದಾಳಿ ನಡೆಸಿದ್ದಾರೆ. ಬೆದರಿಕೆಗೆ ಮಣಿದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ರಾಜೀನಾಮೆ ನೀಡುವುದಾಗಿ ಪ್ರಕಟಿಸಿದ್ದಾರೆ. ಮಾಜಿ ಪ್ರಧಾನಿ ಶೇಖ್ ಹಸೀನಾ ಅವರ ನಿಷ್ಠಾವಂತ ಎಂದು ಹೇಳಲಾಗಿರುವ ನ್ಯಾಯಮೂರ್ತಿ ಒಬೈದುಲ್ ಹಸನ್ ಅವರಿಗೆ ಪ್ರತಿಭಟನಾಕಾರರು ಒಂದು ಗಂಟೆಗಳ ಗಡುವು ನೀಡಿದ್ದರು.

ಸೇನಾ ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು.

ಮಧ್ಯಂತರ ಸರ್ಕಾರವು ಕಾನೂನುಬಾಹಿರ ಎಂ ಬುದಾಗಿ ಘೋಷಿಸುವ ಸಲುವಾಗಿ ಮುಖ್ಯ

- **ಬಾಂಗ್ಲಾದೇಶದಲ್ಲಿ ಮತ್ತೆ ಕಾವು ಪಡೆದ ಪ್ರತಿಭಟನೆ, ಸುಪ್ರೀಂ ಕೋರ್ಟ್‌ಗೆ ಪ್ರತಿಭಟನಾಕಾರರ ಮುತ್ತಿಗೆ**
- **ಮುಖ್ಯ ನ್ಯಾಯಮೂರ್ತಿ, ಇತರೆ ಒಂದು ಗಂಟೆ ಗಡುವು ನೀಡಿದ ಬೆನ್ನಲ್ಲೇ ರಾಜೀನಾಮೆ ನೀಡುವುದಾಗಿ ಘೋಷಿಸಿದ ಮುಖ್ಯ ನ್ಯಾಯಮೂರ್ತಿ**

ನ್ಯಾಯಮೂರ್ತಿ ಸಂಚು ನಡೆಸಿದ್ದಾರೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಮಧ್ಯಂತರ ಸರ್ಕಾರ ಅಕ್ರಮ ಎಂದು ಘೋಷಿಸಲು ಸುಪ್ರೀಂ ಕೋರ್ಟ್ ಮತ್ತು ಮುಖ್ಯ ನ್ಯಾಯ ಮೂರ್ತಿಯನ್ನು ಫ್ಯಾಸಿಸ್ಟ್ ಶಕ್ತಿಗಳು ಬಳಸಿಕೊಳ್ಳಲು ಪ್ರಯತ್ನಿಸುತ್ತಿವೆ. ಅದಕ್ಕಾಗಿ ಸಿಜೆಬಿ ಅವರನ್ನು ರಾಜೀನಾಮೆ ನೀಡುವಂತೆ ಒತ್ತಾಯಿಸಲು ನಾವು ಸುಪ್ರೀಂ ಕೋರ್ಟ್ ಆವರಣಕ್ಕೆ ಬಂದಿದ್ದೇವೆ ಎಂದು ಪ್ರತಿಭಟನಾಕಾರ ಅಬ್ದುಲ್ ಮುಖಾದಿಮ್ 'ದಿ ಡೈಲಿ ಸ್ಟಾರ್'ಗೆ ಹೇಳಿದ್ದಾನೆ. ಅವಾಮಿ ಲೀಗ್ ನಾಯಕರ ಜತೆ ಸಿಜೆಬಿ ನಂಟು

1971ರ ಬಾಂಗ್ಲಾದೇಶ ವಿಮೋಚನಾ ಹೋರಾಟದಲ್ಲಿ ಭಾಗವಹಿಸಿದ್ದವರ ಕುಟುಂಬದವರಿಗೆ ಈಗಲೂ ಸರ್ಕಾರಿ ಹುದ್ದೆಗಳಲ್ಲಿ ಶೇ 30ರಷ್ಟು ಮೀಸಲಾತಿ ನೀಡುವ ನಡೆಯನ್ನು ವಿರೋಧಿಸಿ ಬಾಂಗ್ಲಾದಲ್ಲಿ ಪ್ರತಿಭಟನೆ ಆರಂಭವಾಗಿತ್ತು. ಹಿಂಸಾಚಾರದ ಬಳಿಕ ಅಲ್ಲಿನ ಸುಪ್ರೀಂ ಕೋರ್ಟ್ ಶೇ 5ಕ್ಕೆ ಕೋಟಾವನ್ನು ತಗ್ಗಿಸಿತ್ತು. ಆದರೆ ಇದರಿಂದ ಪ್ರತಿಭಟನೆ ಶಾಂತವಾಗಿರಲಿಲ್ಲ. ಒಬೈದುಲ್ ಹಸನ್ ಸುತ್ತಲೂ ಅನೇಕ ವಿವಾದಗಳು ಸುತ್ತಿಕೊಂಡಿವೆ.

ಅವರು ವಿದೇಶಕ್ಕೆ ಹೋದಾಗೆಲ್ಲ ವಿವಿಧ ಅವಾಮಿ ಲೀಗ್ ನಾಯಕರ ನಿವಾಸಗಳಲ್ಲಿ ಉಳಿದುಕೊಂಡಿದ್ದರು ಎಂದು ಆಂತರಿಕ ಸರ್ಕಾರದ ಕಾನೂನು ಸಲಹೆಗಾರ ಆಸಿಫ್ ನಜರುಲ್ ಆರೋಪಿಸಿದ್ದಾರೆ. ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಯಾಗಿ ಕಳೆದ ವರ್ಷ ನೇಮಕಗೊಂಡಿದ್ದ ಒಬೈದುಲ್ ಹಸನ್, ಪದಚ್ಯುತ ಪ್ರಧಾನಿ ಶೇಖ್ ಹಸೀನಾ ಅವರ ನಿಷ್ಠಾವಂತ ಎಂದು ಹೇಳಲಾಗಿದೆ. ಹೀಗಾಗಿ ಪ್ರತಿಭಟನಾಕಾರರು ಹಸನ್ ಅವರು ಕರೆ ನೀಡಿದ್ದ ಸರ್ವ ನ್ಯಾಯಾಧೀಶ ಸಭೆಯ ಬಗ್ಗೆ ಅನುಮಾನ ವ್ಯಕ್ತಪಡಿಸಿದ್ದರು.

ಕೋರ್ಟ್ ಆದೇಶ ಲೆಕ್ಕಿಸದೆ 2ನೇ ಮದುವೆಯಾಗಿ ಪರಾರಿಯಾದ ಭೂಪ

ಹೈದರಾಬಾದ್: ವಿಚ್ಛೇದನ ಕೋರಿದ್ದ ಪತಿಗೆ ಕೆಲ ವರ್ಷಗಳ ಕಾಲ ಪತ್ನಿಯೊಂದಿಗೇ ಇದ್ದು ಸಮಸ್ಯೆ ಬಗೆಹರಿಸಿಕೊಳ್ಳುವಂತೆ ನ್ಯಾಯಾಲಯ ಹೇಳಿದ್ದರೂ ಕೂಡ ಮತ್ತೊಂದು ಮದುವೆಯಾಗಿ 2ನೇ ಪತ್ನಿಯೊಂದಿಗೆ ಪರಾರಿಯಾಗಿರುವ ಘಟನೆ ತೆಲಂಗಾಣದ ವಾರಂಗಲ್ ಜಿಲ್ಲೆಯ ಪೆದ್ದಾಪೆಂಡ್ಯಾಲ ಗ್ರಾಮದಲ್ಲಿ ನಡೆದಿದೆ.

ಘಟನೆ ವಿವರ: 2016ರ ಏಪ್ರಿಲ್‌ನಲ್ಲಿ ತಿರುಮಲದ ಶ್ರೀ ಸಿದ್ದೇಶ್ವರ ಮಠದಲ್ಲಿ ಜಿ.ರಾಕೇಶ್ ಎಂಬ ವ್ಯಕ್ತಿ ಸಂಧ್ಯಾ ಅವರನ್ನು ವಿವಾಹವಾಗಿದ್ದರು. ಈ ವೇಳೆ ರಾಕೇಶ್ ಕುಟುಂಬ ಚಿನ್ನದ ಆಭರಣಗಳು ಸೇರಿದಂತೆ 15 ಲಕ್ಷ ರೂ.ವರದಕ್ಷಿಣೆ ತೆಗೆದುಕೊಂಡಿತ್ತು. ಈಗ ದಂಪತಿಗೆ ಒಂದು ಹೆಣ್ಣು ಮಗುವಿದೆ. ಈಗ ರಾಕೇಶ್ ಸಂಧ್ಯಾ ಅವರಿಂದ ವಿಚ್ಛೇದನಕ್ಕೆ ಒತ್ತಾಯಿಸಿ ಕೌಟುಂಬಿಕ ನ್ಯಾಯಾಲಯದ ಮೊರೆ ಹೋಗಿದ್ದರು. ಆದರೆ ಪತ್ನಿ ಸಂಧ್ಯಾ ಬೇರೆಯಾಗಲು ಒಪ್ಪದೆ ಪತಿಯೊಂದಿಗೆ ಇರಲು ಅವಕಾಶ ನೀಡುವಂತೆ ನ್ಯಾಯಾಧೀಶರಲ್ಲಿ ಮನವಿ ಮಾಡಿದ್ದರು. ಇದರಿಂದ ರಾಕೇಶ್ ಮತ್ತು ಸಂಧ್ಯಾ ಕೆಲವು ವರ್ಷಗಳ ಕಾಲ ಒಟ್ಟಿಗೆ ವಾಸಿಸಿ ಅವರ

ಘರ್ಷಣೆಯನ್ನು ಬಗೆಹರಿಸಿಕೊಳ್ಳುವಂತೆ ಕೋರ್ಟ್ ಆದೇಶಿಸಿದೆ. ಆದರೆ ಸಂಧ್ಯಾಗೆ ಪರಿಸ್ಥಿತಿ ಇನ್ನಷ್ಟು ಹದಗೆಟ್ಟಿದ್ದು ರಾಕೇಶ್ ಆಕೆಯನ್ನು ಹಿಂಸಿಸಲು ಪ್ರಾರಂಭಿಸಿದ್ದಾನೆ. ಅಲ್ಲದೆ ರಾಕೇಶ್ ಕುಟುಂಬ ಆ ಕೆ ಮನೆಗೆ ಪ್ರವೇಶಿಸಿದರೆ ಕೊಲ್ಲುವುದಾಗಿ ಬೆದರಿಕೆ ಹಾಕಿದೆ. ಭಯಗೊಂಡ ಸಂಧ್ಯಾ ತನ್ನ ಮಗಳೊಂದಿಗೆ ತನ್ನ ಹೆತ್ತವರ ಮನೆಗೆ ಅವರ ವಿಚ್ಛೇದನ ಪ್ರಕರಣವು ನ್ಯಾಯಾಲಯದಲ್ಲಿ ಇನ್ನೂ ಪ್ರಕ್ರಿಯೆಯಲ್ಲಿದೆ. ಏತನಧ್ಯೆ, ರಾಕೇಶ್ ಹೈದರಾಬಾದ್‌ನ ತೆಳ್ಳಗಡ್ಡಾದಲ್ಲಿ ನೆಲೆಸಿರುವ ಅಪರ್ಣಾ ಅವರೊಂದಿಗೆ ಎರಡನೇ ಮದುವೆಗೆ ಯೋಜಿಸಿ ಅವರ ನಿರೀಕ್ಷೆಯಂತೆ ವಿವಾಹವಾಗಿದ್ದಾರೆ.

ನವದಂಪತಿಯೊಂದಿಗೆ ಜಗಳ

ಮೊದಲ ಪತ್ನಿ ಸಂಧ್ಯಾ, ತಮ ಪುತ್ರಿ ಮಾನ್ವಿಯೊಂದಿಗೆ ಸ್ಥಳಕ್ಕೆ ಆಗಮಿಸಿ ಸಿದ್ದೇಶ್ವರ ಮಠದ ಕಲ್ಯಾಣ ಮಂಟಪದಲ್ಲಿ ನವದಂಪತಿಯೊಂದಿಗೆ ಜಗಳವಾಡಿದ್ದಾರೆ. ಪರಿಸ್ಥಿತಿಗೆ ಹೆದರಿ ರಾಕೇಶ್ ಅಪರ್ಣಾ ಅವರೊಂದಿಗೆ ಪರಾರಿಯಾಗಿದ್ದಾರೆ. ಈ ಸಂಬಂಧ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದಾರೆ. ಏತನಧ್ಯೆ ತಿರುಮಲದಲ್ಲಿ ನಡೆದ ಈ ಘಟನೆಯನ್ನು ಕೇಳಿದ ಭಕ್ತರು ಕೋಪಗೊಂಡಿದ್ದಾರೆ. ಇಂತಹ ವಿವಾಹಗಳು ನಡೆ ಯದಂತೆ ಅಧಿಕಾರಿಗಳು ವಿಶೇಷ ಕ್ರಮ ಕೈಗೊಳ್ಳುವಂತೆ ಸೂಚಿಸಿದ್ದಾರೆ. ತಿರುಮಲದಲ್ಲಿ ಕುಟುಂಬ ಮತ್ತು ಜೀವನವನ್ನು ಹಾಳುಮಾಡುವ ಎರಡನೇ ಮದುವೆಯನ್ನು ಸಂಪೂರ್ಣವಾಗಿ ನಿಲ್ಲಿಸಲು ಕಟ್ಟುನಿಟ್ಟಾದ ನಿಯಮಗಳನ್ನು ಹೇರುವಂತೆ ಸ್ಥಳೀಯರು ಒತ್ತಾಯಿಸಿದ್ದಾರೆ.

35 ಮೀನುಗಾರರನ್ನು ಬಂಧಿಸಿದ ಶ್ರೀಲಂಕಾ ನೌಕಾ ಪಡೆ

ರಾಮನಾಥಪುರಂ: ತಮಿಳುನಾಡಿನ ರಾಮನಾಥಪುರಂ ಜಿಲ್ಲೆಯ ಪಂಬನ್‌ನ ಸುಮಾರು 35 ಮೀನುಗಾರರನ್ನು ಶ್ರೀಲಂಕಾ ನೌಕಾಪಡೆಯು ಬಂಧಿಸಿದೆ. ಪಂಬನ್ ಮೀನುಗಾರರು ಮೀನುಗಾರಿಕೆಗೆ ಬಳಸುತ್ತಿದ್ದ 4 ದೇಶದ ದೋಣಿಗಳನ್ನು ಅಂತಾರಾಷ್ಟ್ರೀಯ ಕಡಲ ಗಡಿ ರೇಖೆಯನ್ನು (ಐಎಂಬಿಎಲ್) ಉಲ್ಲಂಘಿಸಿದ ಆರೋಪದ ಮೇಲೆ ವಶಪಡಿಸಿಕೊಳ್ಳಲಾಗಿದೆ ಎಂದು ಮೀನುಗಾರಿಕೆ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ಲಂಕಾದ ವಾಯವ್ಯ ಸಮುದ್ರದಲ್ಲಿ ಮನ್ನಾರ್‌ನ ದಕ್ಷಿಣಕ್ಕೆ ಲಂಕಾದ ಸಮುದ್ರದಲ್ಲಿ ಮೀನುಗಾರಿಕೆ ನಡೆಸುತ್ತಿದ್ದಾಗ ಮೀನುಗಾರರನ್ನು ಲಂಕಾ ನೌಕಾಪಡೆ ಬಂಧಿಸಿದೆ. ನಂತರ ಕಲ್ಪಿಟಿಯ ಮೀನುಗಾರಿಕಾ ಅಧಿಕಾರಿಗಳಿಗೆ ಹಸ್ತಾಂತರಿಸಲಾಯಿತು. ಈ ಹಿಂದೆ ಬಂಧಿತರಾಗಿದ್ದ 13 ಮೀನುಗಾರರನ್ನು ಬಿಡುಗಡೆ ಮಾಡುವಂತೆ ಶ್ರೀಲಂಕಾ ನ್ಯಾಯಾಲಯ ಆದೇಶ ನೀಡಿದ ಹಿನ್ನೆಲೆಯಲ್ಲಿ ಈ ಬಂಧನ ನಡೆದಿದೆ.

ಬಂಧನವನ್ನು ಖಂಡಿಸಿರುವ ಎಐಎಡಿಎಂಕೆ ಪ್ರಧಾನ ಕಾರ್ಯದರ್ಶಿ ಎಡಪ್ಪಾಡಿ ಕೆ. ಪಳನಿಸ್ವಾಮಿ,

ಪದೇ ಪದೇ ಮೀನುಗಾರರ ಬಂಧನಕ್ಕೆ ಶಾಶ್ವತ ಪರಿಹಾರವನ್ನು ಖಚಿತಪಡಿಸಿಕೊಳ್ಳಲು ಕೇಂದ್ರ ಸರ್ಕಾರ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುತ್ತಿಲ್ಲ ಎಂದು ಕಿಡಿಕಾರಿದ್ದಾರೆ. ಈ ವಿಚಾರದಲ್ಲಿ ಕೇಂದ್ರದ ಮೇಲೆ ಒತ್ತಡ ಹೇರದ ಡಿಎಂಕೆ ಸರ್ಕಾರವನ್ನು ಅವರು ತರಾಟೆಗೆ ತೆಗೆದುಕೊಂಡರು. ಮೀನುಗಾರರು, ಅವರ ವಸ್ತುಗಳನ್ನು ಬಿಡುಗಡೆ ಮಾಡಲು ಕೇಂದ್ರವು ಕ್ರಮಗಳನ್ನು ತೆಗೆದುಕೊಳ್ಳುವಂತೆ ನಾನು ಒತ್ತಾಯಿಸುತ್ತೇನೆ. ಚುನಾವಣಾ ಸಮಯದಲ್ಲಿ ಕಚ್ಚತೀವು (ಲಂಕಾಗೆ ಬಿಟ್ಟುಕೊಟ್ಟ) ದ್ವೀಪದ ಬಗ್ಗೆ ಮಾತನಾಡಬೇಡಿ. ತಮಿಳುನಾಡು ಮೀನುಗಾರರು ಸಹ ಭಾರತೀಯರು ಎಂಬುದನ್ನು ನೆನಪಿನಲ್ಲಿಡಿ ಎಂದು ಪಳನಿಸ್ವಾಮಿ ಪತ್ರದಲ್ಲಿ ಹೇಳಿದ್ದಾರೆ.

ಶೀಘ್ರದಲ್ಲೇ ಭಾರತದಲ್ಲಿ ಏನೋ ಬಹುದೊಡ್ಡ ಬದಲಾವಣೆ

ಭಾರತಕ್ಕೆ ಸಂಬಂಧಿಸಿದ ಮತ್ತೊಂದು ಬಾಂಬ್ ಸಿಡಿಸಲು ಸಜ್ಜಾದ ಹಿಂಡನ್‌ಬರ್ಗ್, ಈ ಬಾರಿ ಯಾರು ಟಾರ್ಗೆಟ್..?

ವಾಷಿಂಗ್ಟನ್: ಭಾರತದ ಖ್ಯಾತ ಉದ್ಯಮಿ ಗೌತಮ್ ಅದಾನಿ ನೇತೃತ್ವದ ಅದಾನಿ ಗ್ರೂಪ್ ಅಕ್ರಮ ಎಸಗಿದೆ ಎಂದು ಅಮೆರಿಕದ ಹಿಂಡನ್‌ಬರ್ಗ್ ಸಂಸ್ಥೆಯು 2023ರ ಜನವರಿಯಲ್ಲಿ ವರದಿ ಪ್ರಕಟಿಸಿದ ದೇಶಾದ್ಯಂತ ಸಂಚಲ ಮೂಡಿಸಿತ್ತು. ಇದೀಗ ಮತ್ತೊಮೆ ಭಾರತ ಕೇಂದ್ರಿತ ವರದಿ ಪ್ರಕಟಿಸುವುದಾಗಿ ಘೋಷಿಸಿದೆ. ಈ ಬಗ್ಗೆ ಶನಿವಾರ ಸಾಮಾಜಿಕ ಜಾಲತಾಣ ಎಕ್ಸ್ ನಲ್ಲಿ ಸೂಚನೆ ನೀಡಿದೆ. ಶೀಘ್ರದಲ್ಲೇ ಭಾರತದಲ್ಲಿ ಏನೋ ಬಹುದೊಡ್ಡ ಬದಲಾವಣೆ ನಡೆಯಲಿದೆ ಎಂದು ಸಂಸ್ಥೆ ಬರೆದುಕೊಂಡಿದೆ.

ಅದಾನಿ ಗ್ರೂಪ್ ಆಂತರಿಕ ವ್ಯಾಪಾರ ಮತ್ತು ಷೇರು ಮಾರುಕಟ್ಟೆಯಲ್ಲಿ ನಿಯಮ ಉಲ್ಲಂಘನೆಗಳನ್ನು ಮಾಡುತ್ತಿದೆ ಎಂದು ಆರೋಪಿಸಿ ಹಿಂಡನ್‌ಬರ್ಗ್ ವರದಿ ಪ್ರಕಟಿಸಿದ ಸುಮಾರು ಒಂದೂವರೆ ವರ್ಷದ ಬಳಿಕ ಮತ್ತೊಂದು ಬಾಂಬ್ ಸಿಡಿಸಲು ಸಜ್ಜಾಗಿದೆ. ಜನವರಿ 2023 ರಲ್ಲಿ ಹಿಂಡನ್‌ಬರ್ಗ್ ಅದಾನಿ ಗ್ರೂಪ್‌ನ ಹಣಕಾಸು ಅಕ್ರಮಗಳ ಆರೋಪದ ವರದಿಯನ್ನು ಪ್ರಕಟಿಸಿತು. ಇದು ಕಂಪನಿಯ ಷೇರು ಬೆಲೆಯಲ್ಲಿ ಗಮನಾರ್ಹ ಕುಸಿತಕ್ಕೆ ಕಾರಣವಾಯಿತು. ಅದಾನಿ ಗ್ರೂಪ್



ಹಿಂಡನ್‌ಬರ್ಗ್ ವರದಿಯನ್ನು ತಳ್ಳಿಹಾಕಿತ್ತು. ಹಿಂಡನ್‌ಬರ್ಗ್ ವರದಿಯು ಅದಾನಿ ಸಮೂಹದಿಂದ ಸ್ಟಾಕ್ ಮ್ಯಾನಿಪ್ಯುಲೇಷನ್, ವಂಚನೆಯನ್ನು ಆರೋಪಿಸಿದೆ.

ಈ ಪ್ರಕರಣವು ಅದಾನಿ ತನ್ನ ಷೇರು ಬೆಲೆಗಳನ್ನು ಹೆಚ್ಚಿಸಿದೆ ಎಂಬ ಆರೋಪಗಳಿಗೆ (ಶಾರ್ಟ್-ಸೆಲ್ಲರ್ ಹಿಂಡನ್‌ಬರ್ಗ್ ರಿಸರ್ಚ್‌ನ ವರದಿಯ ಭಾಗ) ಸಂ ಬಂಧಿಸಿದೆ.

ಹಿಂಡನ್‌ಬರ್ಗ್ ವರದಿಯಲ್ಲಿ ಏನಿತ್ತು?

ಗೌತಮ್ ಅದಾನಿ ನೇತೃತ್ವದ ಅದಾನಿ ಗ್ರೂಪ್ ಅಕ್ರಮ ಎಸಗಿದೆ ಎಂದು ಅಮೆರಿಕದ ಹಿಂಡ ನ್‌ಬರ್ಗ್ ಸಂಸ್ಥೆಯು 2023ರ ಜನವರಿಯಲ್ಲಿ ಪ್ರಕಟಿಸಿದ ವರದಿಯು ದೇಶದಲ್ಲಿ ವ್ಯಾಪಕ ಚರ್ಚೆ ಹುಟ್ಟು ಹಾಕಿತ್ತು. ಹೂಡಿಕೆದಾರರಿಗೆ ಅದಾನಿ ಗ್ರೂಪ್ ವಂಚನೆ ಮಾಡದೆ. ಷೇರು ಮಾರುಕಟ್ಟೆಯಲ್ಲಿ ಅದಾನಿ ಗ್ರೂಪ್ ಷೇರು ಮೌಲ್ಯಗಳನ್ನು ಹೆಚ್ಚು ತೋರಿಸಿರುವುದು ವಂಚನೆಯಾಗಿದೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿತ್ತು. ಇದಾದ ಬಳಿಕ ಅದಾನಿ ಗ್ರೂಪ್ ಷೇರು ಮೌಲ್ಯವು ದಿಢೀರನೆ ಕುಸಿದು ಭಾರಿ ನಷ್ಟವಾಗಿತ್ತು.

ಈ ಆರೋಪಗಳನ್ನು ಪ್ರಕಟಿಸಿದ ನಂತರ, ಇದು ವಿವಿಧ ಅದಾನಿ ಸಮೂಹದ ಕಂಪನಿಗಳ ಷೇರುಗಳಲ್ಲಿ ತೀವ್ರ ಕುಸಿತಕ್ಕೆ ಕಾರಣವಾಯಿತು. ವರದಿಯ ಪ್ರಕಾರ 100 ಶತಕೋಟಿಯಷ್ಟು ನಷ್ಟವಾಗಿತ್ತು. ಅದಾನಿ ಸಮೂಹವು ಹಿಂಡನ್‌ಬರ್ಗ್ ಸಂಶೋಧನಾ ವರದಿಯಲ್ಲಿನ ಎಲ್ಲಾ ಆರೋಪಗಳನ್ನು ಪದೇ ಪದೇ ನಿರಾಕರಿಸಿದೆ.

ಹಿಂಡನ್‌ಬರ್ಗ್ ವರದಿ ಕುರಿತು ತನಿಖೆಯಾಗಬೇಕು ಎಂದು ಸುಪ್ರೀಂ ಕೋರ್ಟ್‌ಗೆ ಹಲವರು ಮೊರೆ ಹೋಗಿದ್ದರು. ಅಲ್ಲದೆ ಅದಾನಿ ಗ್ರೂಪ್ ಅಕ್ರಮ ಪತ್ತೆ ಹಚ್ಚುವಲ್ಲಿ ಸೆಬಿ ವಿಲವಾಗಿದೆ. ಹಾಗಾಗಿ ತನಿಖೆಗೆ ಎಸ್ ಐಟಿ ರಚಿಸಬೇಕು ಎಂದು ಅರ್ಜಿ ಸಲ್ಲಿಸಲಾಗಿತ್ತು. ಹಾಗಾಗಿ ಸರ್ವೋಚ್ಚ ನ್ಯಾಯಾಲಯವು 2023ರ ಮಾರ್ಚ್‌ನಲ್ಲಿ ಸೆಬಿ ತನಿಖೆ ಮೇಲೆ ನಿಗಾ ಇರಿಸಲು, ತನಿಖೆಯಲ್ಲಿ ದೋಷ ಪತ್ತೆಹಚ್ಚಲು ಆರು ಸದಸ್ಯರ ತನಿಖಾ ಸಮಿತಿ ರಚಿಸಿತ್ತು. ಇದಾದ ಎರಡು ತಿಂಗಳ ಬಳಿಕ ಸೆಬಿಯು ಸುಪ್ರೀಂ ಕೋರ್ಟ್‌ಗೆ ತನಿಖಾ ವರದಿ ಸಲ್ಲಿಸಿತ್ತು. ಅದಾನಿ ಗ್ರೂಪ್ ವಂಚನೆ ಮಾಡಿದೆ ಎಂಬುದನ್ನು ಸಾಬೀತುಪಡಿಸಲು ಈ ಹಂತದಲ್ಲಿ ಯಾವುದೇ ಸಾಕ್ಷ್ಯಾಧಾರಗಳು ಇಲ್ಲ ಎಂದು ಉಲ್ಲೇಖಿಸಿತ್ತು. ಗೌತಮ್ ಅದಾನಿ-ಹಿಂಡನ್‌ಬರ್ಗ್ ವರದಿ ಪ್ರಕರಣಕ್ಕೆ ಸಂಬಂಧಿಸಿದಂತೆ ಸೆಬಿ ನಡೆಸುತ್ತಿರುವ ತನಿಖೆಯ ವಿಷಯದಲ್ಲಿ ಮಧ್ಯಸ್ಥಿಕೆ ವಹಿಸುವುದಿಲ್ಲ ಎಂದು ಸುಪ್ರೀಂ ಕೋರ್ಟ್ ಸ್ಪಷ್ಟಪಡಿಸಿತ್ತು. ಸೆಬಿಯು ತನಿಖೆ ಹಾಗೂ ನಿಯಂತ್ರಕ ಸಂಸ್ಥೆಯಾಗಿರುವುದರಿಂದ ಅದರ ತನಿಖೆಯಲ್ಲಿ ಸುಪ್ರೀಂ ಕೋರ್ಟ್ ಹಸ್ತಕ್ಷೇಪ ಮಾಡಲು ಆಗುವುದಿಲ್ಲ ಎಂದು ಸುಪ್ರೀಂ ಕೋರ್ಟ್ ತಿಳಿಸಿತ್ತು. ಇದರಿಂದಾಗಿ ಗೌತಮ್ ಅದಾನಿ ನೇತೃತ್ವದ ಗ್ರೂಪ್‌ಗೆ ರಿಲೀಫ್ ಸಿಕ್ಕಿತ್ತು.

ಸತತ 3 ಗಂಟೆ ನೃತ್ಯ ಮಾಡಿ ವಯನಾಡು ಸಂತ್ರಸ್ತರಿಗೆ ನೆರವು ನೀಡಿದ ಬಾಲಕಿ

ಕೇರಳ: ವಯನಾಡಿನಲ್ಲಿ ಸಂಭವಿಸಿದ ಗುಡ್ಡಕುಸಿತದಿಂದ ನೂರಾರು ಜನ ಪ್ರಾಣ ಕಳೆದುಕೊಂಡು, ನೂರಾರು ಜನ ಸಂತ್ರಸ್ತರಾಗಿ ಅತಂತ್ರರಾಗಿದ್ದಾರೆ. ಇವರ ಸಂಕಷ್ಟಕ್ಕೆ ಸ್ಪಂದಿಸಲು ನೂ ರಾರು ಜನ ಮುಂದೆ ಬರುತ್ತಿದ್ದಾರೆ. ಚಲನಚಿತ್ರ ನಟರು, ವಿವಿಧ ಗಣ್ಯರು ಕೋಟ್ಯಂತರ ರೂ. ನೆರವು ನೀಡಿದ್ದಾರೆ. ವಿವಿಧ ಸರ್ಕಾರಗಳು ನೂ ರಾರು ಕೋಟಿ ರೂ. ನೆರವು ಘೋಷಣೆ ಮಾಡಿವೆ. ವಯನಾಡಿನಲ್ಲಿ ಸಂಭವಿಸ

ಐಶ್ವರ್ಯಾ-ಅಭಿಷೇಕ್ ವಿಚ್ಛೇದನ ಪಡೆಯದೆ ಇರಲು ಇದುವೇ ಕಾರಣ

ಕಳೆದ ಕೆಲವು ದಿನಗಳಿಂದ ಬಚ್ಚನ್ ಕುಟುಂಬದಲ್ಲಿ ವಿಚ್ಛೇದನದ ಮಾತುಗಳು ಜೋರಾಗಿದೆ. ಆದರೆ ಕುಟುಂಬದ ಯಾವುದೇ ಸದಸ್ಯರು ಇನ್ನೂ ಅಧಿಕೃತವಾಗಿ ಈ ಬಗ್ಗೆ ಹೇಳಿಕೆ ನೀಡಿಲ್ಲ. ಬಚ್ಚನ್ ಕುಟುಂಬ ಅಭಿಮಾನಿಗಳಲ್ಲಿ ಮತ್ತು ಸಾಮಾಜಿಕ ಜಾಲತಾಣದಲ್ಲಿ ಈ ಬಗ್ಗೆ ಚರ್ಚೆ ಆಗುತ್ತಿದೆ. ಐಶ್ವರ್ಯಾ ಹಾಗೂ ಅಭಿಷೇಕ್ ಪ್ರತ್ಯೇಕವಾಗಿ ಅನಂತ್ ಅಂಬಾನಿ- ರಾಧಿಕಾ ಮರ್ಚೆಂಟ್ ಮದುವೆಗೆ ಆಗಮಿಸಿದ್ದು ಇವರ ವಿಚ್ಛೇದನ ಹುಟ್ಟಲು ಕಾರಣ. ಐಶ್ವರ್ಯಾ-ಅಭಿಷೇಕ್ ಜಗಳವಾಡಿದರೂ ವಿಚ್ಛೇದನ ಪಡೆಯಲು ಸಾಧ್ಯವಿಲ್ಲ ಎಂದು ಹೇಳುತ್ತಿದ್ದಾರೆ. ಇದಕ್ಕೆ ಕಾರಣವೂ ಇದೆ.

ಮಾಧ್ಯಮ ವರದಿಗಳ ಪ್ರಕಾರ ಕಳೆದ ಕೆಲವು ದಿನಗಳಿಂದ ಐಶ್ವರ್ಯಾ ರೈ ಮತ್ತು ಅಭಿಷೇಕ್ ಬಚ್ಚನ್ ಒಟ್ಟಾಗಿ ಇಲ್ಲ. ಇಬ್ಬರ ನಡುವೆ ಏನಾಯಿತು ಎಂಬುದು ಇನ್ನೂ ರಿವೀಲ್ ಆಗಿಲ್ಲ. ಐಶ್ವರ್ಯಾ ರೈ ಮತ್ತು ಅಭಿಷೇಕ್ ಬಚ್ಚನ್ ಸಂಬಂಧ ಇನ್ನೂ ಹಾಗೆಯೇ ಇರಲು ಮಗಳು ಆರಾಧ್ಯಾ ಕಾರಣ ಎನ್ನಲಾಗಿದೆ. ಸಂದರ್ಶನ ಒಂದರಲ್ಲಿ ಅಭಿಷೇಕ್ ಅವರು ಮಾತೊಂದನ್ನು ಹೇಳಿದ್ದರು. 'ಆರಾಧ್ಯ ಹುಟ್ಟಿದ ನಂತರ ಐಶ್ವರ್ಯಾ ಕೆಲಸ ಮಾಡಲು ಬಯಸಿದರೆ ಮಗುವನ್ನು ನಾನು ನೋಡಿಕೊಳ್ಳುತ್ತೇನೆ' ಎಂದಿದ್ದರು.

ಬಚ್ಚನ್ ಕುಟುಂಬದಲ್ಲಿ ಇದುವರೆಗೆ ಯಾವುದೇ ವಿಚ್ಛೇದನಗಳು ನಡೆದಿಲ್ಲ. ಐಶ್ವರ್ಯಾ-ಅಭಿಷೇಕ್ ಕಹಿ ಸಂಬಂಧದ ನಂತರವೂ ಒಟ್ಟಿಗೆ ಇರಲು ಇದೇ ಕಾರಣ ಎನ್ನಲಾಗಿದೆ. ಅಮಿತಾಭ್ ಬಚ್ಚನ್ ಹಾಗೂ ಜಯಾ ಬಚ್ಚನ್ ಮದುವೆ ಆಗಿ ಹಲವು ದಶಕ ಕಳೆದಿದೆ. ರೇಖಾ ಜೊತೆ ಅಮಿತಾಭ್ ಹೆಸರು ಕೇಳಿ ಬಂತು. ಆದಾಗ್ಯೂ ಅಮಿತಾಭ್ ಜೊತೆ ಜಯಾ ನಿಂತಿದ್ದಾರೆ. ಶ್ವೇತಾ ಬಚ್ಚನ್ ಮತ್ತು ನಿಖಿಲ್ ನಂದಾ ಅವರ ಸಂಬಂಧವು ಮುರಿದು ಹೋಗಿದೆ ಎನ್ನಲಾಗಿದೆ. ಈಗ ಶ್ವೇತಾ ಹೆಚ್ಚು ಕಾಲ ತಂದೆ ಅಮಿತಾಭ್ ಬಚ್ಚನ್ ಮನೆಯಲ್ಲಿಯೇ ಇರುತ್ತಾರೆ. ಕುಟುಂಬದ ಮಾನ ಉಳಿಸಲು ಶ್ವೇತಾ ಅವರು ನಿಖಿಲ್‌ಗೆ ವಿಚ್ಛೇದನ ನೀಡಿಲ್ಲ ಎಂದೂ ಹೇಳಲಾಗುತ್ತಿದೆ.

ಖ್ಯಾತನಟ ಸೂರ್ಯಗೆ ಸೆಟ್‌ನಲ್ಲಿ ಗಾಯ

ಶೂಟಿಂಗ್ ವೇಳೆ ಎಷ್ಟೇ ಎಚ್ಚರಿಕೆ ತೆಗೆದುಕೊಂಡರೂ ಅಪಘಾತ ಸಂಭವಿಸುತ್ತದೆ. ಸೂರ್ಯ ಸಿನಿಮಾದ ತಂಡದವರೂ ಸಾಕಷ್ಟು ಎಚ್ಚರಿಕೆ ವಹಿಸಿದ್ದರು. ಆದಾಗ್ಯೂ ಅವಘಡ ಸಂಭವಿಸಿದೆ. ಈಗ ಸೂರ್ಯ ಚೇತರಿಕೆ ಕಂಡಿದ್ದಾರೆ. ಈ ವಿಚಾರ ಕೇಳಿ ಫ್ಯಾನ್ಸ್ ನಿಟ್ಟುಸಿರು ಬಿಟ್ಟಿದ್ದಾರೆ.

ಕಾಲಿವುಡ್‌ನ ಖ್ಯಾತ ನಟ ಸೂರ್ಯ ಅವರ ತಲೆಗೆ ಪೆಟ್ಟಾದ ಬಗ್ಗೆ ವರದಿ ಆಗಿದೆ. ಅವರು ತ್ರೀಚೆಗೆ 'ಸೂರ್ಯ 44' ಸಿನಿಮಾದ ಶೂಟ್‌ನಲ್ಲಿ ಬ್ಯುಸಿ ಇದ್ದರು. ಪೆಟ್ಟಾಗಿರೋ ಕಾರಣದಿಂದ ಸಿನಿಮಾದ ಶೂಟ್‌ನ ಅರ್ಧಕ್ಕೆ ನಿಲ್ಲಿಸಲಾಗಿದೆ ಎಂದು ವರದಿ ಆಗಿದೆ. ಈ ತಿಂಗಳ ಆರಂಭದಲ್ಲಿ ಊಟಿಯಲ್ಲಿ 'ಸೂರ್ಯ 44' ಚಿತ್ರದ ಕೆಲಸ ಆರಂಭ ಆಗಿತ್ತು. ಈಗ ಚಿತ್ರೀಕರಣವನ್ನು ತಾತ್ಕಾಲಿಕವಾಗಿ ನಿಲ್ಲಿಸಲಾಗಿದೆ. ಈ ಚಿತ್ರವನ್ನು ಕಾರ್ತಿಕ್ ಸುಬ್ಬರಾಜು ಅವರು ನಿರ್ದೇಶನ ಮಾಡುತ್ತಿದ್ದಾರೆ.

ಶೂಟಿಂಗ್ ವೇಳೆ ಎಷ್ಟೇ ಎಚ್ಚರಿಕೆ ತೆಗೆದುಕೊಂಡರೂ ಅಪಘಾತ ಸಂಭವಿಸುತ್ತದೆ. ಸೂರ್ಯ ಸಿನಿಮಾದ ತಂಡದವರೂ ಸಾಕಷ್ಟು ಎಚ್ಚರಿಕೆ ವಹಿಸಿದ್ದರು.

ಶಾರುಖ್ ಜತೆ ಸಿನಿಮಾ ರವೀನಾ ರಿಜೆಕ್ಟ್

ಶಾರುಖ್ ಖಾನ್ ಜೊತೆ ನಟಿಸುವ ಅವಕಾಶ ಸಿಕ್ಕರೆ ಬಹುತೇಕ ನಟಿಯರು ಕಣ್ಣು ಮುಚ್ಚಿಕೊಂಡು ಒಪ್ಪಿಕೊಳ್ಳುತ್ತಾರೆ. ಅಷ್ಟರಮಟ್ಟಿಗೆ ಇದೆ ಶಾರುಖ್ ಹವಾ. ಆದರೆ ನಟಿ ರವೀನಾ ಟಂಡನ್ ಅವರು ಈ ಮೊದಲು ಶಾರುಖ್ ಖಾನ್ ಜೊತೆಗಿನ ಒಂದು ಸಿನಿಮಾವನ್ನು ತಿರಸ್ಕರಿಸಿದ್ದರು. ಆ ಕುರಿತು ಅವರು ಈಗ ಮಾಧ್ಯಮವೊಂದಕ್ಕೆ ನೀಡಿದ ಸಂದರ್ಶನದಲ್ಲಿ ಮಾತನಾಡಿದ್ದಾರೆ. ಶಾರುಖ್ ಖಾನ್ ಮತ್ತು ರವೀನಾ ಟಂಡನ್ ಅವರು ಜೊತೆಯಾಗಿ ಕೆಲವು ಸಿನಿಮಾಗಳಲ್ಲಿ ನಟಿಸಿದ್ದಾರೆ. ಆದರೆ ಒಂದು ಸಿನಿಮಾದಿಂದ ರವೀನಾ ಟಂಡನ್ ಅವರು ಮುಲಾಜಿಲ್ಲದೇ ಹೊರಬಂದಿದ್ದರು.

ಅದು ಯಾವ ಸಿನಿಮಾ ಎಂಬುದನ್ನು ರವೀನಾ ಟಂಡನ್ ಅವರು ಬಹಿರಂಗಪಡಿಸಿಲ್ಲ. ಆದರೆ ಆದ ಘಟನೆ ಏನು ಎಂಬುದನ್ನು ವಿವರಿಸಿದ್ದಾರೆ. ಆ ಸಿನಿಮಾದ ಕಥೆಯನ್ನು ರವೀನಾ ಟಂಡನ್ ಅವರು ಕೇಳಿ ಇಷ್ಟಪಟ್ಟಿದ್ದರು. ಸಿನಿಮಾದಲ್ಲಿ ನಟಿಸಲು ಗ್ರೀನ್ ಸಿಗ್ನಲ್ ಕೂಡ ನೀಡಿದ್ದರು. ಆದರೆ ಸಮಸ್ಯೆ ಆಗಿದ್ದು ಬಟ್ಟೆಯದು! ಹೌದು, ತಮಗೆ ಸರಿ ಎನಿಸದ ರೀತಿಯ ಕಾಸ್ಟ್ಯೂಮ್ ಧರಿಸಲು ಹೇಳಿದ್ದರಿಂದ ರವೀನಾ ಟಂಡನ್ ಅವರು ಆ ಸಿನಿಮಾದಿಂದ ಹೊರನಡೆದರು.

ಆ ಬಟ್ಟೆಯ ಮೂಲಕ ನಟಿಯನ್ನು ಒಂದು ವಸ್ತುವಿನ ರೀತಿಯಲ್ಲಿ ಬಿಂಬಿಸುವ ಉದ್ದೇಶ ಆ ಚಿತ್ರತಂಡದ್ದಾಗಿತ್ತು. ಅದಕ್ಕೆ ರವೀನಾ ಅವರಿಗೆ ಸಹಮತ ಇರಲಿಲ್ಲ. ಅಂಥ ಕಾಸ್ಟ್ಯೂಮ್ ಅವರಿಗೆ ವಿಚಿತ್ರ ಅಂತ ಎನಿಸಿತು ಕೂಡ. ಹಾಗಾಗಿ ಮುಲಾಜಿಲ್ಲದೇ ತಮ್ಮ ನಿರ್ಧಾರ ತಿಳಿಸಿದರು. ಬಳಿಕ ಶಾರುಖ್ ಖಾನ್ ಅವರಿಗೆ ಕರೆಮಾಡಿ ವಿಷಯ ತಿಳಿಸಿದರು.

ಶಾರುಖ್ ಕೂಡ ಸಮಸ್ಯೆ ಅರ್ಥ ಮಾಡಿಕೊಂಡರು. ಹಾಗಾಗಿ ಶಾರುಖ್ ಖಾನ್ ಅವರನ್ನು ಜಂಟಲ್‌ಮ್ಯಾನ್ ಎಂದು ರವೀನಾ ಟಂಡನ್ ಕರೆದಿದ್ದಾರೆ. ಇನ್ನು, ಬೇರೆ ಕಾರಣಗಳಿಂದಲೂ ರವೀನಾ ಟಂಡನ್ ಅವರು ಶಾರುಖ್ ಜೊತೆಗಿನ ಸಿನಿಮಾವನ್ನು ರಿಜೆಕ್ಟ್ ಮಾಡಿದ್ದರು. ಶಾರುಖ್ ಖಾನ್ ನಟನೆಯ 'ಡರ್' ಸಿನಿಮಾ 1993ರಲ್ಲಿ ಮೂಡಿಬಂದಿತ್ತು.

ಜನ ಹೇಳುವ ಮಹಿಳಾ ಕಥೆಗಳ ಅಗತ್ಯವಿದೆ

ನಮಗೆ ಮಹಿಳಾ ಕೇಂದ್ರಿತ ಚಿತ್ರಗಳಿಗಿಂತ ಜನ ಹೇಳುವ ಮಹಿಳಾ ಚಿತ್ರಗಳ ಅಗತ್ಯವಿದೆ ಎಂದು ಫಿಲಂಫೇರ್ ಪ್ರಶಸ್ತಿ ಪುರಸ್ಕೃತರಾದ ಕನ್ನಡದ ನಟಿ ಸಿರಿ ರವಿಕುಮಾರ್ ಹೇಳಿದ್ದಾರೆ.

'ಸ್ವಾತಿ ಮುತ್ತು ಮಳೆ ಹನಿಯೇ' ಚಿತ್ರದಲ್ಲಿನ ಪ್ರೇರಣಾ ಪಾತ್ರಕ್ಕಾಗಿ 69ನೇ ಫಿಲಂಫೇರ್ ಅವಾರ್ಡ್ಸ್ ಸೌತ್‌ನಲ್ಲಿ ಕನ್ನಡ ಚಲನಚಿತ್ರಗಳ ವಿಭಾಗದಲ್ಲಿ ಅತ್ಯುತ್ತಮ ಕಲಾವಿದೆ (ಮಹಿಳೆ) ಪ್ರಶಸ್ತಿಯನ್ನು ಸಿರಿ ರವಿಕುಮಾರ್ ಪಡೆದಿದ್ದಾರೆ.

ಚಿತ್ರದಲ್ಲಿನ ತನ್ನ ಪಾತ್ರ ಕುರಿತು ಪಿಟಿಐ ಸುದ್ದಿಸಂಸ್ಥೆಯೊಂದಿಗೆ ಅನುಭವ ಹಂಚಿಕೊಂಡ ಅವರು, ಪ್ರೇರಣಾಳ ಪಾತ್ರ ವಿವಿಧ ಛಾಯೆ ಹೊಂದಿದ್ದು, ಅದು ಯಾರನ್ನಾದರೂ ಮನುಷ್ಯನನ್ನಾಗಿ ಮಾಡುತ್ತದೆ. ಭಾರತೀಯ ಸಿನಿಮಾದಲ್ಲಿ ಮಹಿಳೆಯರನ್ನು ತೋರಿಸುವ ವಿಷಯದಲ್ಲಿ ಇನ್ನೂ ಸ್ವಲ್ಪ ಬದಲಾವಣೆಯಾಗಬೇಕಿದೆ ಎಂದರು.

ಅವಳು ಯಾವುದರಲ್ಲಿ ಕೆಟ್ಟವಳು

ಅವಳು ಯಾವುದರಲ್ಲಿ ಕೆಟ್ಟವಳು, ಅವಳಿಗೆ ಏನು ಕೆಲಸ ಮಾಡಬೇಕು, ಏನು ಕೆಲಸ ಮಾಡಬಾರದು ಮತ್ತು ಅವಳು ಆ ಕೆಲಸ ಮಾಡುತ್ತಾಳೆಯೇ ಅಥವಾ ಇತರರಿಗೆ ಕೆಲಸ ಮಾಡುವುದಿಲ್ಲ ಎಂದು ಸಹ ನೀವು ತೋರಿಸಬೇಕು ಎಂದು ರವಿಕುಮಾರ್ ಪಿಟಿಐಗೆ ತಿಳಿಸಿದರು.

ಸ್ವಾತಿ ಮುತ್ತು ಮಳೆ ಹನಿಯೇ ಚಿತ್ರದಲ್ಲಿನ ಪ್ರೇರಣಾ ಪಾತ್ರ ಸಿಕ್ಕಿದ್ದು, ತನ್ನ ಅದೃಷ್ಟ. ಮೊದಲ ಚಿತ್ರ 'ಸಕುಟುಂಬ ಸಮೇತ'ದಲ್ಲಿ ಹುಡುಗಿ ಪಾತ್ರ, ಆಕೆಯ ಗೊಂದಲ ಚಿತ್ರದ ಕೇಂದ್ರಬಿಂದುವಾಗಿತ್ತು. ಜೀವನದಲ್ಲಿ ತನಗೆ ಏನು ಬೇಕು ಎಂಬ ಬಗ್ಗೆ ಶ್ರದ್ಧಾಗೆ ಗೊಂದಲವಿತ್ತು ಎಂದು ಹೇಳುವ ರವಿಕುಮಾರ್, ಗಿರೀಶ್ ಕಾಸರವಳ್ಳಿ ಅವರ ಪುತ್ರಿ ಅನನ್ಯಾ ಕಾಸರವಳ್ಳಿ ಅವರ ಚೊಚ್ಚಲ ನಿರ್ದೇಶನದ 'ಹರಿಕಥಾ ಪ್ರಸಂಗ'ಮೂಲಕ ತನ್ನ ಸಿನಿಮಾ ವೃತ್ತಿಜೀವನ ಆರಂಭಿಸಿದರು.

ಅದೊಂದು ಸಣ್ಣ ಪಾತ್ರವಾಗಿತ್ತು. ನನ್ನ ಗುರುಗಳೂ ಆಗಿರುವ ಪ್ರಕಾಶ್ ಬೆಳವಾಡಿ ನನ್ನನ್ನು ಆ ಚಿತ್ರಕ್ಕೆ ಶಿಫಾರಸು ಮಾಡಿದರು.

ಓ ಏ ಲಡ್ಕಿ ಹಾಡಿಗೆ ರಾಗಿಣಿ ಸಾಥ್

ಆಲ್ಬಂ ಸಾಂಗ್ ಪ್ಲ್ಯಾನ್

'ಓ ಏ ಲಡ್ಕಿ' ಹಾಡನ್ನು 'ಆಕಾಶ್ ಆಡಿಯೋ' ಮೂಲಕ ಬಿಡುಗಡೆ ಮಾಡಲಾಗಿದೆ. ಈ ಹಾಡಿಗೆ ಅಧೀರ ಸಂತು ಅವರ ನಿರ್ದೇಶನವಿದೆ. ನಿರ್ಮಾಣ ಕೂಡ ಅವರದ್ದೇ. ನಟಿ ರಾಗಿಣಿ ದ್ವಿವೇದಿ ಅವರು ಸಾಂಗ್ ಬಿಡುಗಡೆ ಮಾಡುವ ಮೂಲಕ ತಂಡಕ್ಕೆ ಸಾಥ್ ನೀಡಿದ್ದಾರೆ. ಸಮೀರ್, ಅಮೃತಾ ಹಾಗೂ ಉಗ್ರಂ ರವಿ ಅವರು 'ಓ ಏ ಲಡ್ಕಿ' ಹಾಡಿನಲ್ಲಿ ಕಾಣಿಸಿಕೊಂಡಿದ್ದಾರೆ.

ಕನ್ನಡದಲ್ಲಿ ಅನೇಕ ಮ್ಯೂಸಿಕ್ ವಿಡಿಯೋಗಳು ಜನಮನ ಗೆದ್ದಿವೆ. ಹಾಗಾಗಿ ಅಂಥ ಪ್ರಯತ್ನಗಳು ಆಗಾಗ ನಡೆಯುತ್ತವೆ. ಈಗ ಅಧೀರ ಸಂತು ಅವರು ಒಂದು ಹೊಸ ಆಲ್ಬಂ ಸಾಂಗ್ ಮಾಡಿದ್ದಾರೆ. 'ಓ ಏ ಲಡ್ಕಿ' ಎಂಬುದು ಇದರ ಶೀರ್ಷಿಕೆ. ಈ ಟೈಟಲ್‌ಗೆ ತಕ್ಕಂತೆಯೇ ಬಾಲಿವುಡ್ ಶೈಲಿಯಲ್ಲಿ ಸಾಂಗ್ ಮೂಡಿಬಂದಿದೆ. ಈ ಹಾಡನ್ನು ನಟಿ ರಾಗಿಣಿ ದ್ವಿವೇದಿ ಅವರು ಇತ್ತೀಚೆಗೆ ರಿಲೀಸ್ ಮಾಡಿ ಶುಭ ಹಾರೈಸಿದರು. 'ಆಕಾಶ್ ಆಡಿಯೋ' ಸಂಸ್ಥೆಯ ಮೂಲಕ ಈ ಗೀತೆ ರಿಲೀಸ್ ಆಗಿದೆ. ಅಧೀರ ಸಂತು ಅವರೇ ನಿರ್ಮಾಣ ಕೂಡ ಮಾಡಿದ್ದಾರೆ.

ಸಾಂಗ್ ರಿಲೀಸ್ ಬಳಿಕ ಮಾತನಾಡಿದ ಅಧೀರ ಸಂತು ಅವರು 'ನಾನು ಚಿತ್ರರಂಗಕ್ಕೆ ಹೊಸಬನಲ್ಲ. ಉಪೇಂದ್ರ ಅವರ 50ನೇ ಸಿನಿಮಾವನ್ನು ನಾನೇ ಮಾಡಬೇಕಿತ್ತು. ಅವರು ಕಥೆ ಕೇಳಿದ ಬಳಿಕ ಡೇಟ್ಸ್ ಸಹ ನೀಡಿದ್ದರು. ಆದರೆ ಕಾರಣಾಂತರಗಳಿಂದ ಆ ಪ್ರಾಜೆಕ್ಟ್ ಡ್ರಾಪ್ ಆಯಿತು. ಈಗ ಸ್ನೇಹಿತರ ಸಹಕಾರದಿಂದ ಈ ಹಾಡನ್ನು ನಿರ್ದೇಶಿಸಿದ್ದೇನೆ. ರಾಗಿಣಿ ದ್ವಿವೇದಿ ಅವರನ್ನೇ ಸ್ಫೂರ್ತಿಯಾಗಿ ಇಟ್ಟುಕೊಂಡು ಈ ಹಾಡು ಮಾಡಿದ್ದೇವೆ. ರಾಗಿಣಿ ಬ್ಯುಸಿ ಇದ್ದ ಕಾರಣದಿಂದ ಬೇರೆ ನಟಿ ಇದರಲ್ಲಿ ನಟಿಸಿದರು. ರಾಗಿಣಿ ಜೊತೆ ಮುಂದಿನ ದಿನಗಳಲ್ಲಿ ಇನ್ನೊಂದು ಆಲ್ಬಂ ಸಾಂಗ್ ಮಾಡುವ ಪ್ಲ್ಯಾನ್ ಇದೆ' ಎಂದರು. 'ಓ ಏ ಲಡ್ಕಿ' ಸಾಂಗ್ ರಿಲೀಸ್ ವೇಳೆ ಇದರ ಇದರ ಲಿರಿಕಲ್ ವಿಡಿಯೋ ಮತ್ತು ರಿಮಿಕ್ಸ್ ವರ್ಷನ್ ಸಹ ಪ್ರದರ್ಶನ ಮಾಡಲಾಯಿತು. ಅಧೀರ ಸಂತು ಅವರೇ ಈ ಗೀತೆಗೆ ಸಾಹಿತ್ಯ ಬರೆದು ಹಾಡಿದ್ದಾರೆ. ಸಾಮಾನ್ಯ ಡೆಲಿವರಿ ಹುಡುಗನೊಬ್ಬ ಒಬ್ಬ ತನ್ನ ಡ್ಯಾನ್ಸ್ ಮೂಲಕ ಎನ್.ಆರ್.ಐ. ಹುಡುಗಿಯನ್ನು ಹೇಗೆ ಮೆಚ್ಚಿಸುತ್ತಾನೆ ಎಂಬುದನ್ನು ಈ ಹಾಡಲ್ಲಿ ತೋರಿಸಲಾಗಿದೆ.

ಒಂದೇ ರಾತ್ರಿಯಲ್ಲಿ 4.5 ಕೆ.ಜಿ ತೂಕ ಇಳಿಸಿ ಕಂಚು ಗೆದ್ದ ಅಮನ್ ಸೆಹ್ರಾವತ್..!

2024ರ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಭಾರತದ ಕುಸ್ತಿಪಟು ಅಮನ್ ಸೆಹ್ರಾವತ್ ಪುರುಷರ 57 ಕೆಜಿ ತೂಕ ವಿಭಾಗದಲ್ಲಿ ಕಂಚಿನ ಪದಕ ಗೆದ್ದು ಹೊಸ ಇತಿಹಾಸ ನಿರ್ಮಿಸಿದ್ದಾರೆ. ಅಮನ್ ಸೆಹ್ರಾವತ್ ಕೇವಲ 21 ವರ್ಷ 24 ದಿನಗಳ ವಯಸ್ಸಿನಲ್ಲಿ ಒಲಿಂಪಿಕ್ಸ್‌ನಲ್ಲಿ ವೈಯಕ್ತಿಕ ಪದಕ ಗೆದ್ದ ಭಾರತದ ಅತ್ಯಂತ ಕಿರಿಯ ಅಥ್ಲೀಟ್ ಎನಿಸಿಕೊಂಡಿದ್ದಾರೆ. ಈ ಹಿಂದೆ ಈ ದಾಖಲೆ ಪಿವಿ ಸಿಂಧು ಅವರ ಹೆಸರಿನಲ್ಲಿತ್ತು.

ಇನ್ನು ಕಂಚಿನ ಪದಕದ ಪಂದ್ಯದಲ್ಲಿ ಪೋರ್ಟೊ ರಿಕೊ ಕುಸ್ತಿಪಟುವನ್ನು 13-5 ರಿಂದ ಏಕಪಕ್ಷೀಯ ರೀತಿಯಲ್ಲಿ ಸೋಲಿಸಿದ ಅಮನ್, ಚೊಚ್ಚಲ ಒಲಿಂಪಿಕ್ಸ್‌ನಲ್ಲೇ ಪದಕಕ್ಕೆ ಮುತ್ತಿಟ್ಟರು. ಆದರೆ ಅಮನ್‌ಗೆ ಈ ಪದಕ ಸಿಕ್ಕಿದ ಹಿಂದಿನ ಕಥೆಯೇ ಬಲು ರೋಚಕವಾಗಿದೆ. ವಾಸ್ತವವಾಗಿ ಕಂಚಿನ ಪದಕಕ್ಕೂ ಮುನ್ನ ಅಮನ್ ಸೆಹ್ರಾವತ್ ಅವರ ತೂಕವೂ ಕೂಡ ವಿನೇಶ್ ಫೋಗಟ್ ಅವರಂತೆ ಸಾಕಷ್ಟು ಹೆಚ್ಚಾಗಿತ್ತು. 57 ಕೆಜಿ ತೂಕ ವಿಭಾಗದಲ್ಲಿ ಸ್ಪರ್ಧಿಸಿದ್ದ ಅಮನ್, ಸೆಮಿಫೈನಲ್ ಪಂದ್ಯದಲ್ಲಿ ಸೋತಾಗ ಅವರ ತೂಕ 4.5 ಕೆಜಿ ಹೆಚ್ಚಾಗಿತ್ತು. ಅಂದರೆ ಅವರು ಬರೋಬ್ಬರಿ 61.5 ಕೆ.ಜಿ ತೂಗುತ್ತಿದ್ದರು. ಹೀಗಾಗಿ ಅಮನ್‌ಗೆ ಕಂಚಿನ ಪದಕ ಸಿಗುವುದು ಅನುಮಾನವಾಗಿತ್ತು. ಆದರೆ ಕೇವಲ 10 ಗಂಟೆಗಳೊಳಗೆ ಅಮನ್ ಬರೋಬ್ಬರಿ 4.5 ಕೆ.ಜಿ ತೂಕವನ್ನು ಇಳಿಸಿಕೊಂಡರು. ತರಬೇತುದಾರರಾದ ಜಗಮಂದರ್ ಸಿಂಗ್ ಮತ್ತು ವೀರೇಂದ್ರ ದಹಿಯಾ, ಒಟ್ಟು 6 ಸದಸ್ಯರ ಕುಸ್ತಿ ತಂಡ ಅಮನ್ ಅವರ ತೂಕವನ್ನು 57 ಕೆ.ಜಿಗೆ ಇಳಿಸುವಲ್ಲಿ ಯಶಸ್ವಿಯಾಯಿತು.

ಹಾಗಾದರೆ ಕೇವಲ 10 ಗಂಟೆಗಳೊಳಗೆ ಅಮನ್ 4.5 ಕೆ.ಜಿ ತೂಕವನ್ನು ಇಳಿಸಿದ್ದು ಹೇಗೆ ಎಂಬುದನ್ನು ನೋಡುವುದಾದರೆ.. ಮೊದಲಿಗೆ ಅಮನ್ ಸೆಹ್ರಾವತ್‌ಗೆ ಒಂದೂವರೆ ಗಂಟೆ ಮ್ಯಾಟ್ ಸೆಷನ್ ನೀಡಲಾಗಿದೆ. ಇದರಲ್ಲಿ ಅವರನ್ನು ನಿಂತಲ್ಲೇ ಕುಸ್ತಿಯಾಡುವಂತೆ ಸೂಚನೆ ನೀಡಲಾಗಿದೆ.

ಇದಾದ ನಂತರ ಅಮನ್ ಸೆಹ್ರಾವತ್‌ಗೆ ಒಂದು ಗಂಟೆ ಬಿಸಿನೀರಿನ ಸ್ನಾನ ಮಾಡಿಸಲಾಗಿದೆ. ರಾತ್ರಿ 12 ಗಂಟೆಯ ನಂತರ, ಜಿಮ್‌ನಲ್ಲಿ ಒಂದು ಗಂಟೆ ಟ್ರೆಡ್‌ಮಿಲ್ ರನ್ ಮಾಡಿಸಲಾಗಿದೆ. ಆ ನಂತರ 30 ನಿಮಿಷಗಳ ಕಾಲ ವಿಶ್ರಾಂತಿ ನೀಡಲಾಗಿದೆ. ಇದಾದ ಬಳಿಕ ಅಮನ್‌ಗೆ ಮಸಾಜ್, ಲಘು ಜಾಗಿಂಗ್ ಮತ್ತು 15 ನಿಮಿಷಗಳ ಓಟದ ಸೆಷನ್ ಮಾಡಿಸಿ ಅವರ ತೂಕವನ್ನು ಇಳಿಸಲಾಗಿದೆ. ಒಂದು ರಾತ್ರಿಯಲ್ಲಿ ಇಷ್ಟೆಲ್ಲ ಕಷ್ಟಪಟ್ಟ ಅಮನ್ ಅವರ ತೂಕ ಬೆಳಗಿನ ಜಾವ 4.30ರ ಹೊತ್ತಿಗೆ 56.9 ಕೆಜಿ ಅಂದರೆ ನಿಗದಿತ ಮಿತಿಗಿಂತ 100 ಗ್ರಾಂ ಕಡಿಮೆಯಾಗಿದೆ. ಅಮನ್ ಸೆಹ್ರಾವತ್ ಅವರು 10 ಗಂಟೆಗಳಲ್ಲಿ 4.5 ಕೆಜಿ ತೂಕವನ್ನು ಕಡಿಮೆ ಮಾಡಿರುವುದು ಅಚ್ಚರಿಯ ಸಂಗತಿಯಾಗಿದೆ.

ವಿಚಾರಣೆಗೆ ಸಮಯ ನಿಗದಿಪಡಿಸಿದ ಸಿಎಎಸ್



ವಿನೇಶ್ ಫೋಗಟ್ ಅನರ್ಹ ಪ್ರಕರಣ

ಭಾರತದ ಕುಸ್ತಿಪಟು ವಿನೇಶ್ ಫೋಗಟ್ ಅವರನ್ನು ಒಲಿಂಪಿಕ್ ಫೈನಲ್‌ನಿಂದ ಅನರ್ಹಗೊಳಿಸಿರುವುದರ ಪ್ರಕರಣಕ್ಕೆ ಸಂಬಂಧಿಸಿದಂತೆ ಇಂದು ರಾತ್ರಿ ಅಂದರೆ ಶನಿವಾರ ರಾತ್ರಿಯೊಳಗೆ ಕ್ರೀಡಾ ಮಧ್ಯಸ್ಥಿಕೆ ನ್ಯಾಯಾಲಯ ತೀರ್ಪು ನೀಡಲಿದೆ. ಪ್ಯಾರಿಸ್‌ನಿಂದ ಬಂದಿರುವ ವರದಿಗಳ ಪ್ರಕಾರ, ಈ ಪ್ರಕರಣದ ವಿಚಾರಣೆಯು ಭಾರತೀಯ ಕಾಲಮಾನ ರಾತ್ರಿ 9.30 ರಿಂದ 10 ರವರೆಗೆ ನಡೆಯಲಿದೆ ಎಂದು ಸಿಎಎಸ್ ತಿಳಿಸಿದೆ. ಸಿಎಎಸ್‌ನ ಈ ನಿರ್ಧಾರವು ವಿನೇಶ್ ಫೋಗಟ್ ಒಲಿಂಪಿಕ್ ಪದಕವನ್ನು ಪಡೆಯುತ್ತಾರೆಯೇ ಅಥವಾ ಇಲ್ಲವೇ ಎಂಬುದನ್ನು ನಿರ್ಧರಿಸುತ್ತದೆ. ಸೆಮಿಫೈನಲ್ ಪಂದ್ಯದವರೆಗೂ ವಿನೇಶ್ ಅವರ ತೂಕ ನಿಯಮಾನುಸಾರ ಇದ್ದುದರಿಂದ ಬೆಳ್ಳಿ ಪದಕ ನೀಡಬೇಕೆಂದು ವಿನೇಶ್ ಫೋಗಟ್ ಅವರ ಮನವಿಯಾಗಿದೆ. ಇದೀಗ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಕ್ರೀಡಾ ಮಧ್ಯಸ್ಥಿಕೆ ನ್ಯಾಯಾಲಯ ಯಾವ ತೀರ್ಪು ನೀಡುತ್ತದೆ ಎಂಬುದರ ಮೇಲೆ ಎಲ್ಲರ ದೃಷ್ಟಿ ನೆಟ್ಟಿದೆ.

ವಿನೇಶ್ ಮನವಿಯಲ್ಲಿರುವುದೇನು

ವಿನೇಶ್ ಫೋಗಟ್ ಅವರು ಸೆಮಿಫೈನಲ್‌ನಲ್ಲಿ ಜಯಗಳಿಸುವವರೆಗೆ ಅವರ ತೂಕವು ನಿಗದಿತ ಮಿತಿಯಲ್ಲಿತ್ತು. ಆದ್ದರಿಂದ ವಿನೇಶ್ ಅವರಿಗೆ ಕನಿಷ್ಠ ಬೆಳ್ಳಿ ಪದಕವನ್ನು ನೀಡಬೇಕು ಎಂದು ಪ್ರಸಿದ್ಧ ಹಿರಿಯ ವಕೀಲರಾದ ಹರೀಶ್ ಸಾಳ್ವೆ ಮತ್ತು ವಿದುಷ್ಪತ್ ಸಿಂಘಾನಿಯಾ ಅವರು ಸಿಎಎಸ್‌ನಲ್ಲಿ ವಿನೇಶ್ ಪರ ವಾದ